ಶ್ರೀ ಎಂ. ಸಿ. ಬಸಪ್ಪ.—ಮಾನ್ಯ ಸಚಿವರು ನಾನು ಹೇಳಿದ್ದನ್ನು ತಪ್ಪು ತಿಳಿದುಕೊಂಡಿದ್ದಾರೆ. ತಮಗೆ ಜಿಲ್ಲಾಧಿಕಾರಿಗಳು ಏನು ವರದಿಯನ್ನು ಒದಗಿಸಿದ್ದಾರೋ ಅದಕ್ಕಿಂತ ಪರಿಸ್ಥಿತಿ ಮಿತಿ ಮೀರಿದೆ. ಅಲ್ಲಿ ಲೇಬರ ಗೆ ಕೆಲಸ ಅವೇಲಬಲ್ ಇದೆಯೆಂದು ತಾವು ಹೇಳಿದ್ದೀರಿ. ಜಿಲ್ಲಾಧಿಕಾರಿಗಳ ವರದಿಯ ಪ್ರಕಾರ Labour is av.ilable. There is a Report which says "As the Agricultural activ ty is almost at a s'and still, the agricultural labour problem has become more tense and at least 10,000 labourers need employment." ೧೨ ಸಾವಿರ ಜನಕ್ಕೆ ಕೆಲಸ ಕೊಡಲು ತಾವು ಇಲಾಖೆಗಳಿಗೆ ಹಣವನ್ನು ಕೊಟ್ಟಿದ್ದೀರಾ ? ಸಾಯಿಲ್‌ಕನ್ಸರ್ವೇಷನ್ ಕೆಲಸ ಮೇಜರ್ ಇರ್ರಿಗೇಷನ್ ಕೆಲಸವನ್ನು ಪ್ರಾರಂಭ ಮಾಡಿ ಎಂದು ಹೇಳಿದ್ದೀರಿ. ಆದರೆ ವಸ್ತುವಾಂಶವನ್ನು ನೋಡಿದರೆ ಜನರು ಕೆಲಸ ಇಲ್ಲ ಎಂದು ಹೇಳುತ್ತಿದ್ದಾರೆ. "During 1980–81 1?6 village were declared as scarcity affected areas." ಎಂದು ಹೇಳಿದ್ದೀರಿ. ಆದರೆ ಕಳೆದ ಎರಡೂವರೆ ತಿಂಗಳಿಂದ ಮಳೆ ಬಾರದೆ ನಿಂತಿಗತಕ್ಕ ಬೆಳೆಯೂ ನಾಶವಾಗಿದೆ ಜಿಲ್ಲಾಧಿಕಾರಿಗಳಿಗೆ ತಾವು ಅಲ್ಲಿಯ ಸಿಚುಯೇಷನನ್ನು ವಾಚ್ ಮಾಡಲು ತಿಳಿಸಿದ್ದೀರಿ. ಇಲ್ಲಿ ಅವರು ವಾಚ್ ಮಾಡುವುದು ಏನು ಇದೆ ? I want to know from the Government as to why they have not declared this area as scarcity hit area. ರೆವಿನ್ಯೂ ಆಥಾರಿಟೀಸ್ ಕಂದಾಯವನ್ನು ವಸೂಲಿ ಮಾಡುವುದು, ಸಾಲವನ್ನು ವಸೂಲಿ ಮಾಡುವುದನ್ನು ನಡೆಸುತ್ತಿದ್ದಾರೆ. ಮಳೆ ಇಲ್ಲ, ಜಾನವಾರುಗಳಿಗೆ ಹುಲ್ಲು ಇಲ್ಲ, ಆಹಾರ ಇಲ್ಲ ಎಂದು ಜನರು ಕಂಗಾಲಾಗಿರುವಾಗ ರೈತರ ಮನೆಗಳನ್ನು ನಿಮ್ಮ ಅಧಿಕಾರಿಗಳು ಜಪ್ತಿ ಮಾಡುತ್ತಿದ್ದಾರೆ. ಇಂಥ ಒಂದು ಕಿರುಕುಳ ನಿಮ್ಮ ಅಧಿಕಾರಿಗಳಿಂದ ನಡೆಯುತ್ತಿದೆ. ತಾವು ಈ ಏರಿಯಾವನ್ನು ಸ್ಕೇರ್ಸಿಟಿ ಏರಿಯಾ ಎಂದು ಏಕೆ ಡಿಕ್ಲೇರ್ ಮಾಡಿಲ್ಲ ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ. ಕಳೆದ ವರ್ಷ ಈ ಏರಿಯಾದಲ್ಲಿ ೧೩೨ ಹಳ್ಳಿಗಳನ್ನು ತಾವು ಡಿಕ್ಲೇರ್ ಮಾಡಿದ್ದು ಈ ವರ್ಷ ಕಳೆದ ವರ್ಷಕ್ಕಿಂತ ಹೆಚ್ಚು ಭೀಕರ ಪರಿಸ್ಥಿತಿ ಇರುವಾಗ ಈ ಪ್ರದೇಶವನ್ನು ಸ್ಕೇರ್ಸಿಟಿ ಏರಿಯಾ ಎಂದು ಏಕೆ ಮಾಡಿಲ್ಲ ಎಂದು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಯಾವಾಗ ಆ ಪ್ರದೇಶವನ್ನು ಸ್ಕೇರ್ಸಿಟಿ ಏರಿಯಾ ಎಂದು ಡಿಕ್ಲೇರ್ ಮಾಡುತ್ತೀರಿ ? ಈ ವಿಷಯವನ್ನು ನಮಗೆ ತಿಳಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಮೈಸೂರು ಜಿಲ್ಲೆಯಲ್ಲಿ ಕುಡಿಯುವ ನೀರು ಇಲ್ಲದ ಕಡೆಗಳಲ್ಲಿ ಬೋರ್ ವೆಲ್‌ಗಳನ್ನು ತೆಗೆಸಲು ೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ೨ ಲಕ್ಷ ರೂಪಾಯಿಗಳಲ್ಲಿ ಒಂದು ತಾಲ್ಲೂಕಿಗೆ ಎಷ್ಟು ಹಣ ಬರಬಹುದು ? ನನ್ನ ಜಿಲ್ಲೆಯಲ್ಲಿ ೧೧ ತಾಲ್ಲೂಕುಗಳು ಇವೆ. ಒಂದೊಂದು ಬಾವಿಯನ್ನು ತೆಗೆಯುವುದಕ್ಕೆ ನಮಗೆ ಸುಮಾರು ೨೦ ಸಾವಿರ ರೂಪಾಯಿಗಳಾದರೂ ಬೇಕಾಗುತ್ತದೆ. ಆದ್ದರಿಂದ ನೀವು ಕೊಟ್ಟಿರುವ ಎರಡು ಲಕ್ಷ ರೂಪಾಯಿಗಳಲ್ಲಿ ಒಂದೊಂದು ತಾಲ್ಲೂಕಿಗೆ ಒಂದೊಂದು ಬಾವಿಯನ್ನು ತೆಗೆಸುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಇಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಎರಡು ತಿಂಗಳುಗಳಿಂದ ಅಲ್ಲಿ ಮಳೆಯಿಲ್ಲ, ರೈತರು ನೀರಿಗಾಗಿ ಸುಮಾರು ೮-೧೦ ಕಿಲೋಮೀಟರ್ ದೂರದವರೆಗೆ ಹೋಗಬೇಕಾಗಿದೆ. ಇದು ಜನರಿಗೆ ಕುಡಿಯುವ ನೀರಿನ ಸಮಸ್ಯೆಯಾದರೆ. ದನಗಳಿಗೆ ಫಾಡರ್ ಸಹ ಸಿಕ್ಕುತ್ತಿಲ್ಲ. ರೈತರು ತಮ್ಮಲ್ಲಿ ಜಾನುವಾರುಗಳನ್ನು ಮಾರುತ್ತಿದ್ದಾರೆ. ಮತ್ತೆ ತಮ್ಮ ಉತ್ತರದಲ್ಲಿ ಸೊಸೈಟಿಯಲ್ಲಿ ಆಹಾರಧಾನ್ಯಗಳು ದೊರೆಯುತ್ತಿವೆ ಎನ್ನುವ ಮಾತನ್ನು ಹೇಳಿದ್ದೀರಿ. ಆದರೆ ಸೊಸೈಟಿಯವರು ರೈತರಿಗೆ ರಾಗಿ ಕೊಡುತ್ತಿಲ್ಲ, ಜೋಳ ಕೊಡುತ್ತಿಲ್ಲ; ಅಕ್ಕಿಯನ್ನೂ ಸಹ ಕೊಡುತ್ತಿಲ್ಲ. ಸಪ್ಲೈ ಏಕೆ ಇಲ್ಲ ಎಂದು ಕೇಳಿದರೆ ಅವರೂ ತಮ್ಮ ಕಡೆ ತೋರಿಸುತ್ತಿದ್ದಾರೆ. ಅಲ್ಪಸ್ವಲ್ಪ ಅಕ್ಕಿಯನ್ನು ಕೊಟ್ಟರೆ ಅದರ ಕ್ವಾಲಿಟಿ ಹೇಳುವ ರೀತಿಲ್ಲಿಲ್ಲ. ಆದ್ದರಿಂದ ತಾವು ತಮ್ಮ ವರದಿಯಲ್ಲಿ ಕೊಟ್ಟಿರತಕ್ಕ ವಾಸ್ತವಾಂಶ ಯಾವ ರೀತಿಯಿದೆ ಎಂದು ತಾವೇ ಯೋಚನೆ ಮಾಡಬೇಕು. Finally they have recommended considering the

above facts the entire taluka may kindly be declared as scarcity hit area. And the Taluka President has toured the Taluka.

ಎಲ್ಲೆಲ್ಲಿ ಮಳೆಯಾಗಿಲ್ಲ. ಅಲ್ಲಿ ಬೆಳೆಯಾಗಿಲ್ಲ. ತಾವು ಎಲ್ಲಾ ವಿಚಾರಗಳನ್ನು ಸ್ಟಡಿ ಮಾಡಿ ವರದಿಯನ್ನು ಕೊಡಬೇಕು. ವಾಸ್ತವಾಂಶ ಏನು ಇದೆ ಅದನ್ನು ತಾವು ಒಪ್ಪಿಕೊಳ್ಳಬೇಕು. ತಾವು ಈ ದಿಶೆಯಲ್ಲಿ ಎಲ್ಲಾ ಇಲಾಖೆಗಳು ಕೆಲಸಮಾಡಬೇಕು ಎಂದು ಹೇಳಿ ಎಲ್ಲಾ ಇಲಾಖೆಗಳಿಗೂ ಹಣವನ್ನು ಒದಗಿಸಿ ಕೊಟ್ಟಿದ್ದೀರಿ, ಮತ್ತು ಅವರು ಕೆಲಸ ಮಾಡುತ್ತಾರೆಂದು ಹೇಳುತ್ತೀರಿ, ಇದು ಸರಿಯಾದುದು ಅಲ್ಲ.

೪-೧೦ ಪಿ. ಎಂ.

ನಾನು ಮಾನ್ಯ ರೆವೆನ್ಯೂ ಮಿನಿಸ್ಟರ್‌ರವರಿಗೆ ಹೇಳುತ್ತಿದ್ದೇನೆ, ನಾನು ಹೇಳುವುದು ಅವರ ಕಿವಿಯ ಮೇಲೆ ಬೀಳುವುದಿಲ್ಲ. ಈ ಎನ್. ಆರ್. ಇ.ಪಿ ವರ್ಕ್ಸ್ ಬಗ್ಗೆ ಹೇಳುತ್ತಿದ್ದಾರೆ, ಅದು ಸ್ಕೇರ್ಸಿಟಿ ವರ್ಕ್ ಆಗುವುದಿಲ್ಲ. ಅಲ್ಲಿ ಬಿಲ್ಡಿಂಗ್ ಕೆಲಸ ತೆಗೆದುಕೊಳ್ಳಬೇಕು. ೬೦ ಪರ್ಸೆಂಟ್ ಮೇಲೆ ಲೇಬರ್ ಕೊಡಬಾರದು, ೪೦ ಪರ್ಸೆಂಟ್ ಮೆಟೀರಿಯಲ್‌ಗೆ ಖರ್ಚಾಗಬಾರದು ಎನ್ನುವ ಕಂಡಿಷನ್ ಮೇಲೆ ತಾವು ಈ ಎನ್. ಆರ್. ಇಪಿಯಲ್ಲಿ ೮ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅದರಲ್ಲಿ ಆ ತಾಲ್ಲೂಕುಗಳ ಬರಗಾಲ ಪರಿಸ್ಥಿತಿಯನ್ನು ಮೀಟ್ ಮಾಡಿ ಎಂದರೆ ಅದು ಸಾಧ್ಯವಿಲ್ಲ. You must provide at least 10 lakhs rupees for labour, food and fodder. ಅನೇಕ ಸ್ಥಳಗಳಲ್ಲಿ ನೀವು ಫಾಡರ್ ಡಿಪೋಗಳನ್ನು ಓಪನ್ ಮಾಡಬೇಕಾಗುತ್ತದೆ. ಈ ಫುಡ್‌ನಲ್ಲಿ ಈಗ ರೈಸನ್ನು ಮಾತ್ರ ಸಪ್ಲೈ ಮಾಡುತ್ತಿದ್ದಾರೆ. ಇದು ಕರೆಕ್ಟ್ ಅಲ್ಲ. ಅಲ್ಲಿ ಲೋಕಲ್ ಕನ್‌ಸಂಪ್‌ಷನ್ ಏನಿದೆ ರೈಸ್, ರಾಗಿ, ಜೋಳ ಗೋಧಿ ಇವೆಲ್ಲವನ್ನೂ ಸಪ್ಲೈಮಾಡ ಬೇಕು, ಈ ಎನ್.ಆರ್.ಇ.ಪಿ ಯಲ್ಲಿ ರಸ್ತೆ ಕೆಲಸವನ್ನು ತೆಗೆದುಕೊಳ್ಳಬೇಡಿ ಎಂದು ಹೇಳುತ್ತಿದ್ದಾರೆ. ಈ ರಸ್ತೆ ಕೆಲಸವನ್ನು ಅದರಲ್ಲಿ ತೆಗೆದುಕೊಳ್ಳದಿದ್ದರೆ ಸಾರ್ವಜನಿಕವಾಗಿ ಈ ಲೇಬರನ್ನು ಪ್ರೊವೈಡ್ ಮಾಡತಕ್ಕಂಥಾದ್ದಕ್ಕೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ. 'Deputy Commissioners are asked to make some devaitions. ಎಂದು ನಾವು ಹೇಳಿದ್ದೇವೆ. ನೀವು ಅವರಿಗೆ ಕೊಟ್ಟಿರತಕ್ಕಂಥ ಇನ್‌ಸ್ಟ್ರಕ್ಷನ್ಸ್ ಪ್ರಕಾರವಾಗಿ ಎನ್.ಆರ್.ಇ.ಪಿ ಫಂಡ್ಸ್ ನಿಂದ ಹಣ ಖರ್ಚು ಮಾಡಿದರೆ ಅಲ್ಲಿ ಅಸೆಟ್ಸ್ ಕ್ರಿಯೇಟ್ ಆಗಬೇಕು. ಬಿಲ್ಡಿಂಗ್ ಕಟ್ಟಿದರೆ ಅಲ್ಲಿ ಅಸೆಟ್ಸ್ ಕ್ರಿಯೇಟ್ ಆಗುತ್ತದೆ. ರಸ್ತೆಯನ್ನು ಮಾಡಿದರೆ ಅಸೆಟ್ಸ್ ಆಗುವುದಿಲ್ಲ, Can ynu provide labour for all the people by only taking up building works ? That is the Point. ಆದ್ದರಿಂದ ಪ್ರತಿಯೊಂದು ತಾಲ್ಲೂಕಿಗೂ ಸಾಕಷ್ಟು ಹಣವನ್ನು ಕೊಡಬೇಕಾಗುತ್ತದೆ. ಈ ಫುಡ್ ಡಿಪೋಗಳಲ್ಲಿ ಕೋರ್ಸ್ ಗ್ರೈನ್ಸ್, ರಾಗಿ, ಜವಾರ್ ಇವುಗಳನ್ನು ಸಪ್ಲೈ ಮಾಡಬೇಕಾಗುತ್ತದೆ, ಹಾಗೆಯೇ ಫಾಡರ್ ಡಿಪೋಗಳನ್ನು ಓಪನ್ ಮಾಡಬೇಕಾಗುತ್ತದೆ. ಸರ್ಕಾರ ಈಗ ಮೊದಲನೆಯದಾಗಿ ಮಾಡಬೇಕಾದ ಕೆಲಸ ಎಂದರೆ, ಯಾವಯಾವ ಹಳ್ಳಿಗಳಲ್ಲಿ ಕಳೆದ ೩ ತಿಂಗಳಿನಿಂದ ಮಳೆ ಬಿದ್ದಿಲ್ಲ ಆ ಹಳ್ಳಿಗಳನ್ನು ಸ್ಕೇರ್ಸಿಟಿ ಹಿಟ್ ಏರಿಯಾ ಎಂದು ಡಿಕ್ಲೇರ್ ಮಾಡಬೇಕು ಎಂದು ಸಲಹೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಈ ವಿಚಾರದ ಬಗ್ಗೆ ಮಾತನಾಡುವುದಕ್ಕೆ ನಮಗೆಲ್ಲರಿಗೂ ನೀವು ಅವಕಾಶ ಕೊಡಬೇಕು.

ಉಪಾಧ್ಯಕ್ಷರು.—ನಾನು ಎಲ್ಲರಿಗೂ ಅವಕಾಶ ಕೊಡುತ್ತೇನೆ. ಈಗ ಮಾನ್ಯ ಬೊಮ್ಮಾಯಿಯವರು ಮಾತನಾಡಲಿ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ, ಜಿಲ್ಲಾವಾರು ರೀತಿಯಲ್ಲಿ ಮಾನ್ಯ ಸದಸ್ಯರುಗಳಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು.

ಉಪಾಧ್ಯಕ್ಷರು.—ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ, ನಾನು ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ —ಸ್ವಾಮಿ, ತಾವು ಮೊದಲು ನನ್ನನ್ನು ಕರೆದಿದ್ದೀರಿ. ನಾನು ಮೊದಲು ಮಾತನಾಡಿ ಮುಗಿಸಿ ಬಿಡುತ್ತೇನೆ. ಮಾನ್ಯ ಕಂದಾಯ ಮಂತ್ರಿಯವರು ರಾಜ್ಯದಲ್ಲಿರುವ

ಅಭಾವ ಪರಿಸ್ಥಿತಿಯ ಬಗ್ಗೆ ಸುಧೀರ್ಘವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದನ್ನು ನಾವು ಓದಿದಾಗ, ಈ ಸರ್ಕಾರದವರಲ್ಲಿ ಮಾಹಿತಿಯ ಅಭಾವ ಇದೆ, ಬುದ್ಧಿಯ ಅಭಾವ ಇದೆಯೆಂದು ಹೇಳಬೇಕಾಗುತ್ತದೆ. ಸ್ವಾಮಿ, ಇದರಲ್ಲಿರತಕ್ಕಂಥ ಅನೇಕ ವಿಚಾರಗಳು ಹೋದ ವರ್ಷಕ್ಕೆ ಸಂಬಂಧಪಟ್ಟಿವೆ. ಅದು ಈ ವರ್ಷದ್ದು ಅಲ್ಲ, ಇದು ಔಟ್‌ಡೇಟೆಡ್ ಇನ್‌ಫರ್‌ಮೇಷನ್ ಆಗಿದೆ. ಅದನ್ನು ಜಿಲ್ಲಾಧಿಕಾರಿಗಳೇ ಕಳಿಸಿರಲಿ ಅಥವಾ ಯಾರೇ ಕಳಿಸಿರಲಿ ಅದು ಇವತ್ತಿನದಲ್ಲ ಹಿಂದಿನ ವರ್ಷದ್ದು. ಮಾನ್ಯ ಮಂತ್ರಿಯವರು ಹೋದ ವರ್ಷದ ಮಾಹಿತಿಯನ್ನು ಈಗ ಕೊಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ನಾವು ಡಿವಿಜನಲ್ ಕಮೀಷನರ್ಸ್ ಕಾನ್‌ಫರೆನ್ಸ್ ಮಾಡಿ ಅವರಿಂದ ಈ ವರ್ಷದ ಎಲ್ಲಾ ಮಾಹಿತಿಯನ್ನು ತರಿಸಿಕೊಂಡು ಅದನ್ನು ಕೊಟ್ಟರೆ ಅದನ್ನು ಹೋದ ವರ್ಷದ್ದು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದಕ್ಕೆ ನಾನೇನು ಮಾಡಲಿ.

ಶ್ರೀ ಎಸ್ ಆರ್. ಬೊಮ್ಮಾಯಿ.—ಸ್ವಾಮಿ, ಹೋದವರ್ಷ ಈ ಬಗ್ಗೆ ಚರ್ಚೆಯಾದಂತಹ ಕಾಲದಲ್ಲಿ ಕೊಟ್ಟಂತಹ ಮಾಹಿತಿಯೇ ಇವತ್ತು ಕೊಟ್ಟಿರತಕ್ಕಂಥಾದರಲ್ಲಿ ಇದೆ. ಇವತ್ತು ನಾನು ಧಾರವಾಡದ ಜಿಲ್ಲೆಯ ಕುಡಿಯುವ ನೀರಿನ ಪರಿಸ್ಥಿತಿಯ ಬಗ್ಗೆ ಹೇಳುತ್ತೇನೆ ಹುಬ್ಬಳ್ಳಿ ತಾಲ್ಲೂಕಿನ ಹಳಿಯಾಳದ ಬಗ್ಗೆ ಕೂಡ ನಾನು ಹೇಳುತ್ತೇನೆ. ಸರ್ಕಾರದವರು ಹಣವನ್ನು ಖರ್ಚು ಮಾಡಿ ಟ್ಯಾಂಕರ್ಸ್‌ನಲ್ಲಿ ಕುಡಿಯುವ ನೀರನ್ನು ಕೊಡುತ್ತಿದ್ದಾರೆ. ಆದರೂ ಅವರಿಗೆ ಸಾಕಷ್ಟು ನೀರು ದೊರಕುತ್ತಾ ಇಲ್ಲ. ಹುಬ್ಬಳ್ಳಿ ತಾಲ್ಲೂಕಿನಲ್ಲಿ ೪ ಹಳ್ಳಿಗಳಲ್ಲಿ ಕೊಡುತ್ತಿದ್ದಾರೆ. ಮಾನ್ಯ ಮಂತ್ರಿಯವರು ಒಂದು ಹಳ್ಳಿ ಎಂದು ಹೇಳುತ್ತಿದ್ದಾರೆ. ಪ್ರತಿದಿವಸ ಹುಬ್ಬಳ್ಳಿಯಲ್ಲಿ ಟ್ಯಾಂಕರ್‌ನಲ್ಲಿ ನೀರನ್ನು ತಂದು ಅದನ್ನು ಕಾರ್ಡ್‌ಮೇಲೆ ಹಂಚುತ್ತಿದ್ದಾರೆ. ಇದೇ ರೀತಿ ಕುಂದಗೋಳದಲ್ಲೂ ಕೊಡುತ್ತಿದ್ದಾರೆ. ಹೀಗೆ ೫ ಹಳ್ಳಿಗಳಲ್ಲಿ ಕೊಡುತ್ತಿದ್ದಾರೆ, ನಾನು ಇದನ್ನೆಲ್ಲಾ ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನಿಮ್ಮ ಮಾಹಿತಿ ಏನಿದೆ ಅದು ಸರಿಯಿಲ್ಲ ಎನ್ನುವುದಕ್ಕಾಗಿ ಇದನ್ನು ಹೇಳುತ್ತಿದ್ದೇನೆ. ಅಲ್ಲಿಯ ಗಂಭೀರವಾದ ಪರಿಸ್ಥಿತಿಯನ್ನು ತಮ್ಮ ಅವಗಾಹನೆಗೆ ತರುತ್ತಿದ್ದೇನೆ. ಈಗ ಧಾರವಾಡ ಜಿಲ್ಲೆಯ ರೈನ್‌ಫಾಲ್ ಬಗ್ಗೆ ಹೇಳುತ್ತೇನೆ. It is stated that if rains are not received in the next two weeks and if the situation becomes worse, then scarcity condition may occur in five or six talukas. ಈಗ ಧಾರವಾಡ ಜಿಲ್ಲೆಯಲ್ಲಿ ಸುಮಾರು ೮–೯ ತಾಲ್ಲೂಕುಗಳಲ್ಲಿ ಈ ೯ ತಿಂಗಳಲ್ಲಿ ಜೋಳವನ್ನು ಬಿತ್ತಿದ್ದಾರೆ. ಅಲ್ಲದೇ ಹೆಚ್ಚಾಗಿ ಅಲ್ಲಿ ಚಿಲ್ಲೀಸ್ ಬೆಳೆಯುತ್ತಿದ್ದಾರೆ. ಈ ಮೆಣಸಿನಕಾಯಿಯನ್ನು ಬೆಳೆಯುತಕ್ಕಂಥಾದ್ದು ತಮಗೆಲ್ಲಾ ಗೊತ್ತಿದೆ. ಅಲ್ಲಿ ೭–೮ ಕ್ವಿಂಟಾಲ್‌ವರೆಗೆ ಬೆಳೆಯುತ್ತಿದ್ದಾರೆ. ಒಂದು ಎಕರೆಗೆ ಅದನ್ನು ಬಿತ್ತಬೇಕಾದರೆ ೧೦೦೦ ರೂಪಾಯಿಗಳಿಂದ ೧೫೦೦ ರೂಪಾಯಿಗಳವರೆಗೆ ಖರ್ಚು ಮಾಡುತ್ತಾರೆ. ಭೂಮಿಗೆ ಗೊಬ್ಬರ ಹಾಕಿ ಸರಿಯಾಗಿ ಹದ ಮಾಡಿ ಮೆಣಸಿನಕಾಯಿ ಗಿಡವನ್ನು ಹಾಕಿದರೆ ಅದೆಲ್ಲಾ ಈಗ ಒಣಗಿ ಹೋಗಿದೆ ತಾವು ಅಲ್ಲಿಗೆ ಪ್ರವಾಸ ಮಾಡಿದರೆ ಗೊತ್ತಾಗುತ್ತದೆ. ಈಗ ಕೆಲವು ಕಡೆ ಅಲ್ಲಿ ನಿನ್ನೆ ಅಥವಾ ಮೊನ್ನೆ ಮಳೆಯಾಗಿದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಅಲ್ಲಿ ಕೆಲವು ತಾಲ್ಲೂಕುಗಳಿಗೆ ಮಳೆ ಆಗಿದೆ. ಇನ್ನು ಕೆಲವು ತಾಲ್ಲೂಕುಗಳಿಗೆ ಮಳೆಯಾಗಿಲ್ಲ, ಇದು ಹೇಗಾಗಿದೆ ಎಂದರೆ ಸರ್ಕಾರದವರು ಕೆಲವು ಕಡೆಗಳಿಗೆ ಬೇಕಾದಷ್ಟು ಸೌಕರ್ಯಗಳನ್ನು ಕೊಟ್ಟಿದ್ದಾರೆ. ಇನ್ನು ಕೆಲವು ಕಡೆಗಳಿಗೆ ಯಾವ ಸೌಕರ್ಯವನ್ನೂ ಕೊಟ್ಟಿಲ್ಲ. ಅದೇ ರೀತಿಯಲ್ಲಿ ಈ ಮಳೆ ಕೂಡ ಕೆಲವು ತಾಲ್ಲೂಕುಗಳಲ್ಲಿ ಚೆನ್ನಾಗಿ ಆಗಿದೆ, ಕೆಲವು ತಾಲ್ಲೂಕುಗಳಲ್ಲಿ ಇಲ್ಲವೇ ಇಲ್ಲ. ಅಲ್ಲಿ ಮುಂಗಾರು ಬಿತ್ತನೆಗೆ ವೈಟ್ ಮಾಡತಕ್ಕಂಥ ರೈತರು ಇವತ್ತು ಬಹಳ ಕಷ್ಟದಲ್ಲಿದ್ದಾರೆ. ಅಲ್ಲೆಲ್ಲಾ ಜೋಳ ಒಣಗಿ ಹೋಗಿದೆ, ಮೆಣಸಿನಕಾಯಿ ಒಣಗಿ ಹೋಗಿದೆ, ಶೇಂಗಾ ಬೆಳೆ ಕೂಡ ಒಣಗಿ ಹೋಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಯವರು ಹೇಳಿಕೆಯಲ್ಲಿ ಏನೂ ಹೇಳಿಲ್ಲ. ಅವರಿಗೆ ನೀವು ಯಾವ ರೀತಿಯಲ್ಲಿ ಸಹಾಯ ಮಾಡುತ್ತೀರಿ? ಅವರು ಮತ್ತೆ ಮಳೆ ಬಿದ್ದ ಮೇಲೆ ಬಿತ್ತನೆ ಮಾಡಬೇಕಾದರೆ ಅವರಿಗೆ ಏನಾದರೂ ಕನ್‌ಸಿಷನ್ ಕೊಡುತ್ತೀರಾ? ಇದನ್ನು ನೀವು ಹೇಳಿಲ್ಲ. ಎಲ್ಲೆಲ್ಲಿ ಮಳೆ ಹೋಗಿ ಬೆಳೆಯೆಲ್ಲಾ ನಾಶವಾಗಿದೆ ಅಲ್ಲಿ ಯಾವ್ಯಾವ ರಿಲೀಫ್ ಅಥವಾ ರಿಯಾಯಿತಿ ಕೊಡುತ್ತೀರಿ ಎನ್ನುವ ಬಗ್ಗೆ ನಿಮ್ಮ ಹೇಳಿಕೆಯಲ್ಲಿ ಏನನ್ನೂ ಹೇಳಿಲ್ಲ. ನಿಮ್ಮ ಡೆಪ್ಯುಟಿ ಕಮಿಷನರ್‌ರವರಿಂದ ಕರೆಕ್ಟ್ ರಿಪೋರ್ಟ್ ತೆಗೆದುಕೊಳ್ಳಿ. ಯಾವ್ಯಾವ ರೈತರಿಗೆ ತೊಂದರೆಯಾಗಿದೆ ಅವರಿಗೆ ಕೊಡತಕ್ಕಂಥ ರಿಲೀಫ್ಸ್ ಏನು? ನಿಮ್ಮ ಸ್ಟೇಟ್‌ಮೆಂಟ್‌ನಲ್ಲಿ ಮುಂಗಾರು ಬಂದಿದೆ, ಇಷ್ಟು ಬೆಳೆಯಾಗಿದೆ ಎಂದು ಇಷ್ಟನ್ನು ಮಾತ್ರ ಹೇಳಿದ್ದೀರಿ. ಅಲ್ಲೆಲ್ಲಾ ಬೆಳೆ ನಾಶವಾಗಿದೆ. ಆ ರೈತರಿಗೆ

ಫ್ರೀ ಸೀಡ್ಸ್ ಕೊಡತಕ್ಕಂಥ ಬಗ್ಗೆ ನೀವು ಹೇಳಿದಿ ೀರಾ? ಇಲ್ಲ. ೧೦೦೦ ರೂಪಾಯಿಗಳನ್ನು ಖರ್ಚು ಮಾಡಿದ ರೈತರಿಗೆಲ್ಲಾ ಇವತ್ತು ಬೆಳೆ ನಾಶವಾಗಿದೆ. ಅವರು ಮತ್ತೆ ಬಿತ್ತಲಿಕ್ಕೆ ಏನು ಅನುಕೂಲ ಮಾಡಿಕೊಡುತ್ತೀರಿ? ಸೊಸೈಟಿಗಳಿಂದ ಫರ್ಟಿಲೈಸರ್ ತೆಗೆದುಕೊಂಡು ಬಂದು ಈಗಾಗಲೇ ಹಾಕಿಬಿಟ್ಟಿದ್ದಾರೆ. ಅವರಿಗೆ ಪುನಃ ಸೊಸೈಟಿಯಲ್ಲಿ ಫರ್ಟಿಲೈಸರ್ ಸಿಕ್ಕುವುದಿಲ್ಲ. ಅವರಿಗೆ ಏನು ಮಾಡುತ್ತೀರಿ? ಈಗ ಮಳೆ ಬಿದ್ದ ಮೇಲೆ ಬೀಜಬಿತ್ತಬೇಕಲ್ಲ ಅವರಿಗೆ ಏನು ಮಾಡುತ್ತೀರಿ? ಇದುವರೆವಿಗೂ ಎಲ್ಲಿಯೂ ಕೂಡ ಒಂದು ಹನಿ ಮಳೆಯಾಗಿಲ್ಲ ಮತ್ತೆ ಸರ್ಕಾರದವರು ಸ್ಕೇರ್‌ಸಿಟಿ ವರ್ಕ್ಸ್ ಕೂಡ ತೆಗೆದುಕೊಳ್ಳುತ್ತಾ ಇಲ್ಲ. ರೈತರು ಜೀವನ ಮಾಡುವುದು ಬಹಳ ಕಷ್ಟವಾಗಿದೆ. ಮತ್ತೆ ಅವರಿಗೆ ಫ್ರೀ ಸೀಡ್ಸ್ ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು, ರೈತರ ಬೆಳೆಗೆ ಬೇಕಾದಂತಹ ಗೊಬ್ಬರಗಳನ್ನು ಸೊಸೈಟಿಗಳ ಮುಖಾಂತರವಾಗಿ ಸಾಲದ ರೂಪದಲ್ಲಿ ಕೊಡಿಸುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಸಕಾಲಕ್ಕೆ ಸರಿಯಾಗಿ ಬೀಜ ಮತ್ತು ಗೊಬ್ಬರವನ್ನು ಕೊಡಿಸಿದರೆ ಮಾತ್ರ ರೈತರು ಆಹಾರ ಪದಾರ್ಥಗಳನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಮತ್ತೆ ಈ ಗೊಬ್ಬರ ಮತ್ತು ಬೀಜಗಳನ್ನು ಕೊಡುವುದರಲ್ಲಿ ದೊಡ್ಡ ರೈತರು, ಸಣ್ಣ ರೈತರು ಮತ್ತು ಅತಿ ಸಣ್ಣ ರೈತರು ಎಂದು ಪರಿಗಣಿಸದೆ ಎಲ್ಲಾ ರೈತರಿಗೂ ಬೀಜ ಮತ್ತು ಗೊಬ್ಬರಗಳನ್ನು ಸಾಲದ ರೂಪದಲ್ಲಿ ಕೊಡಿಸಬೇಕು. ಕೆಲವು ಕಡೆಗಳಲ್ಲಿ ರೈತರಿಗೆ ಕೆಲಸಗಳು ಇಲ್ಲದೆ ಜೀವನವನ್ನು ಸಾಗಿಸುವುದೇ ಬಹಳ ಕಷ್ಟವಾಗಿದೆ ಇದುವರೆವಿಗೂ ನಾನಾ ಕಡೆಗಳಲ್ಲಿ ಮಳೆಯಾಗಿಲ್ಲ. ಇನ್ನೆರಡು ವಾರಗಳಲ್ಲಿ ಮಳೆಯಾಗದಿದ್ದರೆ ಅಲ್ಲಿ ಸ್ಕೇರ್‌ಸಿಟಿ ವರ್ಕ್ಸ್ ತೆಗೆದುಕೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಎನ್‌ಆರ್‌ಇಪಿ ಸ್ಕೀಮ್‌ನಲ್ಲಿ ಹಣವಿದೆಯೆಂದು ಹೇಳಿದ್ದಾರೆ. ಆ ಹಣವನ್ನು ವಿನಿಯೋಗಿಸಿಕೊಂಡು ಸ್ಕೇರ್‌ಸಿಟಿ ವರ್ಕ್ಸ್ ತೆಗೆದುಕೊಳ್ಳಬೇಕು. ರೂರಲ್ ಏರಿಯಾಗಳಲ್ಲಿ ಹೆಚ್ಚು ಅಭಿವೃದ್ಧಿ ಮಾಡಬೇಕಾದರೆ ಈ ಸ್ಕೇರ್‌ಸಿಟಿ ವರ್ಕ್ಸ್ ಜಾಗ್ರತೆ ತೆಗೆದುಕೊಳ್ಳಬೇಕು.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ರೋಡ್ಸ್ ಮತ್ತು ಟ್ಯಾಕ್ಸ್ ರಿಪೇರಿ ಇತರೆ ನಾನಾ ರೀತಿಯ ಕೆಲಸ ಕಾರ್ಯಗಳನ್ನು ತೆಗೆದುಕೊಂಡು ಈ ಎನ್‌ಆರ್‌ಇಪಿ ಸ್ಕೀಮ್‌ನಲ್ಲಿ ಇರುವಂತಹ ಹಣವನ್ನು ಉಪಯೋಗಿಸಿಕೊಳ್ಳಬಹುದು ಎಂದು ನಾವು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಎನ್‌ಆರ್‌ಇಪಿ ಸ್ಕೀಮ್‌ನಲ್ಲಿ ಹಣವನ್ನು ತಾವು ಖರ್ಚು ಮಾಡದೆ ಉಳಿಸಿಕೊಂಡರೆ ಮುಂದೆ ತೊಂದರೆಯಾಗುತ್ತದೆ. Scarcity is different from NREP. You will lose the amount which you are going to get from the Centre for Searcity works. ತಾವು ಇದನ್ನು ಸ್ವಲ್ಪ ಆಲೋಚನೆ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರಿಗೆ ಗೊತ್ತಿದ್ದಹಾಗೆ ಎನ್‌ಆರ್‌ಇಪಿ ಸ್ಕೀಮ್‌ಗೆ ಸುಮಾರು ೫೦ ಪರ್ಸೆಂಟ್ ಹಣ ಕೇಂದ್ರ ಸರ್ಕಾರದಿಂದ ಗ್ರ್ಯಾಂಟ್ ರೂಪದಲ್ಲಿ ಬರುತ್ತದೆ. ಮತ್ತೆ ಸ್ಕೇರ್‌ಸಿಟಿ ವರ್ಕ್ಸ್‌ಗೆ ಅಡ್ವಾನ್ಸ್ ಪ್ಲಾನ್ ಅಸಿಸ್ಟೆನ್ಸ್ ಮಾತ್ರ ಕೊಡುತ್ತಾರೆ. ನಾವು ಇದರಲ್ಲಿ ಏನಾದರೂ ಅವಶ್ಯಕವಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳದೆ ಹಣವನ್ನು ಹಾಗೆಯೇ ಉಳಿಸಿದರೆ ನಮಗೆ ಕೇಂದ್ರ ಸರ್ಕಾರದಿಂದ ಬರುವಂತಹ ಹಣ ಬರುವುದಿಲ್ಲ. ಮತ್ತೆ ಇನ್ನು ಒಂದು ವಾರದೊಳಗಾಗಿ ಮಳೆಯಾಗದಿದ್ದರೆ ಎಲ್ಲಿ ಮಳೆಯಾಗಿಲ್ಲದೆ ರೈತರು ತೊಂದರೆಯಲ್ಲಿ ಇದ್ದಾರೋ ಅಂತಹ ಕಡೆಗಳಲ್ಲಿ ಸ್ಕೇರ್‌ಸಿಟಿ ಡಿಕ್ಲೇರ್ ಮಾಡುತ್ತೇವೆ.

ಶ್ರೀ ಎಸ್.ಆರ್, ಬೊಮ್ಮಾಯಿ.—ರೈತರಿಗೆ ಸೊಸೈಟಿಗಳ ಮುಖಾಂತರ ಸಾಲ ದೊರಕಿಸಿಕೊಡಬೇಕು. ಮತ್ತು ಲೋನ್‌ಗಳ ರಿಕವರಿ ಕೆಲಸವನ್ನು ಸಧ್ಯಕ್ಕೆ ನಿಲ್ಲಿಸಬೇಕು. ಕಂದಾಯದ ವಸೂಲಿಯನ್ನು ಸಹ ನಿಲ್ಲಿಸಬೇಕು. ಈ ಮೂರು ವಿಷಯಗಳನ್ನು ನಾನು ಒತ್ತಾಯಪೂರ್ವಕವಾಗಿ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

MR. DEPUTY SPEAKER.—Shall we take up division wise?
SRI Y. RAMAKRISHNA Minister is noting down. Let them speak.

† ಶ್ರೀ ಕೆ.ಬಿ. ಶಿವಯ್ಯ.—ಮಾನ್ಯ ಅಧ್ಯಕ್ಷರೇ, I will not touch those points covered by my previous speakers. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಎಂ ಸಿ.

ಬಸಪ್ಪನವರು ಮಾತನಾಡುವಂತಹ ಸಂದರ್ಭದಲ್ಲಿ ನಮ್ಮ ಮೈಸೂರು ಜಿಲ್ಲೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮತ್ತು ನಮ್ಮ ಜಿಲ್ಲೆಯಲ್ಲಿ ಈಗ ಎಲ್ಲಾ ಕಡೆಗಳಲ್ಲಿ ಜೋಳ ಮತ್ತು ಭತ್ತವನ್ನು ನಾಟಿ ಮಾಡಿದ್ದಾರೆ. ಆದರೆ ಮೇ ಜೂನ್, ಜುಲೈ ತಿಂಗಳಿನಲ್ಲಿ ನಾವು ಇದ್ದೇವೆ. ಆದರೆ ಇದುವರೆವಿಗೂ ಮಳೆ ಇಲ್ಲ. ಭತ್ತದ ಮತ್ತು ಜೋಳದ ಪೈರು ಎಲ್ಲಾ ಒಣಗಿ ಹೋಗಿದೆ. ಆದ್ದರಿಂದ ನಮ್ಮ ಮೈಸೂರು ಜಿಲ್ಲೆಯನ್ನು ಕ್ಷಾಮಪೀಡಿತ ಪ್ರದೇಶವೆಂದು ಪರಿಗಣಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಎನ್‌ಆರ್‌ಇಪಿ ಸ್ಕೀಮ್‌ನಲ್ಲಿ ಸಾಕಷ್ಟು ಕೆಲಸಕಾರ್ಯಗಳನ್ನು ಕೈಗೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು, ಮತ್ತು ಎಲ್ಲಿ ಅಗತ್ಯವಿದೆಯೋ ಅಂತಹ ಕಡೆಗಳಲ್ಲಿ ಎಲ್ಲಾ ರಿಲೀಫ್ ಕಾಮಗಾರಿ ಕೆಲಸಗಳನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಡಬೇಕು, ಮತ್ತು ಎಲ್ಲಾ ಕಡೆಗಳಲ್ಲಿಯೂ ಕೂಡ ಸೊಸೈಟಿಗಳ ಸಾಲವನ್ನು ವಸೂಲು ಮಾಡುತ್ತಿದ್ದಾರೆ. ಆ ಸಾಲವನ್ನು ಸಧ್ಯಕ್ಕೆ ವಸೂಲು ಮಾಡದಂತೆ ತಡೆಗಟ್ಟಬೇಕು, ಮತ್ತು ಅಲ್ಲಿ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ ಅದನ್ನು ನಿಲ್ಲಿಸಬೇಕು. ಮತ್ತೆ ಕೋ ಆಪರೇಟೀವ್ ಸೊಸೈಟಿ ಸಾಲವನ್ನು ವಸೂಲು ಮಾಡುವುದಕ್ಕಾಗಿ ನಿಮ್ಮ ಸರ್ಕಾರಿ ಅಧಿಕಾರಿಗಳು ಮನೆ ನುಗ್ಗಿ ಅವರ ಮನೆಯಲ್ಲಿರುವಂತಹ ಎಲ್ಲಾ ಪದಾರ್ಥಗಳು ಮತ್ತು ಪಾತ್ರೆ ಸಾಮಾನುಗಳನ್ನು ತೆಗೆದುಕೊಂಡು ಬಂದಿರುವುದು ಅವರಿಗೆ ಇಲ್ಲದಸಲ್ಲದ ಕಿರುಕುಳವನ್ನು ಕೊಟ್ಟು ಹಿಂಸೆಯನ್ನು ಮಾಡುತ್ತಿದ್ದಾರೆ. ನಾನು ಉದಾಹರಣೆಗೆ ಹೇಳುವುದಾದರೆ, ಹಳೇಪುರದ ಶ್ರೀ ನಾಗರಾಜ ಮತ್ತು ಶ್ರೀ ನಾಗೇಂದ್ರರಾವ್ ಎಂಬುವವರ ಮನೆಗೆ ನಿಮ್ಮ ಸಹಕಾರಿ ಸಂಘದ ಅಧಿಕಾರಿಗಳು ನುಗ್ಗಿ ಅವರ ಮನೆಯನ್ನು ಜಪ್ತಿ ಮಾಡಿ ಅವರಿಗೆ ಇಲ್ಲದಸಲ್ಲದ ತೊಂದರೆ ಕೊಟ್ಟು ಬಂದಿದ್ದಾರೆ. ಮತ್ತೆ ಆತನು ಪೋಲೀಸ್‌ನವರಿಗೆ ಕಂಪ್ಲೈಂಟ್ ಕೊಟ್ಟಿದ್ದಾರೆ. ಮತ್ತೆ ಹರಿಜನರಾದ ಶ್ರೀಮಾನ್ ರಂಗಯ್ಯ ಎಂಬುವವರ ಮನೆಯಿಂದ ಸುಮಾರು ೧೨೦೦ ರೂಪಾಯಿಗಳ ಬೆಲೆ ಬಾಳುವಂತಹ ಎತ್ತುಗಳನ್ನು ಹಿಡಿದುಕೊಂಡು ಬಂದಿದ್ದಾರೆ. ಅವರ ಮನೆಯಲ್ಲಿ ಇರುವಂತಹ ಸಾಮಾನುಗಳನ್ನು ಸಹ ಎತ್ತಿಕೊಂಡು ಬಂದಿದ್ದಾರೆ. ನಿಮ್ಮ ಸಹಕಾರಿ ಸಂಘಗಳ ಅಧಿಕಾರಿಗಳು ಮಾರವಾಡಿಗಳ ತರಹ ವರ್ತನೆ ಮಾಡುತ್ತಿದ್ದಾರೆ. ಇದನ್ನು ತಾವು ತಪ್ಪಿಸಬೇಕು. ಒಬ್ಬ ರೈತನು ೫೦೦ ರೂಪಾಯಿಗಳ ಸಾಲವನ್ನು ತೆಗೆದುಕೊಂಡಿದ್ದರೆ ಆತನು ಕಟ್ಟುವುದು ಸುಮಾರು ೧೦ ವರ್ಷಗಳಾದರೆ ಆ ೫೦೦ ರೂಪಾಯಿಗಳು ೫೦೦೦ ರೂಪಾಯಿಗಳಾಗಿರುತ್ತದೆ. ಬಹುಶಃ ರೈತನು ಕಟ್ಟಿದಂತಹ ಸಾಲದ ಹಣವನ್ನು ಇವರು ತಮ್ಮ ಜಮಾಕ್ಕೆ ತೆಗೆದುಕೊಳ್ಳುವುದಿಲ್ಲ ಇಂತಹ ಎಷ್ಟೋ ಕೇಸ್‌ಗಳು ಇವತ್ತು ಜಾಯಿಂಟ್ ರಿಜಿಸ್ಟ್ರಾರ್ ಆಫ್ ಕೋ ಆಪರೇಟೀವ್ ಸೊಸೈಟಿಗಳವರ ಮುಂದೆ ಇವೆ. ಮತ್ತೆ ತಮ್ಮ ಸಹಕಾರ ಸಂಘಗಳ ಅಧಿಕಾರಿಗಳು ಪೋಲೀಸ್ ಅಧಿಕಾರಿಗರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಮನೆಗಳನ್ನು ಜಪ್ತಿ ಮಾಡುತ್ತಾರೆ, ಅದನ್ನು ತಾವು ಈ ತಕ್ಷಣ ನಿಲ್ಲಿಸುವಂತಹ ವ್ಯವಸ್ಥೆಯನ್ನು ಮಾಡಬೇಕು. ಇದರ ಬಗ್ಗೆ ಸರ್ಕಾರದವರು ಸೂಕ್ತ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ಶ್ರೀ ಎಂ. ಮಾದಯ್ಯ (ಸುತ್ತೇಮಾರನಹಳ್ಳಿ) —ಮಾನ್ಯ ಅಧ್ಯಕ್ಷರೇ. ನಮ್ಮಲ್ಲಿ ಚಾಮರಾಜನಗರ ಸೇರಿದ ಹಾಗೆ ಎರಡು ಹೋಬಳಿಗಳಿವೆ. ಇವು ಎಷ್ಟು ಒಣ ಪ್ರದೇಶ ಎಂದರೆ ಅದನ್ನು ಹೇಳುವುದಕ್ಕೆ ಆಗುವುದಿಲ್ಲ. ಅಲ್ಲಿ ಒಂದು ತೊಟ್ಟೂ ಮಳೆಯಿಲ್ಲದೆ ಯಾವ ಬೆಳೆಯನ್ನೂ ಹಾಕಲಿಕ್ಕೆ ಆಗಲಿಲ್ಲ. ಎಲ್ಲೋ ಒಂದು ದಿವಸ ಮಳೆ ಬಿತ್ತು ಎಂದು ಬೆಳೆ ಹಾಕಿದರೂ ಮತ್ತೆ ಮಳೆಯಿಲ್ಲದೆ ಎಲ್ಲಾ ಒಣಗಿಹೋಗಿದೆ. ಈ ಮಧ್ಯೆ ಸಾಲಗಾರರ ಹೊಡೆತವಂತೂ ತಾಳಲಿಕ್ಕೆ ಸಾಧ್ಯವಿಲ್ಲ. ಅಧಿಕಾರಿಗಳು ಜಪ್ತಿ ವಗೈರೆ ಮಾಡಿ ತುಂಬಾ ತೊಂದರೆ ಕೊಡುತ್ತಿದ್ದಾರೆ. ಜನಗಳಿಗೆ ಹಣ ಇಲ್ಲ, ಕೆಲಸ ಇಲ್ಲ. ಬಾವಿ ನೀರಿನ ಮಟ್ಟ ಬಹಳ ಕೆಳಗಡೆ ಹೋಗಿದ್ದು, ಜನರಿಗೆ ನೀರು ಸಿಗುವುದೇ ಕಷ್ಟವಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ನಮ್ಮ ತಾಲ್ಲೂಕನ್ನು ಕ್ಷಾಮಪೀಡಿತ ಪ್ರದೇಶವೆಂದು ಪರಿಗಣಿಸಿ ಜನತೆಗೆ ಆದಷ್ಟು ಬೇಗ ಪರಿಹಾರವನ್ನು ಒದಗಿಸಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಜಯದೇವರಾಜ ಅರಸ್.— ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಮೈಸೂರು ತಾಲ್ಲೂಕಿನಲ್ಲಿ ಜೂನ್ ಒಂಬತ್ತನೇ ತಾರೀಖಿಗೆ ಮಳೆ ಪ್ರಾರಂಭವಾಯಿತು ಎಂದರೆ ನಮ್ಮಲ್ಲಿ ಜೋಳ ಹಾಕಬೇಕಾಗಿದ್ದರೆ ವ್ಯವಸಾಯ ಆಗತಕ್ಕಂಥಾದ್ದು ಮೇ ಜೂನ್ ತಿಂಗಳಲ್ಲಿ. ಜೂನ್‌ನಲ್ಲಿ ಪ್ರಾರಂಭ ಮಾಡಿದರೆ ಅಭಾವ ಇಲ್ಲವೆಂದು ಅರ್ಥವೇ ? ಮೈಸೂರು ನಗರದಲ್ಲಿ ಮಳೆಯಾಗಿಲ್ಲ. ೪೯ ಪಂಚಾಯತ್‌ಗಳಲ್ಲಿ ನಾಲ್ಕು ಪಂಚಾಯತ್‌ಗಳಲ್ಲಿ ಮಾತ್ರ ಇರಿಗೇಟೆಡ್ ಪ್ರದೇಶ ಇದೆ. ಐದು

ಪಂಚಾಯತ್‌ಗಳಲ್ಲಿ ಜೋಳವನ್ನು ಸ್ವಲ್ಪ ಮಟ್ಟಿಗೆ ಹಾಗಿದ್ದರೂ ಮಳೆಯಿಲ್ಲದೆ ಎಲ್ಲಾ ಒಣಗಿ ಹೋಯಿತು. ಹಲವು ಕಡೆ ಜೋಳ ಹಾಕಲಿಕ್ಕೆ ಆಗಲಿಲ್ಲ. ಈಗಾಗಲೇ ನಮ್ಮಲ್ಲಿ ರಾಗಿ ಹಾಕಬೇಕಾಗಿತ್ತು. ಆದರೆ ಮಳೆಯಾಗದೇ ಇದ್ದುದರಿಂದ ಅದನ್ನು ಹಾಕಲಿಕ್ಕೆ ಆಗಲಿಲ್ಲ. ಬೆಳಿಗ್ಗೆ ನಾನು ಫೋನ್ ಮಾಡಿ ಕೇಳಿದಾಗ ಇನ್ನೂ ಮಳೆಯಾಗಿಲ್ಲವೆಂದು ತಿಳಿದುಬಂತು. ಇಂತಹ ಅಭಾವ ಪರಿಸ್ಥಿತಿ ಇರುವಾಗ ಕೃಷಿ ಕಾರ್ಮಿಕರು ಒಂದು ಕಡೆಯಾದರೆ, ಒಂದು ಎರಡು ಎಕರೆ ಭೂಮಿಯಿರುವ ಕೃಷಿಕರು ಇನ್ನೊಂದು ಕಡೆ ಇದ್ದಾರೆ. ಅವರಿಗೆ ಯಾವ ಪರಿಹಾರವನ್ನು ಒದಗಿಸಿ ಕೊಡುವುದಕ್ಕೂ ಸರ್ಕಾರ ಮನಸ್ಸು ಮಾಡಿಲ್ಲ. ರೈತರಿಗೆ ಎಷ್ಟರಮಟ್ಟಿಗೆ ತೊಂದರೆ ಇದೆ ಎಂದರೆ, ಈ ಬಗ್ಗೆ ಒಂದು ಕತೆಯಿದೆ—'ತುಂಬಾ ತೊಂದರೆ ಇದೆ. ತಿನ್ನುವುದಕ್ಕೆ ಇಲ್ಲ, ಹಸಿವಾಗುತ್ತದೆ ಎಂದು ಜನರು ಕೇಳಿದಾಗ ರಾಜನಾದವನು 'ಸಜ್ಜಿಗೆ ತಿನ್ನಿ' ಎಂದು ಹೇಳಿದನಂತೆ. ನಮಗೆ ಬೇಕಾಗಿರುವುದು ರಾಗಿ, ಜೋಳ ಎಂದರೆ ಅಕ್ಕಿ ಕೊಡುತ್ತಿದ್ದೇವೆ ಎಂದು ಹೇಳುತ್ತಾರೆ. ರೈತರಿಗೆ ಕೊಂಡುಕೊಂಡು ತಿನ್ನುವುದಕ್ಕಾದರೂ ಶಕ್ತಿ ಬೇಡವೇ ? ಮೂರು ತಿಂಗಳಾಯಿತು, ಮಳೆ ಇಲ್ಲ. ಇವತ್ತು ಎನ್‌ಆರ್‌ಇಪಿಯಲ್ಲಿ ಜಿಲ್ಲಾಧಿಕಾರಿಗಳು ಈ ಬಗ್ಗೆ ಒಂದು ಬಿಲ್ಲನ್ನು ಅಪ್ರೂವ್ ಮಾಡಿದ್ದಾರೆ. ಆದರೆ ಇಷ್ಟು ತಿಂಗಳಾದರೂ ಯಾವ ವ್ಯವಸ್ಥೆಯೂ ಆಗಿಲ್ಲ. ನಾವು ಹೋಗಿ ಜನರಿಗೆ ಏನು ಹೇಳಬೇಕು ? ತಾವು ದೊಡ್ಡ ಪಟ್ಟಿಯನ್ನು ಕೊಟ್ಟಿದ್ದೀರಿ. ಫೈನಾನ್ಸಿಯಲ್ ಲಿಸ್ಟ್‌ನಲ್ಲಿ ಈ ಹಣ ಬಡ್ಜೆಟ್‌ನಲ್ಲಿದೆ ಎಂದಿದೆ. ಆದರೆ, ಇದನ್ನು ರಿಲೀಸ್ ಮಾಡುವುದು ಯಾವಾಗ ? ಹೊಸ ಪದ್ಧತಿಯಲ್ಲಿ ಎಲ್.ಒ.ಸಿ. ಅಂತ ಇದೆಯಲ್ಲ, ಅದು ಕೊಡುವುದು ಯಾವತ್ತು ? ಅದನ್ನು ಟೆಂಡರ್ ತೆಗೆದುಕೊಂಡು ಕೆಲಸ ಮಾಡುವುದು ಯಾವತ್ತು ? ಇವತ್ತು ಎಲ್.ಒ.ಸಿ. ತೆಗೆದುಕೊಂಡು ಕೆಲಸ ಮಾಡುವ ಹಾಗಿಲ್ಲ. ಎರಡು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹಿಂದೆ ತಿಳಿದಿದ್ದರೂ ಇದುವರೆಗೆ ಹತ್ತು ಲಕ್ಷ ರೂಪಾಯಿ ಮಾತ್ರ ಖರ್ಚಾಗಿದೆ. ಮಾರ್ಚ್ ತಿಂಗಳ ಕೊನೆಯ ಹೊತ್ತಿಗೆ ಎಷ್ಟರಮಟ್ಟಿಗೆ ಕೆಲಸ ಪ್ರಾರಂಭವಾಗಿದೆ ಎಂದು ದಯವಿಟ್ಟು ತಾವು ತಿಳಿದುಕೊಳ್ಳಬೇಕು. ಅಪ್ರೂವ್ ಆಗಿರುವ ಹಣವನ್ನು ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡತಕ್ಕಂಥ ಸಂದರ್ಭದಲ್ಲಿ ಈಗ ಕೆಲವು ಕಟ್ಟುಪಾಡುಗಳಿರುವಾಗ, ವಿತರಣೆ ಮಾಡುವ ಕಾರ್ಯ ಸಲೀಸಾಗಿ ಆಗುವುದಿಲ್ಲ. ಈವತ್ತಿನವರೆಗೂ ಅವರು ನಮ್ಮನ್ನು ಯಾರನ್ನೂ ಕೂಡ ಕನ್‌ಸಲ್ಟ್ ಮಾಡಿಲ್ಲ. ರೈತರು ಪೂರ್ತಿಯಾಗಿ ನೊಂದ ಮೇಲೆ ಅವರಿಗೆ ಸಹಾಯ ಮಾಡಿದರೆ ಏನು ಪ್ರಯೋಜನ ? ಮುಂದಾಗಿಯೇ ಅವರ ಕಷ್ಟಗಳನ್ನು ಅರಿತುಕೊಂಡು ಅವರಿಗೆ ಸಹಾಯ ಮಾಡಿದರೆ ಆಗ ಅಭಾವ ಪರಿಹಾರ ಆಗುತ್ತದೆ. ಈಗ ತಾವೇನೋ ಎನ್‌ಆರ್‌ಇಪಿಯಿಂದ ಅದನ್ನು ಸ್ವಲ್ಪಮಟ್ಟಿಗೆ ರಿಲ್ಯಾಕ್ಸೇಶನ್ ಮಾಡಲಾಗಿದೆ ಎಂದು ಹೇಳಿದ್ದೀರಿ ಬಾವಿಗಳನ್ನು ತೆಗೆಯುವುದಕ್ಕೆ ಇವತ್ತು ರಿಗ್‌ಗಳನ್ನು ಎಲ್ಲಿ ಕಳಿಸುತ್ತಾರೆ ? ಒಂದೊಂದು ಬಾವಿ ತೆಗೆಯುವುದಕ್ಕೂ ೧೫–೨೦ ಸಾವಿರ ರೂಪಾಯಿಗಳು ಖರ್ಚು ಆಗುವಾಗ, ಒಂದೊಂದು ತಾಲ್ಲೂಕಿಗೆ ಎಂಟು ಒಂಬತ್ತು ಸಾವಿರ ರೂಪಾಯಿಗಳನ್ನು ಕೊಟ್ಟರೆ ಇಷ್ಟು ರಿಗ್‌ಗಳನ್ನು ತೆಗೆಯುವುದಕ್ಕೆ ಆಗುತ್ತದೆಯೇ ? ಅವುಗಳನ್ನು ರಿಪೇರಿ ಮಾಡುವುದಕ್ಕೆ ಬಡ್ಜೆಟ್‌ನಲ್ಲಿ ಹಣ ಇಲ್ಲ. ಹೀಗಿರುವಾಗ ಟೆಕ್ನಿಕಲ್ ಆಗಿ ಅನೇಕ ತೊಂದರೆಗಳಿವೆ. ಹೀಗಿರುವಾಗ ಪರಿಹಾರ ಕ್ರಮ ಕೈಗೊಳ್ಳುವ ಜಿಲ್ಲಾಧಿಕಾರಿಯವರು ಹಣ ಕೊಟ್ಟರೆ ತುಂಬಾ ಅನುಕೂಲವಾಗುತ್ತದೆ. ಆದರೆ ಅದನ್ನು ಇನ್ನೂ ರಿಲೀಸ್ ಮಾಡಿಲ್ಲ. ಆದ್ದರಿಂದ ಪರಿಹಾರ ಕಾಮಗಾರಿಗಳೆಂದರೆ ಅದರಿಂದ ನೇರವಾಗಿ ರೈತರಿಗೆ, ವ್ಯವಸಾಯ ಗಾರರಿಗೆ ಅನುಕೂಲವಾಗುವಂತಿರಬೇಕು. ಇಲ್ಲದಿದ್ದರೆ ಅದು ಪರಿಹಾರ ಕಾಮಗಾರಿಗಳೆನಿಸಿಕೊಳ್ಳುವುದಿಲ್ಲ. ಈ ದೃಷ್ಟಿಯಿಂದ ತಾವು ಪರಿಹಾರ ಕಾಮಗಾರಿಗಳನ್ನು ಮಾಡುವ ವ್ಯವಸ್ಥೆಯನ್ನು ಜಿಲ್ಲಾಧಿಕಾರಿಗಳಿಗೆ ಕೊಡಬೇಕು. ಹಣವನ್ನು ಬಡ್ಜೆಟ್‌ನಲ್ಲಿ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಆದರೆ ಈ ಪರಿಹಾರಕ್ಕೆ ಹಣವನ್ನು ಕೊಟ್ಟೇ ಇಲ್ಲವೆಂದು ಹೇಳಬಹುದು. ಏನೋ ಈ ಕೆಲಸಕ್ಕೆ ಹತ್ತು ಲಕ್ಷ ರೂಪಾಯಿಗಳನ್ನು ಒಂದು ಜಿಲ್ಲೆಗೆ ಕೊಟ್ಟಿರಬಹುದು. ಇದರಿಂದ ಕಾಮಗಾರಿ ಕೆಲಸ ಕಾರ್ಯಗಳು ಎಷ್ಟರಮಟ್ಟಿಗೆ ಆಗುತ್ತದೆ ಎಂಬುದನ್ನು ಯೋಚನೆ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಈಗ ಈ ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ನಮ್ಮೆಲ್ಲರನ್ನೂ ಕೇಳಿ ಕೊಟ್ಟಿದ್ದರೆ ತುಂಬಾ ಚೆನ್ನಾಗಿತ್ತು. ೧೫–೨೦ ದಿವಸ ಇರುವಾಗ ತಡವಾಗಿ ಕೊನೆಯ ಗಳಿಗೆಯಲ್ಲಿ ಕೊಟ್ಟಿದ್ದಾರೆ. ಜನಗಳು ಕೇಳಿದರೆ ಹೇಳುವುದಕ್ಕೇನೋ ಇದರಿಂದ ಆಯಿತು. ಆದರೂ ಪರಿಹಾರ ಕಾರ್ಯಗಳು ಮಾತ್ರ ಮಾಡಿದಂತೆ ಆಗುವುದಿಲ್ಲ. ಅಷ್ಟು ಜಾಗ್ರತೆ ಇದನ್ನು ಮಾಡಬೇಕು. ಹಾಗೆಂದು ಇನ್ನೊಂದು ತಿಂಗಳು ಬಿಟ್ಟು ಇದನ್ನು ಮಾಡುವುದಲ್ಲ. ಇದನ್ನು ತಕ್ಷಣ ಕೈಗೊಂಡರೆ ಮಾತ್ರ ಸ್ವಲ್ಪಮಟ್ಟಿಗಾದರೂ ಪ್ರಯೋಜನವಾಗುತ್ತದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಎಲ್. ತಿಮ್ಮೇಗೌಡ (ಬಸವನಗುಡಿ) —ಮಾನ್ಯ ಅಧ್ಯಕ್ಷರೇ, ನಾನು ಹುಣಸೂರು ತಾಲ್ಲೂಕಿನಲ್ಲಿರತಕ್ಕಂಥ ಪರಿಸ್ಥಿತಿಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹುಣಸೂರು ತಾಲ್ಲೂಕಿನಲ್ಲಿ ರಾಗಿ ಬೆಳೆ ಪೂರ್ತಿ ಒಣಗಿಹೋಗಿದೆ. ವರ್ಜೀನಿಯಾ ಟೊಬ್ಯಾಕೊ ಬೆಳೆಯನ್ನು ನೂರಕ್ಕೆ ಎಪ್ಪತ್ತೈದು ಭಾಗದಲ್ಲಿ ಬೆಳೆದಿದ್ದರೂ ಸಹ ಇನ್ನು ಮಳೆ ಬಾರದೆ ಇಪ್ಪತ್ತೈದು ಭಾಗದಷ್ಟು ಮಾತ್ರ ಕೊಯ್ಯಬಹುದಾಗಿದೆ. ಬತ್ತದ ವಿಚಾರದಲ್ಲಿ ಹುಣಸೂರು, ಕೃಷ್ಣರಾಜನಗರ ತಾಲ್ಲೂಕಿನಲ್ಲಿ ವಾಟರ್ ಸ್ಟೋರೇಜ್ ಡ್ಯಾಮ್ ಯಾವುದೂ ಇಲ್ಲ. ಹೊಳೆಯಲ್ಲಿ ನೀರು ಇದ್ದರೆ ಕಾಲುವೆಗಳಲ್ಲಿ ನೀರು ಬರುತ್ತದೆ, ಲಕ್ಷ್ಮಣ ತೀರ್ಥದಲ್ಲಿ ನೀರು ಹೆಚ್ಚಿಗೆ ಇಲ್ಲ. ಕಾವೇರಿಯ ನದಿ ಹರಿಯುವ ಏರಿಯಾದಲ್ಲಿ ಕೂಡ ಮಳೆ ಇಲ್ಲ. ಕೊಡಗಿನಲ್ಲಿ ಮಳೆ ಅಭಾವ ಪರಿಸ್ಥಿತಿ ಇರುವುದರಿಂದ ಅಲ್ಲಿಂದ ನೀರು ಹೆಚ್ಚು ಬರುವ ಸಂಭವ ಇಲ್ಲ. ಕೃಷ್ಣರಾಜಸಾಗರ ತಾಲ್ಲೂಕಿನಲ್ಲಿ ಕಾಲುವೆಗಳಲ್ಲಿ ನೀರು ಕಡಿಮೆಯಾಗಿ ಈಗಾಗಲೇ ಅಗೆ ಹಾಕುವುದಕ್ಕೆ ಸೀಡ್‌ಲಿಂಗ್ ರೈಸ್ ಮಾಡುವುದಕ್ಕೆ ಮಾತ್ರ ನೀರು ಇದೆ. ಆದರೆ ಪುನಃ ಕೊಡಗಿನಲ್ಲಿ ಹೆಚ್ಚು ಮಳೆಯಾಗದಿದ್ದರೆ ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಮತ್ತು ಹುಣಸೂರು ತಾಲ್ಲೂಕಿನಲ್ಲಿ ಬತ್ತದ ಬೆಳೆ ಪೂರ್ತಿಯಾಗಿ ಹೊರಟುಹೋಗುತ್ತದೆ. ಬತ್ತದ ಬೆಳೆ ಹೊರಟುಹೋದರೆ ಆಹಾರಧಾನ್ಯಗಳು ಕಡಿಮೆಯಾಗುವುದರಿಂದ ಇದನ್ನು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತೆ ಹುಣಸೂರು ತಾಲ್ಲೂಕಿನ ಮುಖಾಂತರ ಕೇರಳದ ಕಾಗದ ಕಾರ್ಖಾನೆಗಳಿಗೆ ಪ್ರತಿದಿವಸ ಎಂಟರಿಂದ ಹತ್ತು ಲಾರಿ ಲೋಡ್‌ಗಳಷ್ಟು ಹುಲ್ಲನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಅವರು ಬೊಂಬು ಜೊತೆಗೆ ಹುಲ್ಲನ್ನೂ ಕೂಡ ಉಪಯೋಗಿಸುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಕೇರಳದ ಗಡಿಪ್ರದೇಶದಲ್ಲಿ ಇದರ ಸಾಗಾಟವನ್ನು ತಡೆಹಿಡಿಯಲು ಸರ್ಕಾರದವರು ಕೂಡಲೇ ಆಜ್ಞೆ ಹೊರಡಿಸಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಎನ್‌ಆರ್‌ಇಪಿ ಪ್ರೋಗ್ರಾಂನಲ್ಲಿ ರಸ್ತೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಬಗ್ಗೆ ಮಾನ್ಯ ಕಂದಾಯ ಸಚಿವರು ಅದನ್ನು ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರಿಗೆ ಕಳಿಸಿಕೊಟ್ಟು ಸೂಚನೆಗಳನ್ನು ಕೊಟ್ಟಿದ್ದಾರೆ. ರಸ್ತೆ ತೆಗೆದುಕೊಳ್ಳಬೇಕಾದರೆ. ಜಲ್ಲಿ ಹಾಕಬೇಕಾದರೆ ಈಗಿರತಕ್ಕಂಥ ಕೆಲವು ನಿಬಂಧನೆಗಳಿಗೆ ರಿಯಾಯ್ತಿ ಕೊಡದಿದ್ದರೆ ಈ ರಸ್ತೆಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಈ ನಿಬಂಧನೆಗಳನ್ನು ಸಡಿಲಮಾಡಲು ಮಾನ್ಯ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಿಗೆ ಸೂಚನೆಗಳನ್ನು ಕಳಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರು ಮುಖಾಂತರ ಮಾನ್ಯ ಸದಸ್ಯರಾದ ತಿಮ್ಮೇಗೌಡರಿಗೆ ತಿಳಿಸುವುದೇನೆಂದರೆ, ಅದನ್ನು ಚೀಫ್ ಸೆಕ್ರೆಟರಿ, ರೂರಲ್ ಡೆವಲೆಪ್‌ಮೆಂಟ್ ಸೆಕ್ರೆಟರಿ, ಫೈನಾನ್ಸ್ ಸೆಕ್ರೆಟರಿ, ಎಲ್ಲರೂ ಕುಳಿತುಕೊಂಡು ಮಾತನಾಡಿದ ಮೇಲೆ ಈ ಸ್ಟೇಟ್‌ಮೆಂಟ್‌ನ್ನು ಕೊಟ್ಟಿರುವುದು. ಆದರೆ ಇದು ಅಭಾವ ಪೀಡಿತ ಪ್ರದೇಶಗಳಿಗೆ ಮಾತ್ರ ಹೋಗುತ್ತದೆಯೇ ಹೊರತು ಎಲ್ಲಾ ಕಡೆಗೂ ಹೋಗುವುದಿಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮೀಡಿಯಂ ಮತ್ತು ಮೇಜರ್ ಇರಿಗೇಷನ್‌ಗೆ ಮೈಸೂರಿಗೆ ೪೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ, ಕಾವೇರಿ ಬೇಸಿನ್‌ಗೆ ಈ ವರ್ಷ ಕೊಟ್ಟಿರತಕ್ಕಂಥಾದ್ದು ೩೦ ಕೋಟಿ ರೂಪಾಯಿಗಳು ಎಂದು ಹೇಳಿದ್ದೀರಿ. ೪೦ ಕೋಟಿ ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ? ದಯವಿಟ್ಟು ಲೆಕ್ಕ ತಪ್ಪಿರಬಹುದು ; ಅದನ್ನು ನೋಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಫಾಡರ್ ಟ್ರಾನ್ಸ್‌ಪೋರ್ಟೇಷನ್ ಮಾಡತಕ್ಕಂಥಾದ್ದು, ಸೀಡ್ಸ್ ಕೊಡತಕ್ಕಂಥಾದ್ದು ಎನ್. ಆರ್. ಇ. ಪಿ. ಪ್ರಕಾರ ಇಲ್ಲಿ ಆಹಾರ ಪದಾರ್ಥಗಳನ್ನು ಕೊಡಬೇಕಾಗುತ್ತದೆ ಎಂದು ಹೇಳಿದ್ದೀರಿ. ಹಿಂದೆ ಫುಡ್ ಫಾರ್ ವರ್ಕ್ ಎಂದು ಇತ್ತು. ಹಿಂದಿನ ಸ್ಕೇರ್ಸಿಟಿ ಕಂಡೀಷನ್‌ನಲ್ಲಿ ಅದು ಇತ್ತು. ಆ ರೀತಿ ಕೆಲಸ ಮಾಡಿದವರಿಗೆ ೭೫ ಭಾಗ ಆದರೂ ಕೂಡ ಆಹಾರ ಧಾನ್ಯಗಳನ್ನು ಕೊಟ್ಟು ಕಾಲು ಭಾಗ ಮಾತ್ರ ವೇಜಸ್ ಕೊಡುವುದನ್ನು ಮಾಡಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಸಾಲಗಳನ್ನು ರಿಕವರಿ ಮಾಡತಕ್ಕದ್ದನ್ನು ನಿಲ್ಲಿಸಬೇಕು. ಪ್ಯಾಡಿ ಗ್ರೋಯಿಂಗ್ ಏರಿಯ ಹುಣಸೂರು ತಾಲ್ಲೂಕಿನಲ್ಲಿದೆ, ಕೃಷ್ಣರಾಜ ಸಾಗರ ತಾಲ್ಲೂಕಿನಲ್ಲಿದೆ, ಈ ಎರಡು ಕ್ಷೇತ್ರದಲ್ಲಿ ಅದು ಅಫೆಕ್ಟ್ ಆಗುತ್ತದೆ. ಮುಂದೆ ಫಾಡರ್ ಇರುವುದಿಲ್ಲ, ಫುಡ್‌ಗ್ರೈನ್ಸ್‌ಗೂ ತೊಂದರೆ ಬರುತ್ತದೆ, ಅದನ್ನೂ ಕೂಡ ವಾಚ್ ಮಾಡಬೇಕು. ಮತ್ತು ರಾಗಿ ಬೆಳೆ ಪೂರ್ತ ಹೋಗಿರುವುದರಿಂದ ಅಲ್ಲಿ ರಾಗಿ ಹೆಚ್ಚಿಗೆ ಬೇಕಾಗುತ್ತದೆ. ರಾಗಿಯನ್ನು ಹುಣಸೂರು ತಾಲ್ಲೂಕು ಸೊಸೈಟಿಗೆ ಸಪ್ಲೈ ಮಾಡಬೇಕು, ಮಿಕ್ಕ ಆಹಾರ ಧಾನ್ಯಗಳನ್ನೂ ಸಪ್ಲೈ ಮಾಡಬೇಕು. ಮತ್ತೆ ನಮ್ಮ ಸರ್ಕಾರದವರು ಕೇಂದ್ರ

ಸರ್ಕಾರದ ಜೊತೆ ವ್ಯವಹಾರಮಾಡಿ ಹೆಚ್ಚಿಗೆ ಗೋಧಿಯನ್ನು ತರಿಸಬೇಕು. ಈಗ ಗೋಧಿ ೨ ೩ ಸಾವಿರ ಟನ್ ಮಾತ್ರ ಬರುತ್ತಾ ಇದೆ, ಆದ್ದರಿಂದ ಹೆಚ್ಚಿಗೆ ಗೋಧಿಯನ್ನು ತರೆಸಿ ಕೊಡತಕ್ಕ ವ್ಯವಸ್ಥೆ ಮಾಡಬೇಕು.

ಶ್ರೀ ಹೆಚ್. ಡಿ ಚೌಡಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಕೊಟ್ಟಿರತಕ್ಕ ಈ ಒಂದು ವರದಿ ಏನಿದೆ ಇದು ಬಹುಶ: ನಿಜವಾದಂಥ ವರದಿಯಲ್ಲ ಎಂದು ನನಗೆ ಅನ್ನಿಸುತ್ತದೆ. ಇದರಲ್ಲಿ "There are sufficient rainfall in the district during May and June which enabled the agriculturists to sow lands in the dry areas." ಎಂದು ಹೇಳಿದ್ದಾರೆ. ಇದರಲ್ಲಿ ನನ್ನ ಕ್ಷೇತ್ರದಲ್ಲಿ ಅರ್ಧ ಭಾಗ ಬರುವುದರಿಂದ ನಾನು ಮಂಡ್ಯದಿಂದ ಬಂದರೂ ಕೂಡ ಎಲ್ಲಾ ಇರಿಗೇಟೆಡ್ ಏರಿಯಾದಿಂದ ಬಂದಿದ್ದೇನೆ ಎಂದು ತಮಗೆ ಅನ್ನಿಸುತ್ತದೆ. ನನ್ನ ಕ್ಷೇತ್ರದಲ್ಲಿ ಅರ್ಧ ಭಾಗ ಖುಷ್ಕಿ ಪ್ರದೇಶವಿದೆ, ಮಳೆ ಆಗೇ ಇಲ್ಲ. ಮೇ, ಜೂನ್‌ನಲ್ಲಿ ಮಳೆ ಇಲ್ಲ, ಇವತ್ತೂ ಕೂಡ ಮಳೆ ಇಲ್ಲ, ಸೋಯಿಂಗ್ ಕೂಡ ಖಂಡಿತ ಆಗಿಲ್ಲ: ಮಾನ್ಯ ರೆವಿನ್ಯೂ ಮಂತ್ರಿಗಳು ಖಂಡಿತವಾಗಿ ಇನ್ನೊಂದು ವರದಿಯನ್ನು ತರಿಸಿಕೊಳ್ಳತಕ್ಕಂಥಾದ್ದು ಬಹಳ ಒಳ್ಳೆಯದು. ಅವರು ಇನ್ನೊಂದು ಸಾರಿ ಬಂದು ಖುದ್ದು ನೋಡುವುದು ಒಳ್ಳೆಯದು. ಮತ್ತು ಮಂಡ್ಯ ಜಿಲ್ಲೆಯಲ್ಲಿ ರತಕ್ಕ ೭ ತಾಲ್ಲೂಕುಗಳಲ್ಲಿ ೭ ತಾಲ್ಲೂಕುಗಳೂ ಕೂಡ ಖುಷ್ಕಿ ಪ್ರದೇಶ. ಮಳೆ ಆಗದೇ ಇರತಕ್ಕ ಪ್ರದೇಶ. ಮಂಡ್ಯದಲ್ಲಿ ಒಟ್ಟು ಸಾಗುವಳಿ ಆಗತಕ್ಕ ಜಮೀನಿನಲ್ಲಿ ೨/೩ ಭಾಗಕ್ಕಿಂತ ಹೆಚ್ಚು ಖುಷ್ಕಿ ಪ್ರದೇಶವಿದೆ. ಈಗ ನಾಗಮಂಗಲ ಮತ್ತು ಕೆ.ಆರ್. ಪೇಟೆ ತಾಲ್ಲೂಕುಗಳನ್ನು ಪರ್ಟಿಕ್ಯುಲರ್ಲಿ ಎಂದು ಏನು ಹೇಳಿದ್ದಾರೋ ಅದನ್ನು ಒಪ್ಪಿದರೂ ಕೂಡ ಇಡೀ ಜಿಲ್ಲೆಯಲ್ಲಿ ಇವತ್ತಿನದಿವಸ ಬಿತ್ತದೇ ಇರತಕ್ಕ ಅನೇಕ ಸ್ಥಳಗಳಿವೆ. ಬಿತ್ತಿದರೂ ಕೂಡ ಅದು ಇವತ್ತಿನ ದಿವಸಪೂರ್ಣವಾಗಿ ಒಣಗಿ ಹೋಗಿದೆ ಎನ್ನತಕ್ಕ ಮಾತನ್ನು, ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಮತ್ತೆ ಕುಡಿಯುವ ನೀರಿನ ವಿಷಯದಲ್ಲಿ ಸ್ಯಾಟೀಸ್ ಫ್ಯಾಕ್ಟರಿ ಎಂದು ಹೇಳಿದ್ದೀರಿ. ಆದರೆ ಈ ಬಗ್ಗೆ ಒಂದು ಮಾತು ಹೇಳಬೇಕಾಗುತ್ತದೆ. ಸಾಕಷ್ಟು ಬೋರ್‌ವೆಲ್ಸ್ ಇದ್ದರೂ ಅನೇಕ ಬಾರಿ ನಮ್ಮ ಅಭಿವೃದ್ಧಿ ಹಾಗೂ ಪಂಚಾಯಿತಿ ಖಾತೆಯ ಮಂತ್ರಿಗಳಲ್ಲಿ ನಿವೇದನೆ ಮಾಡಿದ್ದೇವೆ. ಇರತಕ್ಕ ಬೋರ್‌ವೆಲ್ಸ್ ರಿಪೇರಿ ಆಗುತ್ತಾ ಇಲ್ಲ. ಅವರು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ, ಈ ಬಗ್ಗೆ ನಾನು ನಿವೇದನೆ ಮಾಡಿದ್ದೇನೆ. ಆ ಕಾರ್ಯಕ್ರಮದ ಪ್ರಕಾರ ಒಂದು ತಾಲ್ಲೂಕಿಗೆ ಹೋಗಬೇಕಾದರೆ ಎರಡು ಮೂರು ತಿಂಗಳಿಗೆ ಒಂದೊಂದು ಸಾರಿ ಒಂದೊಂದು ತಾಲ್ಲೂಕಿಗೆ ಹೋಗಬೇಕಾಗುತ್ತದೆ. ಒಂದೊಂದು ತಾಲ್ಲೂಕಿನಲ್ಲಿ ಸಾವಿರಾರು ಬೋರ್‌ವೆಲ್ಸ್ ಇರುವ ಈ ಸ್ಕ್ವಾಡ್‌ಗಳನ್ನು ಜಾಸ್ತಿಮಾಡಿ ಫ್ರೀಕ್ವೆಂಟಾಗಿ ಅಟೆಂಡ್ ಮಾಡತಕ್ಕ ವ್ಯವಸ್ಥೆ ಮಾಡಬೇಕು. ಮತ್ತು Food-grains and fodders are available in sufficient quantity ಎಂದು ಹೇಳಿದ್ದಾರೆ. ಇದು ಸ್ವಲ್ಪಮಟ್ಟಿಗೆ ಸತ್ಯಕ್ಕೆ ದೂರವಾದ ವಿಷಯ ಎಂದು ಹೇಳಬೇಕಾಗುತ್ತದೆ. ಎಂಪ್ಲಾಯ್‌ಮೆಂಟ್ ಅಪರ್ಚುನಿಟೀಸನ್ನು ಪ್ರೊವೈಡ್ ಮಾಡಬೇಕಾದರೆ ಎನ್.ಆರ್.ಇ.ಪಿ. ಯಿಂದ ಖಂಡಿತವಾಗಿಯೂ ಸಾಧ್ಯವಿಲ್ಲ. ಏಕೆಂದರೆ ಮೆಟೀರಿಯಲ್ ಕಾಂಪೊನೆಂಟ್ ಲೇಬರ್ ಕಾಂಪೊನೆಂಟ್ ಎಂದು ೬೦ ಪರ್ಸೆಂಟ್, ೩೦ ಪರ್ಸೆಂಟ್, ೨೦ ಪರ್ಸೆಂಟ್ ಇರುವ ಕಾರಣ ಲೇಬರ್ ಎಂಪ್ಲಾಯ್‌ಮೆಂಟ್ ಪ್ರೊವೈಡ್ ಮಾಡುವುದಕ್ಕೆ ಸಾಧ್ಯವಿಲ್ಲ. ಅಲ್ಲಲ್ಲಿ ರಿಲೀಫ್ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದು. ಮತ್ತು ಬಹುಮುಖ್ಯವಾಗಿ, ಮೈನರ್ ಇರಿಗೇಷನ್‌ನಲ್ಲಿ 'ಸಿ' ಲಿಸ್ಟ್‌ನಲ್ಲಿ ಕೆಲವಾರು ಕೆಲಸಗಳು ಇದ್ದುವು. ಹಿಂದೆ ಇಂತಹ ಅಭಾವ ಬಂದಂಥ ವರ್ಷಗಳಲ್ಲಿ ಕೆಲವು ಸಣ್ಣ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಂಡಿದ್ದಾರೆ. ಅದನ್ನು ತೆಗೆದುಕೊಳ್ಳುವುದಾದರೆ ೪೦೦ ಜನ ೫೦೦ ಜನ ಕೆಲಸಮಾಡುವುದಕ್ಕೆ ಅನುಕೂಲವಾಗುತ್ತದೆ. ಮತ್ತು ನಮ್ಮ ಜಿಲ್ಲೆಯಲ್ಲಿರತಕ್ಕ ಎಲ್ಲಾ ತಾಲ್ಲೂಕುಗಳಲ್ಲೂ 'ಸಿ' ಲಿಸ್ಟ್‌ನಲ್ಲಿರತಕ್ಕ ಸಣ್ಣ ನೀರಾವರಿ ಕಾಮಗಾರಿಗಳಿವೆ; ಆ ಕಾಮಗಾರಿಗಳನ್ನು ತೆಗೆದುಕೊಳ್ಳುವುದಾದರೆ, ವ್ಯವಸಾಯದ ಕಾರ್ಮಿಕರು ಏನಿದ್ದಾರೆ ಅವರಿಗೆ ಸ್ವಲ್ಪಮಟ್ಟಿಗೆ ಕೆಲಸವನ್ನು ಕೊಡತಕ್ಕ ಒಂದು ಅವಕಾಶವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ದಯವಿಟ್ಟು ಸನ್ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ, ಮತ್ತು ಅವರ ಸಹೋದ್ಯೋಗಿಗಳೂ ನಮ್ಮ ಜಿಲ್ಲಾ ಮಂತ್ರಿಗಳೂ ಏನಿದ್ದಾರೆ ಅವರಿಗೂ ಮನವಿ ಮಾಡಿಕೊಳ್ಳುತ್ತೇನೆ, ಅವರು ಕೂಡಲೇ ಮಂಡ್ಯಕ್ಕೆ ಬಂದು ಎಲ್ಲಾ ಶಾಸಕರ ತಾಲ್ಲೂಕು ಬೋರ್ಡ್ ಅಧ್ಯಕ್ಷರ, ಅಧಿಕಾರಿಗಳ ಸಭೆ ಕರೆದು, ಅಲ್ಲಿ ದೀರ್ಘವಾಗಿ ಚರ್ಚೆಮಾಡಿ. ವಸ್ತುಸ್ಥಿತಿ ಏನು ಎನ್ನುವುದನ್ನು ಅರಿತುಕೊಂಡು ಸರ್ಕಾರಕ್ಕೆ ರಿಪೋರ್ಟ್ ಮಾಡಿ ಕಾರ್ಯಕ್ರಮ ಕೈಗೊಳ್ಳತಕ್ಕಂಥಾದ್ದು ಸೂಕ್ತ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

† ಶ್ರೀ ವಿ. ಮಸಿಯಪ್ಪ (ಚಿತ್ರದುರ್ಗ).— ಸನ್ಮಾನ್ಯ ಅಧ್ಯಕ್ಷರೇ. ಮಾನ್ಯ ಕಂದಾಯ ಮಂತ್ರಿಗಳು ಕೊಟ್ಟಿರತಕ್ಕ ವರದಿಯಲ್ಲಿ ಈ ಅಭಾವ ಪರಿಸ್ಥಿತಿ ಬಗ್ಗೆ ಚಿತ್ರದುರ್ಗ ಜಿಲ್ಲೆಗೆ ಸಂಬಂಧಪಟ್ಟಿರತಕ್ಕ ವರದಿಯನ್ನು ನೋಡಿದಲ್ಲಿ ಅವರ ವರದಿ ಬಹು ಮಟ್ಟಿಗೆ ಪರ್ವಾಗಿಲ್ಲ ಎಂದು ಕಂಡರೂ ಕೂಡ, ಮಳೆ ಪರಿಸ್ಥಿತಿ ಆಗಲಿ, ಬಿತ್ತನೆಯಾಗಲಿ ಕಂಡರೂ ಕೂಡ ಕೆಲವು ಮಟ್ಟಿಗೆ ಅದರಲ್ಲಿ ವಾಸ್ತವಾಂಶಕ್ಕೆ ಸ್ವಲ್ಪ ದೂರವಾಗಿ ಕಂಡುಬರುತ್ತದೆ. ಚಿತ್ರದುರ್ಗ ಡಿಸ್ಟ್ರಿಕ್ಟ್‌ನಲ್ಲಿ ಹೊಸದುರ್ಗ, ಹೊಳಲ್ಕೆರೆಯಲ್ಲಿ ಮುಂಗಾರಿನಲ್ಲಿ ಸ್ವಲ್ಪ ಮಟ್ಟಿಗೆ ಮಳೆಯಾಗಿತ್ತು. ಎಳ್ಳು, ಜೋಳ, ಹೈಬ್ರಿಡ್ ಜವಾರನ್ನು ಕೆಲವರು ಬಿತ್ತಿದ್ದರು. ಆದರೆ ಇವತ್ತಿನ ದಿವಸ ಅದೆಲ್ಲವೂ ಒಣಗಿ ನಿಂತಿದೆ. ಆ ಜೋಳವನ್ನು ಬರೀ ಫಾಡರಾಗಿ ಉಪಯೋಗಿಸುತ್ತೇವೆ ಅಂದರೂ ಕೂಡ ಅದನ್ನು ದನ ತಿಂದರೆ ದನದ ಕುತ್ತಿಗೆ ಕಟ್ಟಿಕೊಂಡು ಸಾಯತಕ್ಕ ಪರಿಸ್ಥಿತಿಯಿದೆ, ಹಿರಿಯೂರು ತಾಲ್ಲೂಕಿನಲ್ಲಿ ಸ್ವಲ್ಪ ಮಟ್ಟಿಗೆ ಮಳೆ ಬಂದಿದೆ ಎಂದು ಹೇಳಿದ್ದೀರಿ. ಹೊಳಲ್ಕೆರೆ, ಜಗಳೂರುಗಳಲ್ಲಿ ಮಳೆ ಬಂದಿದೆ ಎಂದು ಹೇಳಿರತಕ್ಕಂಥಾದ್ದು ಸತ್ಯಕ್ಕೆ ದೂರವಾದುದು. ಹಿರಿಯೂರು ತಾಲ್ಲೂಕಿನ ಒಂದು ಹೋಬಳಿ ಮತ್ತು ಕಸಬಾ ಹೋಬಳಿಯಲ್ಲಿ ಕೆಲವು ಹಳ್ಳಿಗಳಲ್ಲ ಮಾತ್ರ ಸ್ವಲ್ಪ ಮಟ್ಟಿಗೆ ಮಳೆ ಬಂದಿದೆ. ಅರ್ಧ ತಾಲ್ಲೂಕು ಪೂರ್ತಿ ಮಳೆ ಬಂದಿಲ್ಲ, ಚಿತ್ರದುರ್ಗ ತಾಲ್ಲೂಕು ಪೂರ್ತಿ ಮಳೆ ಬಂದಿಲ್ಲ. ಹಾಗೆಯೇ ಚಳ್ಳಕೆರೆ ತಾಲ್ಲೂಕಿನಲ್ಲಿಯೂ ಕೂಡ ಮಳೆ ಬಂದಿಲ್ಲ. ಆದುದರಿಂದ ತಾವು ಕೊಟ್ಟಿರತಕ್ಕ ವರದಿಯಲ್ಲಿ ಅಷ್ಟು ಸತ್ಯಾಂಶವಿಲ್ಲ ಲೇಟೆಸ್ಟ್ ಪೊಸಿಷನ್ ತಾವು ಹೇಳಿದಿರಿ ಎಲ್ಲಾ ಕಡೆ ಮಳೆಯಾಗಿಲ್ಲ ಬಿತ್ತಿರತಕ್ಕಂಥಾದ್ದು ಒಣಗಿದೆ, ಅಭಾವ ಪರಿಸ್ಥಿತಿ ಇದೆ ಎಂದು ತಾವು ಹೇಳುತ್ತೀರಿ. ಇದರ ಜೊತೆಗೆ ತಾವು ಕೊಡತಕ್ಕ ಪರಿಹಾರದ ಸೌಲಭ್ಯಗಳ ವಿಷಯದಲ್ಲಿ ನಾವು ಪ್ರಸ್ತಾಪ ಮಾಡುವುದಾದರೆ, ತಾವು ಕೊಟ್ಟಿರತಕ್ಕ ಸ್ಟೇಟ್‌ಮೆಂಟಿನಲ್ಲಿ ಡಿವಿಜನ್‌ವೈಸ್ ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ಇದನ್ನು ನೋಡಿದರೆ ೪೪೦೦ ಜನ ಪಿಡಬ್ಲ್ಯೂಡಿಯಲ್ಲಿ ಸಾಯಿಲ್ ಕನ್ಸರ್ವೇಷನ್‌ನಲ್ಲಿ ೨೯೬೪ ಜನ, ಅಫಾರ್‌ಸ್ಟೇಷನ್‌ನಲ್ಲಿ ೩೭೪೦ ಜನ ಎಂದು ಕೊಟ್ಟಿದ್ದೀರಿ. ಡಿವಿಜನ್‌ವೈಸ್ ಕೊಟ್ಟಿರತಕ್ಕದ್ದರಲ್ಲಿ ಸಂಖ್ಯೆ ತಮಗೆ ಕಾಣಬಹುದೇ ವಿನ ಡಿಸ್ಟ್ರಿಕ್ಟ್‌ವೈಸ್ ಡಿವೈಡ್ ಮಾಡಿದರೆ ಇವತ್ತು ಪಿಡಬ್ಲ್ಯೂಡಿಯಲ್ಲಿ ಒಂದು ಡಿಸ್ಟ್ರಿಕ್ಟ್‌ಗೆ ಸರಾಸರಿ ಲೆಕ್ಕ ತೆಗೆದುಕೊಂಡರೆ ೧೧೦೦ ಜನ ಇಡೀ ಡಿಸ್ಟ್ರಿಕ್ಟ್‌ನಲ್ಲಿ ಅಂದರೆ ತಾಲ್ಲೂಕ್‌ವೈಸ್ ಬ್ರೇಕಪ್ ಆದರೆ ಎಷ್ಟು ಆಗುತ್ತದೆ ಅಂದರೆ ತಾಲ್ಲೂಕಿಗೆ ೧೦೦-೨೦೦ ಜನ ಕೆಲಸ ಮಾಡುತ್ತಿಲ್ಲ ಎಂದು ಗೊತ್ತಾಗುತ್ತದೆ. ಹಾಗೆ ಇದನ್ನು ಬ್ರೇಕಪ್ ಮಾಡುತ್ತಾ ಹೋದರೆ ತಾಲ್ಲೂಕ್‌ವೈಸ್ ನಡೆಯುತ್ತಾ ಇರತಕ್ಕ ಯಾವುದೇ ಕೆಲಸವಾಗಲಿ ಪಿಡಬ್ಲ್ಯೂಡಿ ಬಜ್ಜೆಟೆಡ್ ವರ್ಕ್ಸ್ ಆಗಲಿ. ಸಾಯಿಲ್ ಕನ್ಸರ್ವೇಷನ್ ಆಗಲಿ, ಎನ್‌ಆರ್‌ಇಪಿ ಆಗಲಿ. ಅಫಾರ್‌ಸ್ಟೇಷನ್ ಆಗಲಿ, ಯಾವುದರಲ್ಲೂ ಕೂಡ ಸಾಕಷ್ಟು ಪ್ರಮಾಣದಲ್ಲಿ ಕೆಲಸಗಳು ನಡೆಯುತ್ತಾ ಇಲ್ಲ. ಈ ಅಭಾವ ಪರಿಸ್ಥಿತಿಗೂ ಇದಕ್ಕೂ ಇರತಕ್ಕ ಒಂದು ವ್ಯತ್ಯಾಸವನ್ನು ತಾವು ಮನಗಾಣಬೇಕು, ಅಂದರೆ ಬಜ್ಜೆಟೆಡ್ ವರ್ಕ್ಸ್, ಕಂಟ್ರಾಕ್ಟೆಡ್ ವರ್ಕ್ಸ್, ಕಂಟ್ರಾಕ್ಟರ್ ಮೂಲಕ ನಡೆಸತಕ್ಕ ಕೆಲಸದಲ್ಲಿ ಪರ್ಮನೆಂಟ್ ಎಂಪ್ಲಾಯಿ ಆಗಿರತಕ್ಕ ಲೇಬರರ್ಸ್ ಏನಿದ್ದಾರೆ ಅವರು ಇವತ್ತಿನ ದಿವಸ ವಿಶೇಷವಾಗಿ ಅಭಾವಕ್ಕೆ ಒಳಗಾಗಿರತಕ್ಕವರು ಅಂದರೆ ವ್ಯವಸಾಯ ಕೂಲಿಗಾರರು ಮತ್ತು ಮೀಡಿಯಂ ಫಾರ್ಮರ್ಸ್.

೫–೦೦ ಪಿ. ಎಂ.

ಕೆಲಸವಿಲ್ಲದೇ ತೊಂದರೆ ಪಡುತ್ತಿರುವವರಿಗೆ ಕೆಲಸ ಕೊಡಿಸಿಕೊಡತಕ್ಕ ಯಾವುದೇ ಕಾರ್ಯಕ್ರಮವನ್ನೂ ಕೂಡ ಮಾಡಿಲ್ಲ, ಸ್ವಾಮಿ, ಜನ ನಮ್ಮನ್ನು ಈ ಕಷ್ಟದಿಂದ ಪಾರು ಮಾಡುತ್ತಾರೆಂದು ನೂರಕ್ಕೆ ನೂರರಷ್ಟು ನಂಬಿಕೊಂಡಿದ್ದಾರೆ. ಸರ್ಕಾರ ನಮ್ಮನ್ನು ಕೈ ಬಿಡುವುದಿಲ್ಲವೆಂದು ಧೃಡವಾಗಿ ನಂಬಿಕೊಂಡಿದ್ದಾರೆ. ಆದುದರಿಂದ ಈಗಲಾದರೂ ಎಚ್ಚೆತ್ತುಕೊಳ್ಳಬೇಕೆಂದು ಹೇಳುತ್ತೇನೆ. ಇವತ್ತು ಸಾಯಿಲ್ ಕನ್‌ಸರ್‌ವೇಷನ್ ಕೆಲಸ ನಡೆಯುತ್ತಿಲ್ಲ ಯಾವುದೇ ರಿಲೀಫ್ ಕೆಲಸ ನಡೆಯುತ್ತಿಲ್ಲ. ಡಿಸಿಲ್ಟಿಂಡ್ ಕೆಲಸ ನಡೆಯುತ್ತಿಲ್ಲ. ನೂರಾರು ಜನಕ್ಕೆ ಉದ್ಯೋಗವನ್ನು ಒದಗಿಸತಕ್ಕ ಲೇಬರ್ ಓರಿಯೆಂಟೆಡ್ ಕೆಲಸ ನಡೆಯುತ್ತಿಲ್ಲ. ನಿಮ್ಮ ಎನ್‌ಆರ್‌ಇಪಿನಲ್ಲಿ ಏನು ಲಿಸ್ಟ್ ಕೊಟ್ಟಿದ್ದೀರಿ ಆ ಲಿಸ್ಟ್‌ನಲ್ಲಿ ರತಕ್ಕುದ್ದನ್ನು ಎಲ್ಲಾ ಕಡೆಗಳಲ್ಲೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಇನ್ನು ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಹುಲ್ಲಿನ ಅಭಾವವಿದೆ. ದಾವಣಗೆರೆ ಹರಿಹರ ತುಂಗಬಧ್ರ, ಗಂಗಾವತಿ ಕಡೆಗಳಲ್ಲಿ ಮೇವು ಏನು ಸಿಗುತ್ತಿದೆ, ಅದನ್ನು ಹಿಂದೆ ಲಾರಿಗಳಲ್ಲಿ ಕಡಿಮೆ ದರದಲ್ಲಿ ರೈತರಿಗೆ ಒದಗಿಸಿಕೊಟ್ಟಿದ್ದರು, ಆದೇ ರೀತಿ ಈ ಸಾರಿಯೂ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಡಿವಿಷನಲ್ ಕಮಿಷನರ್

ರವರಿಗೆ ರಿಲೀಫ್ ವರ್ಕ್ಸ್‌ಗಳಿಗೆ ಹಣವನ್ನು ೨೮೦ ಹೆಡ್ ಆಫ್ ಅಕೌಂಟ್ ಕೆಳಗೆ ಖರ್ಚು ಮಾಡಲು ಅಪ್ಪಣೆ ಕೊಡಿಸಿದ್ದೀರಿ. ಆದರೆ ಯಾವ ಯಾವ ಡಿವಿಜನ್‌ಗೆ ಎಷ್ಟೆಷ್ಟು ಹಣವನ್ನು ರಿಲೀಫ್ ವರ್ಕ್ಸ್‌ಗಳಿಗೆ ಕೊಟ್ಟಿದ್ದೀರಿ ಎನ್ನುವುದನ್ನು ಇಲ್ಲಿಯವರೆಗೆ ಇದರಲ್ಲಿ ಹೇಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾವು ಪ್ರತಿಯೊಂದು ಡಿವಿಜನ್‌ಗೂ ಅಲಾಟ್‌ಮೆಂಟ್ ಮಾಡಿದ್ದೇವೆ. ನೀವು ಖರ್ಚು ಮಾಡಿದರೆ ಇನ್ನೂ ಕೊಡುತ್ತೇವೆಂದು ಎಲ್ಲರಿಗೂ ತಿಳಿಸಿದ್ದೇವೆ.

ಶ್ರೀ ವಿ. ಮುಸಿಯಪ್ಪ.— ಹಿಂದೆ ಇಂಥಾ ಪರಿಸ್ಥಿತಿ ಬಂದಾಗ ಸಂಬಂಧಪಟ್ಟ ಎಂಎಲ್ಎ ಗಳನ್ನು ಕರೆಸಿ ಮಾತನಾಡಿದ್ದೀರಿ, ಬಹುತೇಕವಾಗಿ ಎಲ್ಲಾ ಜಿಲ್ಲೆಗಳಲ್ಲೂ ಈ ಅಭಾವ ಪರಿಸ್ಥಿತಿ ಉಂಟಾಗಿರುವುದರಿಂದ ಇದರ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ಸರಿಯಾದ ವ್ಯವಸ್ಥೆ ಮಾಡಿ ಜನತೆಗೆ ಸರ್ಕಾರದಲ್ಲಿ ನಂಬಿಕೆ ಉಂಟಾಗುವಂತೆ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ,

ಶ್ರೀ ಮಂಜೇಗೌಡ (ಮದ್ದೂರು).— ಸನ್ಮಾನ್ಯ ಸಭಾಧ್ಯಕ್ಷರೇ, ಬಹುಶಃ ಮದ್ದೂರು ನಮ್ಮ ಮಂಡ್ಯ ಜಿಲ್ಲೆಯ ಕೊನೆಯಲ್ಲಿದೆ. ಕನ್ನಂಬಾಡಿ ಜಲಾಶಯದ ಕೊನೆಗೆ ಮತ್ತು ಶಿಂಷಾ ನದಿಗೂ ದೂರವಾಗಿದ್ದು ಯಾವಾಗಲೂ ಕ್ಷಾಮ ಪೀಡಿತ ಪ್ರದೇಶವಾಗಿರುವುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರವಾಗಿದೆ. ಇದಕ್ಕೆ ಪ್ರತಿ ವರ್ಷವೂ ಪರಿಹಾರ ಧನಕ್ಕಾಗಿ ೧೦ ಲಕ್ಷ ರೂಪಾಯಿಗಳನ್ನು ಕೊಟ್ಟುಕೊಂಡು ಬಂದಿದ್ದೀರಿ. ಆದರೆ ದುರಾದೃಷ್ಟವಶಾತ್ ಬಹಶ: ನಮ್ಮ ರೆವಿನ್ಯೂ ಮಂತ್ರಿಗಳವರಿಗೆ ಏನು ವರದಿ ಬಂದಿದೆ ಅದು ಸುಳ್ಳು, ಸುಳ್ಳಾಗಿರದಿದ್ದರೆ ನಾನು ರಾಜಿನಾಮೆ ಕೊಡುತ್ತೇನೆ. ಅವರಿಗೆ ಅಧಿಕಾರಿಗಳು ಬಹುಶಃ ಸರಿಯಾದ ವರದಿಯನ್ನು ಕೊಟ್ಟಿಲ್ಲವೆಂದು ಕಾಣುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನನಗೆ ಏನೇ ಕೆಲಸವಿದ್ದರೂ ಕೂಡ ಮಾನ್ಯ ಮಂಜೇಗೌಡರವರು ದಿನಕ್ಕೆ ೧೦ ಸಾರಿ ನನ್ನ ಮುಖವನ್ನು ನೋಡುತ್ತಿರುತ್ತಾರೆ, ನಮ್ಮ ಅಧಿಕಾರಿಗಳು ತಪ್ಪು ವರದಿ ಕೊಟ್ಟಿದ್ದರೆ ತಾವೇ ಸ್ವತಃ ಖುದ್ದಾಗಿ ಹೇಳಬಹುದಾಗಿತ್ತಲ್ಲಾ. ನೀವು ಹೇಳಿದ್ದರೆ ಕೂಡಲೇ ನಾನು ಡಿ.ಸಿ.ಯವರನ್ನು ಕಂಟ್ಯಾಕ್ಟ್ ಮಾಡಿ ನಿಮ್ಮ ಪ್ರಾಬ್ಲಂನ್ನು ಸಾಲ್ವ್ ಮಾಡುತ್ತಿದೆ.

ಶ್ರೀ ಮಂಜೇಗೌಡ.— ಇನ್ನೂ ಸಮಯವೇನೂ ಮೀರಿ ಹೋಗಿಲ್ಲ. ಏತಕ್ಕೆಂದರೆ ಜೂನ್, ಜುಲೈ ತಿಂಗಳಲ್ಲಿ ನಮ್ಮ ಭಾಗದಲ್ಲಿ ಮಳೆಯಾಗುವುದು. ನನ್ನ ಕ್ಷೇತ್ರದಲ್ಲಿ ನೂರಕ್ಕೆ ೯೦ ಭಾಗ ಮಳೆ ಆಗದೇ ಇದ್ದಾಗ ಯಾರೂ ನಾಟಿ ಮಾಡುವುದಕ್ಕೆ ಹೋಗುವುದಿಲ್ಲ, ಇನ್ನು ೮–೧೦ ದಿವಸದಲ್ಲಿ ಮಳೆಯಾದರೆ ನಾಟಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಯಾವ ಕೆರೆಯಲ್ಲೂ ನೀರು ಇಲ್ಲ, ದನಕರುಗಳಿಗೆ ಕುಡಿಯಲು ನೀರಿಲ್ಲ. ನಿಮ್ಮ ಜಿಲ್ಲಾಧಿಕಾರಿಗಳು ಇದನ್ನು ನೋಡಿ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ, ಅದು ಸತ್ಯವಾದ ವಿಚಾರ. ನಮ್ಮಲ್ಲಿ ಇನ್ನೂ ಫಸಲೇ ಹಾಕಿಲ್ಲ. ಹೇಗೆ ಎಫೆಕ್ಟ್ ಆಗುತ್ತದೆ? ಇದರಿಂದ ನಮ್ಮಲ್ಲಿ ಕ್ಷಾಮ ಉಂಟಾಗುವ ಪರಿಸ್ಥಿತಿ ಒದಗಿದೆ. ಬೇಕಾದರೆ ತಾವು ಸಂಬಂಧಪಟ್ಟ ಅಧಿಕಾರಗಳಿಂದ ವರದಿಯನ್ನು ತರಿಸಿಕೊಂಡು ನೋಡಿ, ಇದಕ್ಕೆ ಶಾಶ್ವತವಾದ ಪರಿಹಾರವನ್ನು ಒದಗಿಸುವುದಾದರೆ ನಮ್ಮಲ್ಲಿ ಏತದ ನೀರಾವರಿ ಯೋಜನೆಗಳನ್ನು ಕೈಕೊಳ್ಳಬೇಕಾಗಿದೆ. ಅದಕ್ಕಾಗಿ ಸುಮಾರು ೧೩ ಯೋಜನೆಗಳನ್ನು ಸಿದ್ಧ ಮಾಡಿ ಶಿಂಷಾ ನದಿಯಿಂದ ನೀರನ್ನು ಒದಗಿಸುವುದಕ್ಕೆ ಬಗೆ ಸರ್ಕಾರಕ್ಕೆ ಹೋಗಿದೆ. ಮಾನ್ಯ ಮುಖ್ಯ ಮಂತ್ರಿಯವರು ಕೂಡ ಇದರ ಬಗ್ಗೆ ಆಜ್ಞೆ ಮಾಡಿದ್ದರೂ ಕೂಡ ಇನ್ನೂ ಕಾರ್ಯಗತವಾಗಿಲ್ಲ. ಆದುದರಿಂದ ಈ ೧೩ ಯೋಜನೆಗಳನ್ನು ಕಾರ್ಯಗತ ಮಾಡಿದರೆ ನಮ್ಮಲ್ಲಿರತಕ್ಕ ಕ್ಷಾಮ ಪೀಡಿತ ಭಾಗ ವೇನಿದೆ ಅದು ಪೂರ್ಣವಾಗಿ ಹೋಗುತ್ತದೆ. ಆದುದರಿಂದ ನಮ್ಮಲ್ಲಿಗೆ ಕ್ಷಾಮ ಪೀಡಿತ ಪ್ರದೇಶವೆಂದು ಪರಿಹಾರ ಕೊಡುವುದು ಬೇಡ, ಲಿಫ್ಟ್ ಇರಿಗೇಷನ್ ಸ್ಕೀಂನ್ನು ಜಾರಿ ಮಾಡಿಕೊಡಿ ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ).— ಮಾನ್ಯ ಅಧ್ಯಕ್ಷರೇ, ಬರಗಾಲ ಪರಿಸ್ಥಿತಿಯ ಬಗ್ಗೆ ಮಾತನಾಡುವುದಕ್ಕೂ ಕೂಡ ತಿಂಗಳಾನುಗಟ್ಟಲೆ ಕಾದಮೇಲೆ ಕೊನೆಯದಿವಸಅವಕಾಶವನ್ನು ತಾವುಕೊಟ್ಟಿರುವುದನ್ನು ನೋಡಿದರೆ ಇಲ್ಲೂ ಸಹ ಒಂದು ರೀತಿಯಲ್ಲಿ ಬರಗಾಲ ಕಾಣುತ್ತಿದೆಯೆಂದು ನಾನು ಅಂದುಕೊಳ್ಳುತ್ತೇನೆ. ಇದು ಬರಗಾಲ ದಿಶೆಯಿಂದ ಕಲಿತ ಪಾಠವೆಂದು ಹೇಳಿ ಈಗಾಗಲೇ ಎಗ್ಜಿಕ್ಯುಟಿವ್ ಆಫೀಸರ್ ರವರಿಗೂ ಮತ್ತು ಜನತಾ ಪ್ರತಿನಿಧಿಗಳಿಗೂ ಪ್ರತಿಯೊಬ್ಬರಿಗೂ ಗೊತ್ತಿರತಕ್ಕ ವಿಚಾರವಾಗಿದೆ. ಅಭಾವ

ಪರಿಸ್ಥಿತಿ ಉಂಟಾಗಿರತಕ್ಕ ಪ್ರದೇಶಗಳಲ್ಲಿ ನೀವು ಕೆಲಸ ಕಾರ್ಯಗಳನ್ನು ಕೈಗೊಳ್ಳುವಾಗ ನೊಂದು ಬೆಂದ ಜನರಿಗೆ ಹತ್ತಿರವಾಗುವ ಹಾಗೆ ಕೆಲಸಗಳನ್ನು ಕೈಗೊಳ್ಳಬೇಕು. ಇಲ್ಲವೆಂದರೆ ಅವರು ಬಹಳ ದೂರಕ್ಕೆ ಕೆಲಸಕ್ಕೆ ಹೋಗಿ ಬರಬೇಕೆಂದರೆ ಬಹಳ ಕಷ್ಟವಾಗುತ್ತದೆ. ನೀವು ಕೆಲಸ ಕೊಡುವ ಕಡೆಯು ದವಸಧಾನ್ಯವಿದೆಯೆಂದು ಹೇಳುತ್ತೀರಿ. ಆದರೆ ಅವನು ದವಸಧಾನ್ಯಗಳನ್ನು ಕೊಂಡುಕೊಳ್ಳುವುದಕ್ಕೂ ಶಕ್ತಿ ಇಲ್ಲದವನಾಗಿದ್ದಾನೆ. ಅವರಿಗೆ ಕಾರ್ಡ್‌ನ್ನು ಒಂದೊಂದು ಸಲ ಕೊಟ್ಟಿದ್ದೀರಿ. ಇದರ ಜೊತೆಗೆ ಕೂಲಿ ಜೊತೆಗೆ ಕಾಳು ಸಹ ಸಿಕ್ಕುವ ಹಾಗೆ ವ್ಯವಸ್ಥೆ ಮಾಡುವುದು ಬಹಳ ಮುಖ್ಯವಾದುದೆಂದು ಕೊಂಡಿದ್ದೇನೆ.

ತಮ್ಮ ವರದಿಯಲ್ಲಿ ನೆಲಮಂಗಲ ತಾಲ್ಲೂಕಿನ ಹೆಸರು ಇಲ್ಲ. ಅದು ಸಮೃದ್ಧಿಯಾದ ತಾಲ್ಲೂಕು ಎಂದು ಭಾವಿಸಿದ್ದೀರೋ ಅಥವಾ ಕೈ ಬಿಟ್ಟು ಹೋಗಿದೆಯೋ ಎಂಬುದನ್ನು ಹೇಳಬೇಕು. ಎಲ್ಲ ತಾಲ್ಲೂಕುಗಳ ಚಿತ್ರಗಳನ್ನು ಕೊಟ್ಟಿದ್ದೀರಿ, ಆದರೆ ನೆಲಮಂಗಲದ್ದು ಮಾತ್ರ ಇಲ್ಲ, ಇದು ಏತಕ್ಕೆ ಎಂದು ಗೊತ್ತಾಗಲಿಲ್ಲ. ಈ ಬಗ್ಗೆ ಉತ್ತರ ಕೊಡತಕ್ಕ ಸಂದರ್ಭದಲ್ಲಿ ಹೇಳಬೇಕು. ಮೇವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದಕ್ಕೆ ಡೆಪ್ಯೂಟಿ ಕಮೀಷನರ್ ಹತ್ತಿರ ದುಡ್ಡಿಲ್ಲವೆನ್ನುತ್ತಾರೆ. ಹೋದಸಾರಿ ಅಷ್ಟು ದುಡ್ಡು ಇಟ್ಟಿದ್ದೀರಿ. ಆದರೆ ಎಲ್ಲಿಂದ ಎಲ್ಲಿಗೆ ಸಾಗಿಸಿದರು. ಎಷ್ಟು ದುಡ್ಡು ಖರ್ಚಾಯಿತು ಎಂಬುದನ್ನು ಹೇಳಲಿಲ್ಲ. ಸಮಯಕ್ಕೆ ಸರಿಯಾಗಿ ದುಡ್ಡು ಖರ್ಚು ಮಾಡಿ ನೊಂದು–ಬೆಂದ ಜನ–ಜಾನುವಾರುಗಳಿಗೆ ಮೇವನ್ನು ಕೊಡುವ ವ್ಯವಸ್ಥೆಯನ್ನು ಏತಕ್ಕೆ ಮಾಡುವುದಿಲ್ಲವೆಂದು ಕೇಳಬೇಕಾಗುತ್ತದೆ. ಹುಲ್ಲನ್ನು ಕೊಂಡು ಕೊಂಡು ಬನ್ನಿ, ಆಮೇಲೆ ಬಿಲ್ ಮಾಡಿ ದುಡ್ಡು ಕೊಡುತ್ತೇವೆಂದು ಹೇಳತಕ್ಕ ಸಂದರ್ಭಗಳು ಇರುತ್ತವೆ. ಮೊದಲು ಮೇವು ತಂದು ಹಾಕಿ, ಆಮೇಲೆ ದುಡ್ಡು ಕೊಡುತ್ತೇವೆಂದರೆ ಬರಗಾಲ ಕಂಡ ಜನರು ಆಡುವ ಮಾತೇ ಅಥವಾ ಹೊಟ್ಟೆ ತುಂಬಿದ ಜನರು ಆಡುವ ಮಾತೇ ಎಂಬುದನ್ನು ಯೋಚಿಸಬೇಕು. ಬರಗಾಲ ಪ್ರದೇಶಕ್ಕೆ ಏನು ಸಹಾಯ ಬೇಕು ಅದನ್ನು ಮೊದಲು ಮಾಡಬೇಕು. ಮಳೆ ಬಂದರೆ ನಮಗೆ ನಿಮಗೆ ಎಲ್ಲ ಒಳ್ಳೆಯ ಆಹಾರ–ವಿಹಾರ, ಇಲ್ಲದಿದ್ದರೆ ಬಹಳ ಕಷ್ಟ. ಗ್ರಾಮಾಂತರ ಪ್ರದೇಶಗಳಲ್ಲಿ ಮಳೆ ಹೋದರೆ ದನಗಳಿಗೆ, ಜನಗಳಿಗೆ ನೀರು ಬರತಕ್ಕ ಸರೋವರಗಳು, ಕೆರೆಗಳೆಲ್ಲ ಒಣಗಿ ಹೋಗುತ್ತವೆ. ಈ ಬಗ್ಗೆ ಕಳೆದ ೧೦ ವರ್ಷಗಳಿಂದ ಹೇಳಿದರೂ ಕೂಡ ಅಧಿಕಾರಿಗಳು ಆ ಕಡೆ ಗಮನ ಹರಿಸಿ ಸೂಕ್ತ ವ್ಯವಸ್ಥೆ ಮಾಡಿಲ್ಲ. ಎಲ್ಲೋ ಒಂದೆರಡು ಕಡೆ ಬಾವಿ ತೆಗೆಯುತ್ತಾರೆ, ಅಲ್ಲಿ ನೀರು ಬರುವುದಿಲ್ಲ, ಹಣವನ್ನು ವ್ಯರ್ಥವಾಗಿ ವ್ಯಯ ಮಾಡುತ್ತಾರೆ. ಆದ್ದರಿಂದ, ಮೊದಲು ನೀರು ಬರತಕ್ಕ ಸ್ಥಳವನ್ನು ಗುರುತಿಸಿ ಅದರ ಪಟ್ಟಿಯನ್ನು ಇಟ್ಟಿರತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೆಲಮಂಗಲ ತಾಲ್ಲೂಕನ್ನು ಏತಕ್ಕೆ ಸೇರಿಸಿಲ್ಲವೆಂದು ಕೇಳಿದರು. ಅಲ್ಲಿ ಈ ಸಾರಿ ಕಳೆದ ವರ್ಷಕ್ಕಿಂತ ೩೫ ಎಂ. ಎಂ. ಮಳೆ ಜಾಸ್ತಿ ಬಂದಿರುವುದರಿಂದ ಸೇರಿಸಿಲ್ಲ.

ಶ್ರೀ ಕೆ. ಪ್ರಭಾಕರ್.— ತಾವು ಕೊಟ್ಟಿರತಕ್ಕ ವರದಿ ಜೂನ್ ತಿಂಗಳಲ್ಲಿ ತಯಾರಿಸಿರತಕ್ಕದ್ದು. ಅದರಲ್ಲಿ ನಮ್ಮ ತಾಲ್ಲೂಕನ್ನು ಏತಕ್ಕೆ ಸೇರಿಸಿಲ್ಲವೆಂದು ಕೇಳುತ್ತಿದ್ದೇನೆ. ಏಕೆಂದರೆ, ಇವತ್ತು ಮಳೆ ಬಂದರೆ ಜೂನ್‌ನಲ್ಲಿ ತಯಾರಿಸಿದ ವರದಿಯನ್ನು ಬದಲಾಯಿಸುವುದಿಲ್ಲ. ಒಟ್ಟಾರೆ ಸೇರಿಸುವಾಗ ಎಲ್ಲೋ ಕೈ ಬಿಟ್ಟು ಹೋಗಿದೆ ಎಂದೂ ಹೇಳಿಲ್ಲ. ಅದು ಸಾಮಾನ್ಯವಾಗಿ ಯಾವಾಗಲೂ ಬರಗಾಲಕ್ಕೆ ತುತ್ತಾಗತಕ್ಕ ಪ್ರದೇಶ, ನೀರಾವರಿ ಸೌಲಭ್ಯ ಕಡಿಮೆ ಇರುವ ಪ್ರದೇಶ. ದನಗಳಿಗೆ ಮೇವು, ಜನಗಳಿಗೆ ದವಸಧಾನ್ಯಗಳನ್ನು ಕಳುಹಿಸಿಕೊಡಬೇಕು. ಮತ್ತು ಅವನ್ನು ಸಕಾಲಕ್ಕೆ ಜನರಿಗೆ ತಲುಪಿಸುವಂಥ ಟೆಕ್ನಿಕ್ ಏನಿದೆ ಅದರಲ್ಲಿ ಅಧಿಕಾರಿಗಳು ಹೆಚ್ಚು ಅನುಭವದಿಂದ ಪ್ಲಾನ್ ಮಾಡಿಕೊಂಡು ಅವು ತಲುಪುವ ಹಾಗೆ ವ್ಯವಸ್ಥೆ ಮಾಡಬೇಕು. ಬರಗಾಲ ಇರತಕ್ಕ ಎಲ್ಲ ಜಿಲ್ಲೆಗಳಲ್ಲೂ ಈ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಕೇವಲ ಬಡವರಿಗೆ ಕೂಲಿ ಸಿಗುವ ವ್ಯವಸ್ಥೆ ಮಾಡಿದ್ದೇವೆಂದು ಅನ್ನುತ್ತೀರಿ. ಬಡವರು ಎಂದರೆ ಹರಿಜನರು, ಜಮೀನು ಇಲ್ಲದೆ ಇರುವವರು, ಅವರಿಗೆ ಕೂಲಿ ಮಾಡುವ ಅವಕಾಶವನ್ನು ಬಿಟ್ಟರೆ ಬೇರೆ ಏನು ಮಾಡಿಲ್ಲ. ಎಲ್ಲಿ ಕೆಲಸ ಇದೆ ಅಲ್ಲಿ ಹೋಗಿ ಕೂಲಿ ಮಾಡಿ ಅನ್ನುತ್ತೀರಿ. ಅವರು ಇರುವ ಸ್ಥಳದಿಂದ ಒಂದೆರಡು ಮೂರು ಮೈಲಿ ದೂರದಲ್ಲಿ ಕೂಲಿ ಮಾಡುವ ಪರಿಸ್ಥಿತಿ ಇದ್ದರೆ ಬಹಳ ಕಷ್ಟವಾಗುತ್ತದೆ. ಸುತ್ತೋಲೆಯಲ್ಲಿ ಸೂಚನೆ ಕೊಡುವಾಗ ಎನ್. ಆರ್. ಇ. ಪಿ. ಯಲ್ಲಿ ಇಂಥಿಂಥ ಕಡೆ ಕೆಲಸ ನಡೆಯುತ್ತಿದೆ ಎಂಬುದನ್ನು ಇಲಾಖೆಯ ಅಧಿಕಾರಿಗಳು ತಿಳಿಸುವ ಹಾಗೆ ಮಾಡಬೇಕು. ಮಳೆ ಬರತಕ್ಕ ಕಾಲವನ್ನು ನೋಡಿಕೊಂಡು ರೈತರಿಗೆ ಅಧಿಕಾರಿಗಳು ಆಗಾಗ್ಗೆ ಸೂಚನೆ ಕೊಡತಕ್ಕ ವ್ಯವಸ್ಥೆ ಆಗಬೇಕು.

ಇಲ್ಲದಿದ್ದರೆ, ತಿಳುವಳಿಕೆ ಇಲ್ಲದ ರೈತರು ಸಂಕಷ್ಟ ಪರಿಸ್ಥಿತಿಗೆ ಒಳಗಾಗುತ್ತಾರೆ. ಆದ್ದರಿಂದ, ಇಂಥ ಎಲ್ಲ ಯೋಜನೆಗಳನ್ನು ಮಾಡಿಕೊಂಡು ಕೆಲಸ ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ಸಲಹೆ ಕೊಡುತ್ತೇನೆ.

ಶ್ರೀ ಅಂದಾನಯ್ಯ (ಕುಣಿಗಲ್). — ತುಮಕೂರು ಜಿಲ್ಲೆ ಪದೇ ಪದೇ ಕ್ಷಾಮಕ್ಕೆ ತುತ್ತಾಗಿ ವರ್ಷೇ ವರ್ಷೇ ಕಷ್ಟ ಅನುಭವಿಸುತ್ತಿದೆ. ನನ್ನ ಕ್ಷೇತ್ರದ ೫ ತಾಲ್ಲೂಕುಗಳಲ್ಲಿ ಇದು ವರೆಗೆ ಬಿತ್ತನೆ ಆಗಿಲ್ಲ. ಈ ವೇಳೆಗೆ ಬಿತ್ತನೆಯಾಗಿ ಒಂದು ತಿಂಗಳ ಮೇಲಾಗಬೇಕಾಗಿತ್ತು. ಮೇಜರ್ ಕೆರೆಗಳನ್ನು ಬಿಟ್ಟರೆ ಬೇರೆ ಯಾವ ಕೆರೆಗಳಲ್ಲೂ ನೀರು ಬಂದಿಲ್ಲ. ಇನ್ನು ಮೇಲೆ ಮಳೆ ಬಂದು ಕೆರೆಗೆ ನೀರು ತುಂಬಿ ಆಮೇಲೆ ನಾಟಿ ಮಾಡುವುದು ಯಾವಾಗ ? ಈಗ ಕೆರೆ ತುಂಬಿದರೂ ಆ ನೀರನ್ನು ಉಪಯೋಗಿಸಲು ಆಗುವುದಿಲ್ಲ ಅನ್ನಿಸುತ್ತದೆ. ಈ ವೇಳೆಗೆ ರಾಗಿ ಬಿತ್ತಿ ಒಂದು ತಿಂಗಳಾಗಬೇಕಾಗಿತ್ತು, ಇದುವರೆಗೆ ಯಾರೂ ಬಿತ್ತಿಲ್ಲ. ಇನ್ನೂ ಮಳೆ ಬಂದಿಲ್ಲ. ಮಾನ್ಯ ಮಂತ್ರಿಗಳು ತಮ್ಮ ವರದಿಯಲ್ಲಿ, ಎನ್. ಆರ್. ಇ. ಪಿ. ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆಂದು ಹೇಳಿದ್ದಾರೆ. ಆದರೆ ಡಿ. ಸಿ. ಯವರು ಹೇಳುತ್ತಾರೆ. ಹಿಂದೆ ಕೊಟ್ಟ ಕೆಲಸಗಳು ಇನ್ನೂ ಪೂರ್ಣವಾಗಿಲ್ಲ, ಅವು ಪೂರ್ಣವಾಗುವವರೆಗೆ ಯಾವುದೇ ಹೊಸ ಕೆಲಸಗಳಿಗೆ ಮಂಜೂರಾತಿ ಕೊಡುವುದಿಲ್ಲವೆಂದು ಹೇಳುತ್ತಾರೆ. ಹಿಂದೆ ಕೊಟ್ಟಂತಹ ಯಾವ ಕೆಲಸಗಳು ಉಳಿದಿವೆ ಎಂದರೆ. ಸಿಮೆಂಟ್ ಇಲ್ಲದೆ ಅನೇಕ ಕಾಮಗಾರಿಗಳು ಉಳಿದಿವೆ. ಇವತ್ತಿಗೂ ಸಿಮೆಂಟ್ ಸರಬರಾಜು ಮಾಡುತ್ತಿಲ್ಲ. ಆದ್ದರಿಂದ ಕೆಲಸಗಳು ನಿಂತಿವೆ. ಅವು ಮುಗಿಯುದ ಹೊರತು ಬೇರೆ ಕೆಲಸಗಳಿಗೆ ಮಂಜೂರಾತಿ ಕೊಡುವುದಿಲ್ಲವೆಂದರೆ ಯಾವ ನ್ಯಾಯ ? ೧೯೭೭ರಲ್ಲಿ ಮಂಜೂರಾಗಿ ಬಂದ ಮೈನರ್ ಇರಿಗೇಷನ್ ವರ್ಕ್ಸ್‌ಗೆ ಇವತ್ತಿನವರೆಗೆ ತಾಂತ್ರಿಕ ಮಂಜೂರಾತಿ ಕೊಟ್ಟಿಲ್ಲ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉಪಸ್ಥಿತರಿದ್ದಾರೆ, ಅವರಿಗೆ ಗ್ರಾಮಾಂತರ ಪ್ರದೇಶದ ಜನರ ಮೇಲೆ ಕಳಕಳಿ ಇದೆ. ಇವತ್ತು ಏನು ಸೀಲಿಂಗ್ ಲಿಮಿಟ್ ಗೊತ್ತು ಮಾಡಿದ್ದಾರೆ. ಅದಕ್ಕೆ ಸಂಬಂಧಿಸಿದ ಫೈಲು ಹಣಕಾಸಿನ ಇಲಾಖೆಗೆ ಬಂದಾಗ ಅಲ್ಲಿ ಕೊಕ್ಕೆ ಹಾಕುತ್ತಾರೆ, ಸೀಲಿಂಗ್ ಲಿಮಿಟ್ ಜಾಸ್ತಿ ಇದೆ ಎಂದು ಕೆಲಸ ತೆಗೆದುಕೊಳ್ಳುವುದಿಲ್ಲವೆಂದು ಫೈಲು ವಾಪಸ್ಸು ಬರುತ್ತದೆ. ರೈತರ ಪ್ರಶ್ನೆ ಬಂದಾಗ ಸೀಲಿಂಗ್ ಲಿಮಿಟ್ ಪ್ರಶ್ನೆ ಬರಬಾರದು. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ದುರ್ಬಲ ವರ್ಗದವರ ಅಭಿವೃದ್ಧಿ ಆಗಬೇಕಾದರೆ ಸೀಲಿಂಗ್ ಲಿಮಿಟ್ ತೆಗೆಯಬೇಕು. ರೈತರ ಪ್ರಶ್ನೆ ಬಂದಾಗ ಸೀಲಿಂಗ್ ಲಿಮಿಟ್ ಇರಕೂಡದು, ರೈತಾಪಿ ಜನ ವಾಸ ಮಾಡತಕ್ಕ ಜಾಗದಲ್ಲಿ ಈ ಒಂದು ಪದ್ಧತಿ ಹೋಗಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಆಗತಕ್ಕ ಮೈನರ್ ಇರಿಗೇಷನ್ ವರ್ಕ್ಸ್‌ಗೆ ಜಾಗ್ರತೆ ಸರ್ಕಾರದ ವತಿಯಿಂದ ಟೆಕ್ನಿಕಲ್ ಸ್ಯಾಂಕ್ಷನ್ ಕೊಡಬೇಕು. ಈಗ ಮಾನ್ಯ ಅರ್ಥ ಮಂತ್ರಿಗಳಿಲ್ಲದಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತರುತ್ತಿದ್ದೇನೆ. ಇವತ್ತು ಸೀಲಿಂಗ್ ಲಿಮಿಟ್ ಎಂದು ಏನು ಹಾಕಿದ್ದೀರಿ ಆ ಎಲ್ಲಾ ಕೆಲಸಗಳಿಗೆ ಕೂಡಲೇ ಟೆಕ್ನಿಕಲ್ ಮಂಜೂರಾತಿಯನ್ನು ಕೊಡಬೇಕೆಂದು ಹೇಳುತ್ತೇನೆ. ಇವತ್ತು ಎನ್. ಆರ್. ಇ. ಪಿ. ಮುಂತಾದ ಕೆಲಸಗಳಿಗೆ ಸಿಮೆಂಟ್ ಇಲ್ಲದೆ ಕೆಲಸ ನಿಂತಿದೆ. ಅವುಗಳಿಗೆ ಹೆಚ್ಚು ಸಿಮೆಂಟ್ ಕೊಡುವಂತೆ ಡಿ. ಸಿ. ಯವರಿಗೆ ಮಾನ್ಯ ಕಂದಾಯ ಮಂತ್ರಿಗಳು ಆದೇಶ ಕೊಡಬೇಕು. ಕೃಷಿ ಕಾರ್ಮಿಕರಿಗೆ ಕೊಡತಕ್ಕ ಕೂಲಿ ಬಹಳ ಕಡಿಮೆ. ೫ ರೂಪಾಯಿಗಳ ಕೂಲಿ ಕೊಟ್ಟರೆ ಯಾರೂ ಬರುವುದಿಲ್ಲ. ಬೇರೆ ಕಡೆ ೧೦ ರೂಪಾಯಿಗಳ ಕೂಲಿ ಕೊಡುತ್ತಾರೆ. ಕನಿಷ್ಟ ಪಕ್ಷ ಕೃಷಿ ಕಾರ್ಮಿಕರಿಗೆ ೧೦ ರೂಪಾಯಿಗಳಷ್ಟು ಆದರೂ ಕೂಲಿ ಗೊತ್ತು ಮಾಡಬೇಕು. ಇಲ್ಲದಿದ್ದರೆ ಅವರಿಗೆ ಏನೂ ಅನುಕೂಲವಾಗುವುದಿಲ್ಲ. ಇನ್ನು ಬೋರ್‌ವೆಲ್ ವಿಚಾರ ಹೇಳುವುದಾದರೆ, ಎಲ್ಲ ಕಡೆ ಬೋರ್‌ವೆಲ್‌ಗಳ ರಿಪೇರಿ ಆಗಿದೆ ಎಂದು ಹೇಳಿದ್ದೀರಿ. ಆದರೆ ನನ್ನ ಕ್ಷೇತ್ರದಲ್ಲಿ ೯೦ ಪರ್ಸೆಂಟ್ ಬೋರ್‌ವೆಲ್‌ಗಳು ಫೆಯಿಲ್ಯೂರ್ ಆಗಿವೆ ಅವುಗಳ ರಿಪೇರಿ ಇದುವರೆಗೆ ಆಗಿಲ್ಲ. ಡಿ. ಸಿ. ಯವರನ್ನು ಕೇಳಿದರೆ ಅದು ಪಿ. ಹೆಚ್. ಇ. ಯವರಿಗೆ ಸಂಬಂಧಪಟ್ಟದ್ದು, ಅವರು ಮಾಡಬೇಕೆಂದು ಹೇಳುತ್ತಾರೆ. ಅವರಲ್ಲಿ ಅದಕ್ಕೆ ಬೇಕಾದ ಸಿಬ್ಬಂದಿ ಇಲ್ಲ ಮೆಕ್ಯಾನಿಕ್‌ಗಳು ಇಲ್ಲ. ಅವರನ್ನು ಇಡೀ ಜಿಲ್ಲೆ ಟೂರ್ ಮಾಡಿ ಅನ್ನುತ್ತೀರಿ, ಆದರೂ ಯಾವ ಕೆಲಸವೂ ಆಗುತ್ತಿಲ್ಲ, ಕುಡಿಯುವುದಕ್ಕೆ ನೀರು ಸಿಗುತ್ತಿಲ್ಲ. ಆದ್ದರಿಂದ, ಮೊದಲು ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವಂತೆ ಆದೇಶ ಕೊಡಬೇಕು. ಹೇಮಾವತಿ ನೀರು ತುಮಕೂರು ಜಿಲ್ಲೆಗೆ ಬರುತ್ತದೆ. ಈ ಜಿಲ್ಲೆ ಯಾವಾಗಲೂ ಬರಗಾಲಕ್ಕೆ ತುತ್ತಾಗುತ್ತದೆ. ಹೇಮಾವತಿ ನದಿಯಿಂದ ೪ ಲಕ್ಷ ಎಕರೆ ಇರಿಗೇಷನ್ ಆಗುವುದಕ್ಕೆ ಅವಕಾಶ ಇದೆ. ಆದ್ದರಿಂದ ಅಲ್ಲಿ ಚಾನಲ್ ವರ್ಕ್ಸ್ ತೆಗೆದುಕೊಂಡು ಕೆಲಸ ಶುರು ಮಾಡಿದರೆ ಸಾವಿರಾರು ಜನರಿಗೆ ಕೂಲಿ ಸಿಗುತ್ತದೆ.

ಹೇಮಾವತಿ ಚಾನಲ್ ಕೆಲಸವನ್ನು ತಕ್ಷಣ ಪ್ರಾರಂಭ ಮಾಡುವಂತೆ ಮಾನ್ಯ ಮುಖ್ಯಮಂತ್ರಿಗಳು ಆದೇಶ ಕೊಟ್ಟರೆ ಆದರಿಂದ ಸಾವಿರಾರು ಬಡಜನರಿಗೆ ಕೂಲಿ ಸಿಗುವ ಏರ್ಪಾಡಾಗುತ್ತದೆ. ಆದ್ದರಿಂದ ಆ ಕೆಲಸ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಮಾನ್ಯ ಸದಸ್ಯರಾದ ಪಂಪಾವತಿಯವರು, ಡಿ. ಟಿ. ಮಾಯಣ್ಣನವರು ಮತ್ತಿತರ ಸದಸ್ಯರು ತಮಗೆ ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಿ ಕೊಂಡರು.)

ಉಪಾಧ್ಯಕ್ಷರು.—ಎಲ್ಲರಿಗೂ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀ ಜೆ. ಎಚ್. ಪಟೇಲ್.—ಸನ್ಮಾನ್ಯ ಉಪಾಧ್ಯಕ್ಷರೆ...

ಶ್ರೀ ಸಿದ್ಧಮಾದಯ್ಯ.—ಮೈಸೂರು ಜಿಲ್ಲೆಯಲ್ಲಿ ಕ್ಷಾಮದಿಂದ ಬಹಳ ಜನರಿಗೆ ತೊಂದರೆಯಾಗಿದೆ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಜೆ. ಎಚ್. ಪಟೇಲ್.—ನನಗಿಂತ ಎರಡು ನಿಮಿಷ ಮುಂಚೆ ಮಾತನಾಡಿಬಿಟ್ಟರೆ ಬರಗಾಲ ಏನೂ ಹೋಗಿಬಿಡುವುದಿಲ್ಲ.

ಶ್ರೀ ಸಿದ್ಧಮಾದಯ್ಯ.—ಮೈಸೂರು ಜಿಲ್ಲೆಯನ್ನು ಕ್ಷಾಮಪೀಡಿತ ಪ್ರದೇಶ ಎಂದು ಘೋಷಿಸ ಬೇಕು. ನನ್ನ ಕ್ಷೇತ್ರದಲ್ಲಿ ಯಳಂದೂರೇ ಮತ್ತು ಕೊಳ್ಳೇಗಾಲ ಸುಮಾರು ೪೦ ಕೆರೆಗಳಿರುವ ಪ್ರದೇಶ. ಕೆರೆಯಲ್ಲಿ ಒಂದು ತೊಟ್ಟು ನೀರಿಲ್ಲ. ಮಳೆ ಇಲ್ಲ. ದನಕರುಗಳಿಗೆ ಹುಲ್ಲಿಲ್ಲ. ಆದ್ದರಿಂದ ಹೂಳು ತೆಗೆಯುವ ವ್ಯವಸ್ಥೆ ಮಾಡಿದರೆ ಬಡವರಿಗೆ ಕೂಲಿ ಸಿಗುತ್ತದೆ. ಇದರಿಂದ ಅನೇಕ ಜನರಿಗೆ ಅನುಕೂಲ ವಾಗುತ್ತದೆ. ಮಳೆ ಇಲ್ಲದಿರುವುದರಿಂದ ಜೋಳದ ಬೆಳೆ ಮಾಡುವುದಕ್ಕಾಗಿಲ್ಲ, ರಾಗಿ ಬೆಳೆ ಇಲ್ಲ. ಪಂಪ್‌ಸೆಟ್ ಇಟ್ಟುಕೊಂಡಿರುವವರು ೧ ಪರ್ಸೆಂಟ್ ಜನ ರಾಗಿ ಸ್ವಲ್ಪ ಬೆಳೆದಿದ್ದಾರೆ. ಇನ್ನು ಮಿಕ್ಕ ೯೯ ಪರ್ಸೆಂಟ್ ಜನ ಏನೂ ಬೆಳೆಯಲು ಸಾಧ್ಯವಾಗದೆ ಕಂಗಾಲಾಗಿದ್ದಾರೆ. ಭತ್ತದ ಒಟ್ಟಲು ಕೂಡ ಒಣಗಿಹೋಗಿ ತೊಂದರೆಯಾಗಿದೆ. ವ್ಯವಸಾಯ ಇಲಾಖೆಯಿಂದ ಅವರಿಗೆ ಪರಿಹಾರ ಒದಗಿಸ ಬೇಕು ಮತ್ತು ಅಲ್ಲಿರತಕ್ಕ ಜನರಿಗೆ ಕೂಲಿ ಸಿಗುವಂತೆ ವ್ಯವಸ್ಥೆ ಮಾಡಿಸಬೇಕು. ಕೂಲಿ ಕೊಡುವಾಗ ವಾರ ಕ್ಕೊಮ್ಮೆ ಅಥವಾ ಹತ್ತು ದಿನಗಳಿಗೊಮ್ಮೆ ಕೊಟ್ಟರೆ ಪ್ರಯೋಜನವಾಗುವುದಿಲ್ಲ. ಪ್ರತಿ ದಿವಸ ಮಜೂರಿ ಕೊಡುವ ವ್ಯವಸ್ಥೆ ಮಾಡಬೇಕು. ಸರ್ಕಾರದವರು ನಮ್ಮ ಭಾಗಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಬರಗಾಲದಿಂದ ನರಳುತ್ತಿರುವವರಿಗೆ ಒಂದು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್ (ಚನ್ನಗಿರಿ) —ಸನ್ಮಾನ್ಯ ಉಪಾಧ್ಯಕ್ಷರೇ, ತಾತ್ಕಾಲಿಕವಾಗಿ ಕೈಗೊಂಡಿರ ತಕ್ಕ ಪರಿಹಾರ ಕಾರ್ಯಕ್ರಮಗಳ ಬಗ್ಗೆ ಅವರು ಸ್ವಲ್ಪ ಹೇಳಿದ್ದಾರೆ. ಆದರೆ ಪ್ರತಿ ವರ್ಷಕ್ಕೊಮ್ಮೆ ಎರಡು ವರ್ಷಕ್ಕೊಮ್ಮೆ ಅಭಾವ ಪರಿಸ್ಥಿತಿ. ಪ್ರವಾಹ ಪೀಡಿತ ಪ್ರದೇಶ ಈ ಬಗ್ಗೆ ಜೊತೆಜೊತೆಯ ಾಗಿ ಮಾತನಾಡುತ್ತಿರುತ್ತೇವೆ. ' ದಕ್ಕೆ ಧೀರ್ಘವಾದ ರಾಷ್ಟ್ರೀಯ ಯೋಜನೆ ಆಗದ ಹೊರತು ಏನೂ ಪ್ರಯೋಜನವಾಗುವುದಿಲ್ಲ. ಕೇಂದ್ರ ಸರ್ಕಾರ ಮುಂದೆ ಬಂದು ಸಾಕಷ್ಟು ರೀತಿಯಲ್ಲಿ ಹಣ ಒದಗಿಸಿ ಈ ಕಾರ್ಯಕ್ರಮಗಳನ್ನು ಮಾಡದಿದ್ದರೆ ಬೆಂಕಿ ಹತ್ತಿದಾಗ ಬಾವಿ ತೆಗಿ ಎಂದು ಹೇಳತಕ್ಕುದು ನಡೆಯುತ್ತಿರು ತ್ತದೆ. ಇದು ಆಗಬಾರದು. ಸ್ವಾತಂತ್ರ್ಯ ಬಂದು ೩೫ ವರ್ಷವಾದಮೇಲೂ ವರ್ಷಕ್ಕೊಮ್ಮೆ ನನಗೆ ಬಾವಿ ತೆಗೆಸಿಕೊಡಿ, ನಮ್ಮ ಊರಿಗೆ ಜೋಳ ಕಳುಹಿಸಿಕೊಡಿ, ರಾಗಿ ಕಳುಹಿಸಿಕೊಡಿ ಎಂದು ಕೇಳುವುದ ಕ್ಕಿಂತ ನಾಚಿಕೆಗೇಡಿನ ಕೆಲಸ ಇನ್ನೊಂದಿಲ್ಲ. ಇಲ್ಲಿ ಶಿವಮೊಗ್ಗ ಜಿಲ್ಲೆ ಬಗ್ಗೆ ಕೊಟ್ಟಿರುವ ವರದಿ ನೋಡಿ ದರೆ ನನಗೆ ಆಶ್ಚರ್ಯವಾಗುತ್ತದೆ, ಯಾವಯಾವ ತಾಲ್ಲೂಕಿನಲ್ಲಿ ಬರಗಾಲವಿದೆ ಏನು ಕ್ರಮ ತೆಗೆದು ಕೊಂಡಿದ್ದೀರಿ ಎಂದು ಕೇಳಿದರೆ ಮಳೆ ಬಂದಿದ್ದು ಹೇಳಿದ್ದೀರಿ ಶಿವಮೊಗ್ಗ ತಾಲ್ಲೂಕಿನಲ್ಲಿ ೫೪೫ ಮಿಲಿ ಮೀಟರ್ ಮಳೆ ಬಂದಿದೆ, ಹೊಸನಗರದಲ್ಲಿ ೧೨೮೦ ಮಿಲಿ ಮೀಟರ್ ಮಳೆ ಬಂದಿದೆ ಎಂದು ಮಳೆಯ ಅಂಕಿಸಂಖ್ಯೆಯನ್ನು ಕೊಟ್ಟು ಜನರನ್ನು ತಪ್ಪುದಾರಿಗೆ ಎಳೆದಿದ್ದೀರಿ. ಉದಾಹರಣೆಗೆ ಚನ್ನಗಿರಿ ತಾಲ್ಲೂಕಿನಲ್ಲಿ ೨/೩ ಭಾಗ ನೀರು ಭದ್ರಾ ಜಲಾಶಯದಿಂದ ಬರುತ್ತದೆ. ಅಲ್ಲಿ ಮಳೆಯೇ ಬಂದಿಲ್ಲ. ಎಲ್ಲೋ ಒಂದು ಪಾಯಿಂಟ್ ಮಳೆ ಬಂದಿದ್ದನ್ನು ಇಟ್ಟುಕೊಂಡು ೯೪೫ ಮಿಲಿಮೀಟರ್ ಮಳೆ ಚನ್ನಗಿರಿ ತಾಲ್ಲೂಕಿನಲ್ಲಿ ಬಂದಿದೆ ಎಂದು ಹೇಳಿದರೆ ಅದು ವಾಸ್ತವಿಕ ಸ್ಥಿತಿಯನ್ನು ಅರ್ಥ ಮಾಡಿಕೊಂಡು ಕೊಟ್ಟಿ ರ ವ ವರದಿಯಲ್ಲ ಎಂದು ನಾನು ಹೇಳಬೇಕಾಗುತ್ತದೆ. ಕೆ.ಎಸ್.ಎಫ್.ಸಿ. ನಲ್ಲಿ ೫೦೦ ಕ್ವಿಂಟಾಲ್, ೭೫೦ ಕ್ವಿಂಟಾಲ್ ಸ್ಟಾಕ್ ಇದೆ ಎಂದು ಹೇಳುತ್ತೀರಿ. ನಾವು ಕೇಳಿರುವುದೇನು ? ಅಭಾವ ಪರಿಸಿ ತಿ

ಬಗ್ಗೆ ಏನು ಮಾಡಿದ್ದೀರಿ ಎಂದರೆ ಮಾರ್ಕೆಟ್ಟಿನಲ್ಲಿ ಗೋಧಿ ಬೆಲೆ ಕೆ. ಜಿ.ಗೆ ಎರಡು ರೂಪಾಯಿಗಳು ಇದೆ, ಸಕ್ಕರೆ ಬೆಲೆ ಕೆ.ಜಿ.ಗೆ ೬ ರೂಪಾಯಿಗಳು ಇದೆ ಎಂದು ಹೇಳಿದ್ದೀರಿ. ಇದು ಯಾವುದಕ್ಕೆ ಸಂಬಂಧ ಪಟ್ಟಿದ್ದು ?

ಶ್ರೀ ಎ ಲಕ್ಷ್ಮೀಸಾಗರ್.—ಬೆಲೆ ಜಾಸ್ತಿಯಾಗಿಲ್ಲ ಎಂಬುದನ್ನು ತೋರಿಸಿದ್ದಾರೆ.

ಶ್ರೀ ಜೆ. ಎಚ್. ಪಟೇಲ್.—ಇದು ನಮಗೆ ಬೇಕಾಗಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಬೆಲೆ ಜಾಸ್ತಿಯಾಗಿಲ್ಲ ಎಂಬುದಕ್ಕೆ ಮಾತ್ರ ಅದನ್ನು ಇಟ್ಟು ಕೊಳ್ಳ ಬೇಕಷ್ಟೆ.

ಶ್ರೀ ಜೆ. ಎಚ್. ಪಟೇಲ್.—ಓಪನ್ ಮಾರ್ಕೆಟ್ಟಿನಲ್ಲಿ ಸಕ್ಕರೆ ೬ ರೂಪಾಯಿಗಳು ಕೆ.ಜಿ.ಗೆ ಇದೆ ಎಂದು ಹೇಳಿದ್ದಾರೆ. ಇದು ಹೇಗೆ ರಿಲೆವೆಂಟ್ ಆಗುತ್ತದೆ ? ಅದರ ಬದಲು ಯಾವಯಾವ ತಾಲ್ಲೂಕಿನಲ್ಲಿ ಯಾವಯಾವ ಕೆಲಸ ಮಾಡಿದ್ದೀರಿ, ಎಲ್ಲಿ ಮಳೆ ಬಂದಿಲ್ಲ, ಎಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಎಂಬುದನ್ನು ನೋಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರತಿಯೊಂದು ಜಿಲ್ಲೆಯ ಸೀಸನಲ್ ಕಂಡೀಷನ್, ಕುಡಿಯುವ ನೀರಿನ ಸಮಸ್ಯೆ, ಫಾಡರ್ ಕಂಡೀಷನ್, ಇತರ ಸಮಸ್ಯೆಗಳು ಯಾವರೀತಿ ಇದೆ ಎಂಬುದನ್ನು ಕೊಟ್ಟಿದ್ದೇವೆ. ನಮ್ಮಲ್ಲಿ ಆಹಾರಧಾನ್ಯ ಇಲ್ಲ ಎಂದು ಇನ್ನೊಬ್ಬ ಸದಸ್ಯರು ಕೇಳಬಹುದು. ಅಂಥವರಿಗೆ ಗೊತ್ತಾಗಲಿ ಎಂದು ಅದನ್ನು ಕೊಟ್ಟಿದ್ದೇವೆ. ಮತ್ತೊಬ್ಬ ಸದಸ್ಯರು ಒಂದು ಜಿಲ್ಲೆಗೆ ಎರಡು ಲಕ್ಷ ರೂಪಾಯಿಗಳನು ಕೊಟ್ಟರೆ ಏನು ಪ್ರಯೋಜನ ಎಂದು ಕೇಳಿದರು. ನಾರ್ಮಲ್ ಬಜೆಟ್ ಬಿಟ್ಟು ಯಾವ ಹಳ್ಳಿಯನ್ನು ಪ್ರೋಗ್ರಾಂನಲ್ಲಿ ಸೇರಿಸಿಲ್ಲವೋ ಅಂಥದ್ದನ್ನು ತಕ್ಷಣ ತೆಗೆದುಕೊಳ್ಳುವುದಕ್ಕೆ ೮ ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ ಎಂದು ಹೇಳಬೇಕಾಗುತ್ತದೆ. ಆ ದೃಷ್ಟಿಯಿಂದ ಅದೆಲ್ಲಾ ವಿವರವನ್ನು ಕೊಟ್ಟಿದ್ದೇವೆ, ಬೇರೇನೂ ಅಲ್ಲ.

ಶ್ರೀ ಜೆ. ಎಚ್, ಪಟೇಲ್,—ಬೆಲೆಗಳು ಮೇಲೇರಿಲ್ಲ ಎಂಬುದನ್ನು ತೋರಿಸುವುದಕ್ಕೆ ಕೊಟ್ಟಿದ್ದೀರಿ ಆದರೆ ನಾನು ಹೇಳುವುದು ಏನೆಂದರೆ, ಈ ವರದಿ ಕೊಡುವಾಗ ಉಪಯುಕ್ತವಾದ ವಿಷಯವನ್ನು ಕೊಡುವುದನ್ನು ಬಿಟ್ಟು ೧೯೫೩೦ ಮೆಟ್ರಿಕ್ ಜನ ನೈಟ್ರೋಜಿನ್ ಇದೆ ಎಂದು ಹೇಳುತ್ತೀರಿ. ಅದರ ಬದಲು ಇಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿಲ್ಲ, ಇಷ್ಟು ಕಡೆ ಬರಗಾಲ ಬಂದಿದೆ. ಇಂಥ ಕಡೆ ಮೇವಿಲ್ಲ, ಇಂಥ ಕಡೆ ಪ್ರಾಣಿ ಸಾಯುತ್ತಿದೆ ಎಂಬ ವಾಸ್ತವಿಕವಾದ ಸ್ಥಿತಿಯನ್ನು ಹೇಳಬೇಕು. ನೈಟ್ರೋಜಿನ್ ಇಷ್ಟು ಮೆಟ್ರಿಕ್ ಟನ್ ಇದೆ ಎಂದರೆ...

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ಅದನ್ನು ಎಲ್ಲಿ ಹೇಳಬೇಕೋ ಹೇಳಿದ್ದೇವೆ. ಬೆಳಗಾಂ, ಹುಬ್ಬಳ್ಳಿಗೆ ಹೇಳಿದ್ದೇವೆ, ಟ್ರಾನ್ಸ್‌ಪೋರ್ಟೇಷನ್ ಬಗ್ಗೆ ಹೇಳಿದ್ದೇವೆ.

ಶ್ರೀ ಎಂ. ಚಂದ್ರಶೇಖರ್,—ಸ್ಟೇಟ್‌ಮೆಂಟಿನ ಪುಟ ೫ರಲ್ಲಿ 'Sufficient stocks of seeds, fertilizers and pesticides are also available in all districts, specially those affected by scarcity conditions.'' ಎಂದು ಹೇಳಿದ್ದಾರೆ. ಸ್ಕೇರ್ಸಿಟಿ ಕಂಡೀಷನ್‌ನಲ್ಲಿ ಅದು ಉಪಯೋಗವಾಗುತ್ತಾ ಇಲ್ಲ. ಸ್ಟಾಕ್ ಇದ್ದೂ ಏನು ಪ್ರಯೋಜನ ?

ಶ್ರೀ ಜೆ, ಎಚ್. ಪಟೇಲ್.—ನನಗೆ ಗೊತ್ತಿರುವಹಾಗೆ ಚೆನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳಲ್ಲಿರತಕ್ಕ ಅಭಾವ ಪರಿಸ್ಥಿತಿ, ಕುಡಿಯುವ ನೀರಿನ ಪರಿಸ್ಥಿತಿ ಬಗ್ಗೆ ವರದಿಯಲ್ಲಿ ತಿಳಿಸಿಲ್ಲ. ಉಳಿದಿದ್ದು ಪ್ರಕೃತವೋ ಅಪ್ರಕೃತವೋ ಅದು ಬೇರೆ ವಿಚಾರ, ಆದರೆ ವಾಸ್ತವಿಕ ವಿಷಯವನ್ನು ವರದಿಯಲ್ಲಿ ತಿಳಿಸಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಒಂದು ತಿಂಗಳ ಕೆಳಗೆ ಮಾನ್ಯ ಕಂದಾಯ ಮಂತ್ರಿಗಳಿಗೆ ಮತ್ತು ಮಾನ್ಯ ಮಂತ್ರಿಗಳಾದ ಬೇಗಾನೆ ರಾಮಯ್ಯನವರಿಗೆ ಒಂದು ಪತ್ರ ಬರೆದು ಚೆನ್ನಗಿರಿ ತಾಲ್ಲೂಕಿನಲ್ಲಿ ಕಠಿಣ ಪರಿಸ್ಥಿತಿ ಇದೆ, ಅಲ್ಲಿ ಬೀಜ ಬಿತ್ತೇ ಇಲ್ಲ ಎಂದು ತಿಳಿಸಿದ್ದೆ. ಬೇರೆ ಕಡೆ ಬಿತ್ತಿ ಬೆಳೆ ಹಾಳಾಗಿದೆ ಆದರೆ ನಾವು ಬಿತ್ತೇ ಇಲ್ಲ, ನಮ್ಮ ತಾಲ್ಲೂಕಿನಲ್ಲಿ ೨/೩ ಭಾಗದಲ್ಲಿ ಬಿತ್ತಿಲ್ಲ. ಅದನ್ನು ಪ್ರತಿಬಿಂಬಿಸಕ್ಕ ವರದಿ ಬಂದಿಲ್ಲ. ಜಿಲ್ಲಾಧಿಕಾರಿಗಳು ಕೆಲವು ಹಳ್ಳಿಗಳಿಗೆ ಎರಡು ಸಾರಿ ಬಂದು ನೋಡಿಕೊಂಡು ಹೋಗಿದ್ದಾರೆ. ಆದ್ದರಿಂದ ವಾಸ್ತವಿಕ ಅಂಶವನ್ನು ಗಮನಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದೇನೆ. ಬೇರೆ ಜಿಲ್ಲೆಗಳ ಬಗ್ಗೆ ನಾನು ಹೇಳುತ್ತಿಲ್ಲ, ನಮ್ಮ ಜಿಲ್ಲೆಯಲ್ಲೇ ಕೆಲವು ತಾಲ್ಲೂಕಿನ

ಪರಿಸ್ಥಿತಿ ಉತ್ತಮವಾಗಿದೆ. ಭದ್ರಾವತಿ ತಾಲ್ಲೂಕಿನಲ್ಲಿ ಹೆಚ್ಚು ನೀರಾವರಿ ಅನುಕೂಲ ಇರುವುದರಿಂದ ಪರಿಸ್ಥಿತಿ ಅಲ್ಲಿ ಉತ್ತಮವಾಗಿದೆ. ಆದ್ದರಿಂದ ಅತಿ ಕಡಿಮೆ ನೀರಾವರಿ ಇರುವ ಕಡೆಗಳಲ್ಲಿ ಮತ್ತು ಬರಗಾಲ ಇರುವ ಕಡೆ ತೀವ್ರ ಗಮನ ಕೊಡಬೇಕೆಂದು ನಾನು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

೩–೩೦ ಪಿ ಎಂ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಉಪಾಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯ ೩ ತಾಲ್ಲೂಕಿನವರು ಬಹಳ ಅಭಾವ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಮಾನ್ಯ ಜೆ. ಎಚ್. ಪಟೇಲ್‌ರವರು ಹೇಳಿದ ಹಾಗೆ ಚೆನ್ನಗಿರಿ, ಹೊನ್ನಾಳಿಯ ಮೈನರ್ ಏರಿಯಾದಲ್ಲಿ ಬಿತ್ತನೆ ಮಾಡಿಲ್ಲ. ರಾಗಿ, ಜೋಳದ ಬೆಳೆ ಹಾಳಾಗಿದೆ. ಮತ್ತು ಶಿಕಾರಿಪುರ ತಾಲ್ಲೂಕಿನ ಮೂರು ಹೋಬಳಿಗಳಾದ ತಾಳಗುಂದ, ಹುಗನಿ, ಹೊಸೂರು, ಈ ಭಾಗಗಳಲ್ಲಿ ಭತ್ತ ಬಿತ್ತಿದ್ದಾರೆ. ಅದು ಸುಮಾರು ಅರ್ಧ ಅಡಿ ಬೆಳೆದು ಈಗ ಒಣಗುತ್ತಿದೆ. ಈ ಮೂರು ಹೋಬಳಿಗಳಲ್ಲಿ ಬೆಳೆ ಸಂಪೂರ್ಣ ನಾಶವಾಗಿವೆ. ಆದ್ದರಿಂದ ಶಿವಮೊಗ್ಗ ಜಿಲ್ಲೆಯ ೩ ತಾಲ್ಲೂಕುಗಳನ್ನು ಅಭಾವ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿ ತಕ್ಕ ಸೌಕರ್ಯಗಳನ್ನು ಒದಗಿಸಬೇಕು. ಮತ್ತು ಪ್ರತಿ ವರ್ಷ ನಾವು ಈ ಮನೆಯಲ್ಲಿ ಅಭಾವ ಪರಿಸ್ಥಿತಿ ಬಗ್ಗೆ ಮಾತನಾಡುತ್ತಿದ್ದೇವೆ. ಈ ಅಭಾವವನ್ನು ಪೂರ್ತಿ ಹೋಗಲಾಡಿಸುವ ಬಗ್ಗೆ ಉಭಯ ಸದನಗಳ ಸಮಿತಿ ರಚನೆ ಮಾಡಿ, ಆ ಸಮಿತಿ ಮೂಲಕ ಇದನ್ನು ಹೋಗಲಾಡಿಸಲು ಏನು ಕಾರ್ಯಕ್ರಮ ಹಾಕಿಕೊಳ್ಳಬಹುದೆಂಬ ಬಗ್ಗೆ ವರದಿ ತರಿಸಿ ಕಾರ್ಯಕ್ರಮ ಹಾಕಿಕೊಳ್ಳುವುದು ಒಳ್ಳೆಯದು. ಈ ಬಗ್ಗೆ ತ್ವರಿತ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಶೇರ್‌ಖಾನ್.—ಮಾನ್ಯ ಉಪಾಧ್ಯಕ್ಷರೇ ಬರಗಾಲದ ಬಗ್ಗೆ ನಾವು ಹೇಳಬೇಕೆಂದರೆ, ಈ ಸಾರಿ ನಮ್ಮಲ್ಲಿ ಬರಗಾಲ ಇಲ್ಲವೆಂದು ಹೇಳುತ್ತೇನೆ. ನಮ್ಮಲ್ಲಿ ಸಾಕಷ್ಟು ಮಳೆ ಆಗಿದೆ. ಬಂದ ಮಳೆ ವಿಳಂಬವಾಗಿ ಬಂದಿದೆ. ಹಾಗೂ ಹೆಚ್ಚು ಮಳೆ ಬಂದಿದೆ. ಹೆಚ್ಚು ಮಳೆ ಬಂದುದರಿಂದ ಬೆಳೆ ಬೆಳೆಯುವುದಕ್ಕೆ ಅವಕಾಶವಾಗುತ್ತಿಲ್ಲ. ನಾವೇನೂ ಬರಗಾಲ ಹೆಸರಿನಲ್ಲಿ ಏನಾದರೂ ಕೊಡಿ ಎಂದು ಕೇಳುವುದಿಲ್ಲ, ಆದರೆ ಹಿಂದೆ ಏನು ವರ್ಕ್‌ಗಳನ್ನು ನಮಗೆ ಕೊಟ್ಟಿದ್ದಿರಿ ಅವನ್ನು ಕಂಟಿನ್ಯೂ ಮಾಡಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳು ಇದ್ದಾರೆ. ಅವರು ವಾಟರ್ ಸಪ್ಲೈ ಸ್ಯಾಂಕ್ಷನ್ ಮಾಡಿದ್ದಾರೆ. ಆದರೆ ಅಲ್ಲಿನ ಚೀಫ್ ಎಂಜಿನಿಯರ್ ಅವನ್ನು ರಿಟರ್ನ್ ಮಾಡುತ್ತಿದ್ದಾರೆ. ಇದರಿಂದ ಒಂದೂ ವರ್ಕ್ ಆಗುವುದಿಲ್ಲ. ಸ್ಯಾಂಕ್ಷನ್ ಮಾಡಿರುವುದಕ್ಕೆ ಏನಾದರೂ ಅಬ್ಜರ್ವೇಷನ್ ಮಾಡಿ ವಾಪಸ್ ಕಳುಹಿಸುತ್ತಾರೆ. ಈ ವರ್ಕ್ಸ್‌ನಿಂದ ಎಷ್ಟೋ ಜನರಿಗೆ ಅನುಕೂಲವಾಗುತ್ತದೆ. ಚೀಫ್ ಎಂಜಿನಿಯರ್ ಆಫೀಸ್ ಧಾರವಾಡ ಹಾಗೂ ಬೆಳಗಾಂ ಎರಡೂ ಕಡೆ ಇದ್ದು. ಅಲ್ಲಿ ಕೇಳಿದರೆ ಇವರನ್ನು, ಇವರನ್ನು ಕೇಳಿದರೆ ಅವರನ್ನು ತೋರಿಸುತ್ತಾರೆ. ನಮ್ಮಲ್ಲಿ ಸ್ಯಾಂಕ್ಷನ್ ವರ್ಕ್ ಏನಿವೆ ಅವನ್ನು ಮಾಡಿಸಿದರೆ ನಮಗೆ ಸಫಿಷಿಯೆಂಟ್ ಆಗುತ್ತದೆ. ದೇವರ ದಯೆಯಿಂದ ನಮ್ಮಲ್ಲಿ ಬರಗಾಲ ಇಲ್ಲ. ಸರಿಯಾಗಿ ಇದ್ದೇವೆ. ನಮ್ಮ ವರ್ಕ್ಸ್ ನಮಗೆ ಮಾಡಿಸಿಕೊಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಜಿ.ಕೆ. ತಕ್ಕೇಡ್.—ಮಾನ್ಯ ಉಪಾಧ್ಯಕ್ಷರೇ, ಬೆಳಗಾಂ ಜಿಲ್ಲೆಯ ಜಿಲ್ಲಾಧಿಕಾರಿಗಳು ಕೊಟ್ಟ ವರದಿ ಸರಿಯಾಗಿದೆ. ನಮ್ಮ ಗೋಕಾಕ್ ತಾಲ್ಲೂಕಿನ ಪೂರ್ಣ ಭಾಗ ಮತ್ತು ಅಥಣಿ, ರಾಯಬಾಗ್ ಈ ಭಾಗದಲ್ಲಿ ಮತ್ತು ನನ್ನ ತಾಲ್ಲೂಕಿನ ಎರಗಟ್ಟಿಯಲ್ಲಿ ಸಾಕಷ್ಟು ಆಗಿದೆ. ಆದರೆ ಗೋಕಾಕ್ ಭಾಗದಲ್ಲಿ, ಅಥಣಿ ಮತ್ತು ರಾಯಭಾಗದಲ್ಲಿ ಸ್ಕೇರ್‌ಸಿಟಿ ವರ್ಕ್ಸ್‌ಗೆ ೫ ರೂಪಾಯಿಗಳ ಕೂಲಿ ಕೊಟ್ಟಿದ್ದಾರೆ. ನಮ್ಮಲ್ಲಿ ಸಾಕಷ್ಟು ಮಳೆಯಾಗಿದೆ. ಮಾನ್ಯ ಬೇಗಾನೆ ರಾಮಯ್ಯನವರನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತೇವೆ ಅಲ್ಲಿ ಮಳೆ ಆಗುತ್ತದೆ ಇವರು ನಮ್ಮಲ್ಲಿ ಬಂದಾಗ ಮಳೆ ಆಯಿತು. ಕಾರಣ, ಇವರು ಶೃಂಗೇರಿ ಜಗದ್ಗುರುಗಳ ಕ್ಷೇತ್ರದಿಂದ ಬಂದವರಾಗಿದ್ದಾರೆ. ಈಗ ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಮೇವಿನ ಅಭಾವವಾಗಲೀ, ಕುಡಿಯುವ ನೀರಿನ ಅಭಾವವಾಗಲೀ ಯಾವುದೂ ಇಲ್ಲ. ಕಳೆದ ೪ ದಿವಸದಿಂದ ಸಾಕಷ್ಟು ಮಳೆ ಬಂದಿದೆ. ಸಾಕಷ್ಟು ನೀರು ಬಂದಿದೆ. ಅಧಿಕಾರಿಗಳು ಸಾಕಷ್ಟು ಸರಿಯಾದ ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ನಮ್ಮ ಸೌಂದತ್ತಿ ತಾಲ್ಲೂಕಿನಲ್ಲಿ ಎರಗಟ್ಟಿ ಖಾಯಂ ಬರಗಾಲದ ಪ್ರದೇಶ. ಅಲ್ಲಿನ ಲಿಫ್ಟ್ ಇರಿಗೇಷನ್ ಸ್ಕೀಂ ೧೯೮೦ ರೊಳಗೆ ಪೂರ್ತಿ ಆಗಬೇಕೆಂದು ನಮ್ಮ ಬೇಡಿಕೆ ಇದೆ. ಅಲ್ಲಿನ ಕೆನಾಲ್‌ನಲ್ಲಿ ೩೫ ಜನ ಪಂಪ್ ಹಚ್ಚಿದ್ದರು. ನಮ್ಮ ಮಾನ್ಯ ಮುಖ್ಯಮಂತ್ರಿಗಳು

ಕೂಡಲೇ ನೀರು ಉಪಯೋಗಿಸುವುದಕ್ಕೆ ಆಜ್ಞೆ ಕೊಟ್ಟರು. ಈ ಬಗ್ಗೆ ಆ ಭಾಗದ ರೈತರ ಪರವಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಎನ್.ಆರ್.ಇ.ಪಿ. ಸ್ಕೀಮ್‌ನಲ್ಲಿ ೬೦ ರೂಪಾಯಿ ೪೦ ರೂಪಾಯಿ ಪ್ರಕಾರ ಕೂಲಿ ಹಾಗೂ ಮೆಟೀರಿಯಲ್ ಮಾಡಿದ್ದಾರೆ, ಇದು ೧೨ ತಿಂಗಳು ಇರುವುದು. ಇದನ್ನು ಬದಲಾವಣೆ ಮಾಡಬೇಕು.

ಉಪಾಧ್ಯಕ್ಷರು.--I think, the State Government is not competent to change it. That is what I feel.

ಶ್ರೀ ಜಿ.ಕೆ. ತಕ್ಕೇಡ್.—ಇವತ್ತು ಕನಿಷ್ಠ ವೇತನವೇ ೮ ರೂಪಾಯಿಗಳು ಇದೆ. ೫ ರೂಪಾಯಿಗಳಿಗೆ ಯಾರೂ ಬರುವುದಿಲ್ಲ. ಆದ್ದರಿಂದ ಕನಿಷ್ಠ ಹೆಣ್ಣುಮಕ್ಕಳಿಗೆ ೬ ರೂಪಾಯಿಗಳು ಹಾಗೂ ಗಂಡಸರಿಗೆ ೮ ರೂಪಾಯಿಗಳು ಮಾಡಬೇಕು. ಎರಗಟ್ಟಿ ಲಿಫ್ಟ್ ಇರಿಗೇಷನ್ ಸ್ಕೀಮನ್ನು ಪ್ರಾರಂಭ ಮಾಡಿ ಬೇಗ ಮುಗಿಸಬೇಕು. ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ತೆಗೆದುಕೊಂಡಿರುವ ಕೆಲಸಗಳನ್ನು ಪೂರ್ತಿ ಮಾಡಬೇಕು. ದೇವರು ಬೆಳಗಾಂ ಜಿಲ್ಲೆಗೆ ಮಳೆ ಕೊಟ್ಟಿದ್ದಾನೆ. ಹಾಗೂ ನಾನು ಮೇಲೆ ಹೇಳಿದ ಕೆಲಸಗಳನ್ನು ಆದಷ್ಟು ಬೇಗ ಮಾಡಿ ಮುಗಿಸಬೇಕು ಎಂದು ಹೇಳುತ್ತೇನೆ.

ಶ್ರೀ ಎ.ಬಿ. ಬ್ಯಾಡಗಿ.—ಮಾನ್ಯ ಉಪಾಧ್ಯಕ್ಷರೇ, ಬೆಳಗಾಂನ ಚಿಕ್ಕೋಡಿ ತಾಲ್ಲೂಕಿನಲ್ಲಿ ಮೂರನೇ ಒಂದು ಭಾಗ ಬಿತ್ತನೆ ನಡೆದಿದ್ದು, ಕಳೆದ ೨ ತಿಂಗಳಿಂದ ಮಳೆ ಬಂದಿರಲಿಲ್ಲ. ಈಗ ಮಳೆ ಬಂದಿದೆ. ಚಿಕ್ಕೋಡಿಯ ಮೂರನೇ ಎರಡು ಭಾಗ ಬಿತ್ತನೆ ಇಲ್ಲ, ಅಥಣಿ ತಾಲ್ಲೂಕು ಸಂಪೂರ್ಣ ಬರಗಾಲದ ಪ್ರದೇಶ.

ಶ್ರೀ ಡಿ. ಜಯದೇವರಾಜ ಅರಸ್.—ಮಾನ್ಯ ಉಪಾಧ್ಯಕ್ಷರೇ ನಾನು ಒಂದು ಕ್ರಿಯಾಲೋಪ ಎತ್ತುತ್ತಿದ್ದೇನೆ. ಬರಗಾಲದ ಬಗ್ಗೆ ನಾವು ಮಾತನಾಡಲು ಸೇರಿದ್ದೇವೆ. ಯಾವ ಪ್ರದೇಶದಲ್ಲಿ ಮಳೆಯಾಗಿಲ್ಲ ಅವರು ಮಾತನಾಡುವುದು ಸರಿ. ಎಲ್ಲಿ ಮಳೆಯಾಗಿದೆ. ಆ ಪ್ರದೇಶದ ಶಾಸಕರೂ ಇಲ್ಲಿ ಮಾತನಾಡುವುದು ಸರಿಯೇ?

DEPUTY SPEAKER.—I have not called you. Please resume your seat.

ಶ್ರೀ ಎ.ಬಿ. ಬ್ಯಾಡಗಿ.—ನಾನು ಈಗ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಘಟಪ್ರಭ ರೈಟ್ ಬ್ಯಾಂಕ್ ಕೆನಾಲ್ ಏನು ಚಿಕ್ಕೋಡಿಯಲ್ಲಿ ಬರುತ್ತಿದೆ ಅದನ್ನು ಬೇಗ ಮಾಡತಕ್ಕದ್ದು. ಮೈನರ್ ಇರಿಗೇಷನ್ ಟ್ಯಾಂಕ್‌ಗಳನ್ನು ಬೇಗ ಮಾಡತಕ್ಕದ್ದು. ಎನ್.ಆರ್.ಇ.ಪಿ. ಯಲ್ಲಿ ರಸ್ತೆಗಳನ್ನು ತೆಗೆದುಕೊಳ್ಳತಕ್ಕದ್ದು. ಇವೆಲ್ಲ ಕಾಮಗಾರಿ ಕೆಲಸಗಳನ್ನು ಮಾಡಿದರೆ ಬರಗಾಲ ಪರಿಹಾರಕ್ಕೆ ಅನುಕೂಲವಾಗುತ್ತದೆಂದು ನಾನು ಹೇಳುತ್ತೇನೆ. ಗೋಕಾಕ ತಾಲ್ಲೂಕಿನ ೪೦ ಹಳ್ಳಿಗಳು ತೀರಾ ಬರಗಾಲ ಇದೆ. ಇಲ್ಲಿ ಕೂಡಲೇ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಉಪಾಧ್ಯಕ್ಷರೇ, ಹಾಸನ ಜಿಲ್ಲೆಯ ಬಹು ಭಾಗದಲ್ಲಿ ಇದುವರೆವಿಗೂ ಬಿತ್ತನೆಯಾಗಿಲ್ಲ. ಭೀಕರವಾದ ಕ್ಷಾಮ ಪರಿಸ್ಥಿತಿ ಇದೆ. ಮೇ ತಿಂಗಳಲ್ಲಿ ಮಳೆಯಾಗಿತ್ತು ರಾಗಿ, ಜೋಳ ಮತ್ತು ಆಲೂಗೆಡ್ಡೆ ಬೆಳೆಯನ್ನು ಹಾಕಿದ್ದರು. ಕಳೆದ ಒಂದೂವರೆ ತಿಂಗಳಿಂದ ಮಳೆ ಇಲ್ಲ, ಹಣದ ಬೆಳೆ ಸಂಪೂರ್ಣವಾಗಿ ಹೋಗಿದೆ. ರಾಗಿ ಬೆಳೆ ೫೦ ಭಾಗ ಕೂಡ ಬರುವುದಿಲ್ಲ. ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೋಕುಗಳಲ್ಲಿ ಇದುವರೆವಿಗೂ ಮಳೆಯಾಗಿಲ್ಲ ಬಿತ್ತನೆ ಕೂಡ ಆಗಿಲ್ಲ. ಡಿ.ಡಿ.ಸಿ. ಮೀಟಿಂಗ್‌ನಲ್ಲಿ ೩೨೫ ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆ. ತಕ್ಷಣ ಬೋರ್‌ವೆಲ್‌ಗಳನ್ನು ಹಾಕಬೇಕೆಂದು ನಿರ್ಣಯ ಮಾಡಿ ಕಳಿಸಿದ್ದೇವೆ. ಪಿ.ಹೆಚ್.ಇ ನವರು ಇದುವರೆಗೂ ಫಂಡ್ಸ್ ಬಂದಿಲ್ಲವೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಯವರು ಕುಡಿಯುವ ನೀರಿಗೆ ತೊಂದರೆ ಇಲ್ಲವೆಂದು ಯಾವ ಅರ್ಥದಲ್ಲಿ ಹೇಳಿದರೋ ಗೊತ್ತಿಲ್ಲ. ಫಂಡ್ಸ್ ಇಲ್ಲದೇ ಇರುವುದರಿಂದ ಬೋರ್‌ವೆಲ್‌ಗಳನ್ನು, ಹಾಕುತ್ತಿಲ್ಲ. ಕಳೆದ ಒಂದೂವರೆ ತಿಂಗಳಿಂದ ಕೆರೆ ಅಂಗಳಲ್ಲಿ ಬಾವಿ ತೋಡಿಸಿಕೊಂಡಿದ್ದಾರೆ. ತಕ್ಷಣವೇ ಹಣವನ್ನು ಒದಗಿಸಿ ಬೋರ್‌ವೆಲ್‌ಗಳನ್ನು ತೆಗೆಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ದನಕರುಗಳಿಗೆ ಹುಲ್ಲು ಸಿಗದೇ ಬಹಳ ತೊಂದರೆ ಪಡುವಂಥ ಪರಿಸ್ಥಿತಿ ಇದೆ. ಹೊಲ ಗದ್ದೆಗಳಲ್ಲಿ ಬಂದಂಥ ಹುಲ್ಲು ಮುಗಿದು ಹೋಗಿದ್ದು, ರೈತರು ತಮ್ಮ ಧನಕರುಗಳನ್ನು ಪೋಷಿಸುವುದಕ್ಕೆ

ಬಹಳ ಕಷ್ಟ ಪಡುತ್ತಿದ್ದಾರೆ. ಇದುವರೆವಿಗೂ ಕೂಡ ಎಕ್ಸಿಕ್ಯೂಟೀವ್ ಇಂಜಿನಿಯರ್ ಲಾರಿಗಳನ್ನು ಕೊಡುತ್ತಿದ್ದರು, ಜಿಲ್ಲಾಧಿಕಾರಿಯುವರು ೧೫–೨೦ ಲಾರಿಗಳನ್ನು ಮಲೆನಾಡಿಗೆ ಕಳುಹಿಸಿ, ಅಲ್ಲಿಂದ ಹುಲ್ಲು ತರಿಸಿ, ಹಂಚಿಕೆ ಮಾಡುತ್ತಿದರು. ಈ ವರ್ಷವೂ ಕೂಡ ಅಂಥ ಒಂದು ವ್ಯವಸ್ಥೆಯನ್ನು ಮಾಡಿಕೊಡ ಬೇಕೆಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಕಳೆದ ಹತ್ತು ವರ್ಷಗಳಲ್ಲಿ ೩–೪ ಭಾರಿ ಬರಗಾಲ ಬಂದಿದೆ, ೨–೩ ವರ್ಷಕ್ಕೊಮ್ಮೆ ಬರಗಾಲಕ್ಕೆ ಹಾಸನ ಜಿಲ್ಲೆ ತುತ್ತಾಗುತ್ತಿದೆ. ನಮ್ಮ ಜಿಲ್ಲೆಗೆ ಶಾಶ್ವತ ಪರಿಹಾರವನ್ನು ಕೊಡದೇ ಹೋದರೆ, ಬಡ ಜನತೆಯು ಕ್ಷಾಮದ ದವಡೆಯಿಂದ ಪಾರಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಸನ ಜಿಲ್ಲೆಯ ರೈತರ ಸ್ಥಿತಿ ಬಹಳ ಹದಗೆಟ್ಟಿದೆ. ಸಾಲ ಮಾಡಿ, ಸೊಸೈಟಿಗಳಿಂದ ಸಾಲ ಪಡೆದು ಬೆಳೆಗಳನ್ನು ಇಟ್ಟಿದ್ದರು, ಈಗ ಮಳೆ ಹೋಗಿ, ತೊಂದರೆಯುಲ್ಲಿರುವಾಗಲೇ ಸಾಲ ವಸೂಲಿಗೆ ಅಧಿಕಾರಿಗಳು ಕ್ರಮ ತೆಗೆದುಕೊಂಡಿದ್ದಾರೆ ಈ ವಿಚಾರದಲ್ಲಿ ಮಾನ್ಯ ಮಂತ್ರಿಯುವರು ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಯಗಚಿ ಪ್ರಾಜೆಕ್ಟನ್ನು ಮಾಡಿಕೊಡಬೇಕೆಂದು ಕಳೆದ ೧೦-೧೨ ವರ್ಷಗಳಿಂದಲೂ ನಾವು ಕೇಳುತ್ತಲೇ ಇದ್ದೇವೆ. ಕಳೆದ ಶಾಸನ ಸಭೆಯುಲ್ಲಿ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದರು. ಇದರಿಂದ ಹಾಸನ ಜಿಲ್ಲೆಗೆ ಮಾತ್ರವಲ್ಲ ಅರಸೀಕೆರೆ ತಾಲ್ಲೋಕಿಗೂ ಅನುಕೂಲವಾಗುತ್ತದೆ. ಈ ಯೋಜನೆಯನ್ನು ಆದಷ್ಟು ಜಾಗ್ರತೆ ಶುರು ಮಾಡಬೇಕೆಂದು ಹೇಳುತ್ತೇನೆ. ಇವತ್ತು ರಾಗಿ ಬೆಲೆ ಜಾಸ್ತಿಯಾಗಿದೆ. ಇದುವರೆವಿಗೂ ೧೧೦-೧೧೫ ರೂಪಾಯಿಗಳು ಇದ್ದುದು ಮಳೆ ಹೋದಮೇಲೆ ೧೬೦-೧೭೦ ರೂಪಾಯಿಗಳಾಗಿದೆ. ಬೇರೆ ಕಡೆಯಿಂದ ರಾಗಿಯನ್ನು ತರಿಸಿ. ಬಡಜನತೆಗೆ ಅನುಕೂಲ ಮಾಡಬೇಕೆಂದು ಹೇಳುತ್ತೇನೆ. ಬರಗಾಲ ಕಾಮಗಾರಿಗಳಲ್ಲಿ ರಸ್ತೆ ಕೆಲಸವನ್ನು ಮಾಡಿಸುವುದರಿಂದ ರೈತರಿಗೆ ಯಾವ ರೀತಿಯ ಉಪಯೋಗವೂ ಆಗುವುದಿಲ್ಲ ಬರೀ ಹಣ ಮಾತ್ರ ಖರ್ಚಾಗುತ್ತದೆ, ಕೆರೆಯ ಹೂಳು ತೆಗೆಸುವಂತ ಕಾರ್ಯವನ್ನು ಮಾಡಿದರೆ ಶಾಶ್ವತವಾದ ಕೆಲಸವಾದಂತಾಗುತ್ತದೆ. ಮಳೆಗಾಲದಲ್ಲಿ ನೀರು ಸ್ಟಾಕ್ ಮಾಡಿಕೊಂಡು ಒಂದು ಎಕರೆ ಅರ್ಧ ಎಕರೆ ನೀರಾವರಿ ಜಮೀನುಗಳನ್ನು ಮಾಡಿಕೊಂಡು ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಬಾವಿ ಗಳನ್ನು ತೋಡಿಸುವುದಕ್ಕೂ ಅನುಕೂಲವಾಗುತ್ತದೆ. ಮುಖ್ಯವಾಗಿ ಜನತೆಗೆ ಕುಡಿಯುವ ನೀರು ಮತ್ತು ದನಕರುಗಳಿಗೆ ಮೇವನ್ನು ಒದಗಿಸುವಲ್ಲಿ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಂತ್ರಿನ ಪೆಂಡಿಮಠ್.—ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯ ಪೂರ್ವ ಭಾಗದಲ್ಲಿ ಮುಂಗಾರು ಮಳೆಯಿಲ್ಲದೆ, ಅದು ಬರಗಾಲಕ್ಕೆ ತುತ್ತಾಗಿದೆ ಇದುವರೆಗೂ ಮಳೆಯಾಗಿಲ್ಲ. ಕೂಡಲೇ ಸರ್ಕಾರದವರು ಆ ಭಾಗಗಳಲ್ಲಿ ಬರಗಾಲ ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಜೊತೆಗೆ ಗದಗ ತಾಲ್ಲೂಕಿನಲ್ಲಿಯೂ ಕೂಡ ಮಳೆಯಾಗಿಲ್ಲ. ಆ ಭಾಗದಲ್ಲಿ ಕುಡಿ ಯುವ ನೀರಿನ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಅಲ್ಲಿಯೂ ಕೂಡ ಬರಗಾಲ ಪ್ರದೇಶದ ಕಾಮ ಗಾರಿಗಳನ್ನು ಮಾಡಬೇಕೆಂದು ಹೇಳುತ್ತೇನೆ. ಪ್ರತಿ ವರ್ಷ ವೂ ಧಾರವಾಡ ಜಿಲ್ಲೆ ಬರಗಾಲಕ್ಕೆ ತುತ್ತಾಗು ವುದರಿಂದ, ಶಾಶ್ವತವಾದ ಪರಿಹಾರವನ್ನು ಒದಗಿಸಬೇಕೆಂದು ಹೇಳುತ್ತೇನೆ. ಈ ವಿಭಾಗದಲ್ಲಿ ಸರ್ಕಾರತಕ್ಕೆ ತಜ್ಞರ ವರದಿ ಕೂಡ ಬಂದಿದೆ ತುಂಗಾ ಪ್ರಾಜೆಕ್ಟನ್ನು ತೆಗೆದುಕೊಂಡರೆ, ಧಾರವಾಡ ಜಿಲ್ಲೆಯ ಪೂರ್ವ ಭಾಗದ ಪ್ರದೇಶಗಳನ್ನು ನೀರಾವರಿಗೆ ಒಳಪಡಿಸಬಹುದು. ಈ ವಿಚಾರವನ್ನು ಮಾನ್ಯ ಮಂತ್ರಿ ಯುವರು ಗಣನೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಬರಗಾಲದ ಪ್ರದೇಶಗಳಲ್ಲಿ ಸಾಲ ವಸೂಲಾತಿ ಕಾರ್ಯಕ್ರಮವನ್ನು ಕೂಡಲೆ ಬಂದ್ ಮಾಡುವುದಕ್ಕೆ ಆದೇಶ ಕೊಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಪಾಟೀಲ್.—ರಾಯಚೂರು ಜಿಲ್ಲೆಯಲ್ಲಿ ಲಿಂಗಸುಗೂರು, ಕುಷ್ಟಗಿ, ದೇವದುರ್ಗ ತಾಲ್ಲೋಕುಗಳು ಬರಗಾಲಕ್ಕೆ ತುತ್ತಾಗಿವೆ. ಈ ಪ್ರದೇಶಗಳಲ್ಲಿ ನೀರಾವರಿ ಮಾಡಲು, ಕೂಡಲೇ ಅಪರ್ ಕೃಷ್ಣದಿಂದ ಏತ ನೀರಾವರಿ ಯೋಜನೆಯನ್ನು ಕೈಗೊಂಡರೆ, ಸುಮಾರು ೮೦,೦೦೦ ಎಕರ ಜಮೀನನ್ನು ನೀರಾವರಿಗೆ ಒಳಪಡಿಸಬಹುದು. ಅದಕ್ಕೋಸ್ಕರ ಸರ್ಕಾರದವರು ೨ನೇ ಹಂತದಲ್ಲಿ ಮಾಡಬೇಕೆನ್ನುವ ವಿಚಾರವನ್ನು ಕೈಬಿಟ್ಟು, ಮೊದಲನೇ ಹಂತದಲ್ಲಿಯೇ ತೆಗೆದುಕೊಳ್ಳುವುದಕ್ಕೆ ಘನ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈ ಮೂರು ತಾಲ್ಲೂಕುಗಳಲ್ಲಿಯೂ ಶಾಶ್ವತ

ಪರಿಹಾರವನ್ನು ಕಂಡುಹಿಡಿಯಬೇಕೆಂದು, ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಂಪಾಪತಿ — ಮಾನ್ಯ ಅಧ್ಯಕ್ಷರೆ, ಬರಗಾಲದ ಬಗ್ಗೆ ಈಗಾಗಲೇ ಎಲ್ಲಾ ಶಾಸಕರು ಮಾತನಾಡಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಈ ವರ್ಷ ಬರಗಾಲ ತುಂಬಾ ಜಾಸ್ತಿಯಾಗಿದೆ. ಎಲ್ಲಾ ಕೆರೆಗಳು ಒಣಗಿ ಹೋಗಿ ದನಕರುಗಳಿಗೆ ಕುಡಿಯಲಿಕ್ಕೆ ನೀರಿಲ್ಲದ ತೊಂದರೆಯಾಗಿದೆ ಆದುದರಿಂದ ಚಿತ್ರದುರ್ಗ ಜಿಲ್ಲೆಯನ್ನು ಬರಗಾಲ ಪ್ರದೇಶವೆಂದು ಘೋಷಿಸಬೇಕು, ಹರಿಹರ, ದಾವಣಗೆರೆ ಸ್ವಲ್ಪ ಭಾಗ ಬಿಟ್ಟರೆ ಉಳಿದೆಲ್ಲಾ ಭಾಗವು ಬರಗಾಲಕ್ಕೆ ತುತ್ತಾಗಿದೆ. ನಮ್ಮ ರಾಷ್ಟ್ರೀಯ ಹೆದ್ದಾರಿ ೪ರಲ್ಲಿ ಸುಮಾರು ೬೦ ಮೈಲಿ ದೂರ ಹೋದರೂ ಒಂದು ಹುಲ್ಲುಕಡ್ಡಿ ಕಾಣಿಸುವುದಿಲ್ಲ. ಈ ತೊಂದರೆಗಳನ್ನು ಗಮನಿಸಿ ಆ ಭಾಗದಲ್ಲಿ ಹೆಚ್ಚು ಹೆಚ್ಚು ಕೆಲಸಗಳನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡಬೇಕು, ಈಗ ಭದ್ರ ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿ ಸುಗ್ಗಿಯಾಗಿರುವುದರಿಂದ ಅಲ್ಲಿ ಭತ್ತದ ಹುಲ್ಲು ಸಾಕಷ್ಟು ಇದೆ. ಅಲ್ಲಿ ಮಳೆ ಬಿದ್ದು ಕೆಟ್ಟು ಹೋಗುತ್ತಿದೆ ಆದ್ದರಿಂದ ಅಲ್ಲಿಗೆ ಲಾರಿಗಳನ್ನು ಕಳುಹಿಸಿ, ಹುಲ್ಲು ಇಲ್ಲದೇ ಇರುವ ಕಡೆ ಅದನ್ನು ಸಾಗಿಸಿದರೆ ಅದರಿಂದ ಅನುಕೂಲವಾಗುತ್ತದೆ. ಈಗ ಏನಾಗಿದೆ ಎಂದರೆ ಒಂದು ಕಡೆ ಹುಲ್ಲು ಕೆಡುತ್ತಿದೆ ಇನ್ನೊಂದು ಕಡೆ ಹುಲ್ಲಿಗೆ ತೊಂದರೆಪಡುವುದು ಇದೆ. ಇವೊತ್ತು ತುರುವನೂರು ಭಾಗದಲ್ಲಿ ಬಹಳ ಕಷ್ಟ ಇದ್ದು, ಎಲ್ಲೆಲ್ಲಿ ಜನರಿಗೆ ಕಷ್ಟ ಇದೆ ಆ ಜನರೆಲ್ಲಾ ನೀರಾವರಿ ಪ್ರದೇಶ ಇರತಕ್ಕಂಥ ಕಡೆ ಬರುತ್ತಿದ್ದಾರೆ. ಅವರು ಅಲ್ಲಿಗೆ ಬಂದಾಗ ಅವರಿಗೆ ಅಲ್ಲಿ ಉಳಿಯಲಿಕ್ಕೆ ಸ್ಥಳ ಇರುವುದಿಲ್ಲ. ಕೊಳಚೆ ಪ್ರದೇಶಗಳು ಬೆಳೆಯುತ್ತವೆ. ಅದನ್ನು ತಡೆಯಬೇಕಾದರೆ ಎಲ್ಲೆಲ್ಲಿ ತೊಂದರೆ ಇದೆ. ಅಲ್ಲಿ ಒಂದು ಶಾಶ್ವತವಾದ ವ್ಯವಸ್ಥೆ ಮಾಡಿಕೊಡುವುದಕ್ಕೆ ತಾವು ಕಾರ್ಯಕ್ರಮ ರೂಪಿಸಿಕೊಳ್ಳಬೇಕು. ಇವೊತ್ತು ಕೆಲವು ಭಾಗಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕೂಡ ಕಷ್ಟ ಇದೆ, ಜಗಳೂರಿನ ಕಡೆಗಳಲ್ಲಿ ತುಂಬಾ ತೊಂದರೆ ಇದೆ ಆದ್ದರಿಂದ ಒಟ್ಟು ಚಿತ್ರದುರ್ಗ ಜಿಲ್ಲೆಯನ್ನೇ ಅಭಾವ ಪೀಡಿತ ಪ್ರದೇಶವೆಂದು ಘೋಷಿಸಬೇಕು. ಅಲ್ಲಿ ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಗಂಗಣ್ಣ — ಈ ವರ್ಷ ನಮ್ಮ ರಾಯಚೂರು ಜಿಲ್ಲೆಯಲ್ಲಿ ಮಳೆ ಬಂದಿದ್ದರೂ ಕೂಡ ಕೇಂದ್ರ ಪುರಸ್ಕೃತ, ರಾಜ್ಯ ಪುರಸ್ಕೃತ, ಅಭಾವ ಪೀಡಿತ ಯೋಜನೆಯಲ್ಲಿ ಕೆಲವು ತಾಲ್ಲೂಕುಗಳು ಸೇರಿವೆ ಆ ತಾಲ್ಲೂಕಿನಲ್ಲಿ ಕೆಲವು ಕೆರೆಗಳು ವ್ಯವಸ್ಥಿತ ಹಂತಗಳಲ್ಲಿವೆ. ಕೆಲವು ಕೆರೆಗಳ ಕಟ್ಟಡ ಮುಗಿದಿದೆ. ಈಗ ಇರುವ ಹಣದಿಂದ ಕಾಲುವೆಗಳ ಕೆಲಸವನ್ನು ಈ ವರ್ಷದಲ್ಲಿ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಸಂಬಂಧಪಟ್ಟ ಕಾಮಗಾರಿ ಇಲಾಖೆಯಲ್ಲಿ ಹೇಳುತ್ತಿದ್ದಾರೆ. ಈಗ ಕೆರೆ ತುಂಬಿದೆ, ಆ ನೀರನ್ನು ಸದುಪಯೋಗಪಡಿಸಿಕೊಳ್ಳುವ ಬಗ್ಗೆ ಯೋಚನೆ ಮಾಡಬೇಕು ಈ ಕಾರ್ಯಗಳಿಗೆ ಸೆಂಟ್ರಲ್ ಡಿಪಿಎಪಿ ಸ್ಟೇಟ್ ಡಿಪಿಎಪಿಗೆ ಸಂಬಂಧಪಟ್ಟ ಸಚಿವರು ಗಮನಿಸಬೇಕು. ಇನ್ನು ೧೯೮೦–೮೧ರಲ್ಲಿ ನಮ್ಮ ಕುಷ್ಟಗಿ ಭೂಸಂರಕ್ಷಣಾ ಇಲಾಖೆಯಿಂದ ಕೆಲಸವಾಗಿದೆ. ೧೯೮೦–೮೧ರ ಆದೇಶವಿದ್ದರೂ ಸಂಬಂಧಪಟ್ಟ ಇಲಾಖೆಯವರು ಹಣ ಬಿಡುಗಡೆ ಮಾಡಿಲ್ಲ, ಆ ಹಣವನ್ನು ಬಿಡುಗಡೆ ಮಾಡತಕ್ಕ ವ್ಯವಸ್ಥೆಯಾಗಬೇಕು. ಇನ್ನು ಎನ್‌ಆರ್‌ಇಪಿ ವರ್ಕ್ಸ್‌ಗೆ ತಾಲ್ಲೂಕ್ ಲೆವೆಲ್ ಸಮಿತಿ ಇದೆ, ತಾಲ್ಲೂಕ್ ಬೋರ್ಡ್ ಅಧ್ಯಕ್ಷರು ಅದರ ಅಧ್ಯಕ್ಷರು, ಅವರು ಪ್ಲಾನ್ ಮಾಡಿ ಜಿಲ್ಲಾಧಿಕಾರಿಗಳಿಗೆ ಅಪ್ರೂವಲ್‌ಗೆ ಕಳುಹಿಸಿದ್ದಾರೆ. ಅದನ್ನು ಕಳುಹಿಸಿ ಮೂರು ತಿಂಗಳಾದರೂ ಇನ್ನೂ ಜಿಲ್ಲಾಧಿಕಾರಿಗಳ ಅನುಮತಿ ಸಿಕ್ಕಿರುವುದಿಲ್ಲ. ಅದಕ್ಕೆ ಅನುಮತಿ ದೊರಕಿಸಿ ತಕ್ಷಣ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕು. ಇನ್ನು ಪದೇ ಪದೇ ನಮ್ಮ ರಾಜ್ಯದಲ್ಲಿ ಅನಾವೃಷ್ಟಿ ಕಂಡುಬರುವುದರಿಂದ ರಾಜ್ಯ ಸರ್ಕಾರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಹೈ ಪವರ್ ಕಮಿಟಿಯನ್ನು ರಚಿಸಿದೆ. ಅದರಲ್ಲಿರತಕ್ಕ ಸದಸ್ಯರು ಕೇವಲ ಅಧಿಕಾರಿಗಳೇ ಇದ್ದಾರೆ ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರವರ ಮೂಲಕ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಇಷ್ಟೆ, ಅಧಿಕಾರೇತರರನ್ನು ಈ ಸಮಿತಿಯ ಸದಸ್ಯರಾಗಿ ನಾಮಕರಣ ಮಾಡಿದರೆ ಒಳ್ಳೆಯ ವರದಿಯನ್ನು ಸರ್ಕಾರಕ್ಕೆ ಕೊಡಬಹುದು. ಈ ಅನಾವೃಷ್ಟಿ ಪೀಡಿತ ಪ್ರದೇಶಗಳಲ್ಲಿ ಯಾವ ರೀತಿಯ ಕಾರ್ಯಕ್ರಮ ಹಾಕಿಕೊಳ್ಳಬೇಕು ಅದನ್ನು ಯೋಚನೆ ಮಾಡಿ ಒಳ್ಳೆಯ ವರದಿಯನ್ನು ಕೊಡಲಿಕ್ಕೆ ಅಧಿಕಾರೇತರರಿಗೆ ಅವಕಾಶ ಇರುತ್ತದೆ. ಈಗ ಮಳೆಯಾಗಿ ಒಳ್ಳೆಯ ಫಸಲು ಇದೆ ಆದರೆ ಇನ್ನೂ ಕೆಲವು ವರ್ಗದವರಿಗೆ ಕೆಲಸ ಇಲ್ಲ, ಅವರಿಗೆ ಈ ಎನ್‌ಆರ್‌ಇಪಿ ಪ್ಲಾನ್‌ನಲ್ಲಿ ಅಪ್ರೂ,

ವಲ್ ಕೊಟ್ಟು, ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ವಿ. ಭಾವಿ.—ಮಾನ್ಯ ಕಂದಾಯ ಮಂತ್ರಿಗಳು ಧಾರವಾಡ ಜಿಲ್ಲೆಯ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಧಾರವಾಡ ಜಿಲ್ಲೆಯ ಬಗ್ಗೆ ಕೊಟ್ಟಂಥ ಹೇಳಿಕೆಯಲ್ಲಿ ಮುಂಗಾರು ಬೆಳೆ ಬೆಳೆದಂಥ ಕೆಲವು ತಾಲ್ಲೂಕುಗಳನ್ನು ಕೊಟ್ಟಿದ್ದಾರೆ. ಆ ತಾಲ್ಲೂಕುಗಳನ್ನು ನೋಡಿದರೆ ಇನ್ನೊಂದು ವಿಚಿತ್ರವಾಗಿದೆ. ಈಗ ಯಾವ ತಾಲ್ಲೂಕಿನಲ್ಲಿ ಮಳೆಯಾಗಿದೆ, ಅಲ್ಲಿ ಹೆಚ್ಚು ಅಫೆಕ್ಟ್ ಆಗಿದೆ, ಸ್ಕೇರ್‌ಸಿಟಿ ಇದೆ ಅಂಥ ಹೇಳಿಕೆಯನ್ನು ಕೊಟ್ಟಿದ್ದಾರೆ. ಯಾವ ತಾಲ್ಲೂಕುಗಳಲ್ಲಿ ಪೂರ್ತಿ ಮಳೆ ಇಲ್ಲ, ಆ ತಾಲ್ಲೂಕುಗಳು ಚೆನ್ನಾಗಿದೆ ಎಂದು ಹೇಳಿದ್ದಾರೆ ಇವೊತ್ತು ಮುಂಡರಗಿಯಲ್ಲಿ ಮಳೆ ಬಿದ್ದಿಲ್ಲ, ಅಲ್ಲಿ ೫೨ ಹಳ್ಳಿಗಳಲ್ಲಿ ೫ ಹಳ್ಳಿಗಳಲ್ಲಿ ಮಾತ್ರ ನೀರಾವರಿ ಇದ್ದು, ಇನ್ನು ೪೭ ಹಳ್ಳಿಗಳು ಅಫೆಕ್ಟ್ ಆಗಿವೆ, ಇಂಥಾದ್ದರಲ್ಲಿ ಮಾನ್ಯ ಮಂತ್ರಿಗಳು ೧೦ ಹಳ್ಳಿಗಳು ಮಾತ್ರ ಅಂಥ ಕಾಣಿಸಿದ್ದಾರೆ ಬೇರೆ ಮಳೆಯಾಗಿ ರುವ ಕಡೆ ೬೫ ಹಳ್ಳಿಗಳು ಅಫೆಕ್ಟ್ ಆಗಿವೆ ಎಂದು ತಮ್ಮ ಹೇಳಿಕೆಯಲ್ಲಿ ಕಾಣಿಸಿದ್ದಾರೆ. ಎಲ್ಲಿ ಮಳೆಯಾಗಿದೆ ಅಲ್ಲಿ ಜಾಸ್ತಿ ಅಫೆಕ್ಟೆಡ್ ಏರಿಯಾ ಎಂದು ತಿಳಿಸಿದ್ದಾರೆ. ಮಾನ್ಯ ಕಂದಾಯ ಮಂತ್ರಿಗಳಲ್ಲಿ ನಾನು ಕೇಳಿ ಕೊಳ್ಳುವುದೇನೆಂದರೆ, ಬರಗಾಲ ಅಂಥ ಘೋಷಣೆ ಮಾಡಿದಮೇಲೆ ಕೆಲವು ಕೆಲಸ ತೆಗೆದುಕೊಂಡ ಮೇಲೆ ತ್ವರಿತ ರೀತಿಯಲ್ಲಿ ಹಣ ಕೊಡಬೇಕಾಗುತ್ತದೆ. ಎನ್‌ಆರ್‌ಇಪಿ ಸ್ಕೀಮ್‌ಗಳಲ್ಲಿ ಹಣ ಮಂಜೂರಾತಿಗೆ ಕಳುಹಿಸಿಕೊಟ್ಟಿದ್ದಾರೆ. ಕೂಲಗಾರರಿಗೆ ಅಲ್ಲಿ ಹಣ ಕೊಡಲಿಕ್ಕೆ ದುಡ್ಡು ಇಲ್ಲ, ಇಂಥ ಪರಿಸ್ಥಿತಿ ಉದ್ಭವ ವಾಗಿದೆ, ಇನ್ನು ಕುಡಿಯುವ ನೀರಿನ ಸಲುವಾಗಿ ಹಳ್ಳಿಕೆರೆ, ಹಳ್ಳಿಗುಡಿ, ವೆಂಕಟಾಪುರ, ಐತಾಪುರ ಈ ಈ ತರಹ ಸುಮಾರು ೫ ಹಳ್ಳಿಗಳವರು ಎರಡು ಮೈಲಿ ದೂರ ಹೋಗಿ ಟ್ರಕ್‌ನಲ್ಲಿ ನೀರು ತರುತ್ತಾರೆ. ಅದರ ಬಗ್ಗೆ ಕೂಡ ಎಲ್‌ಆರ್‌ಎಸ್ ಮತ್ತು ಎನ್‌ಆರ್‌ಡಬ್ಲ್ಯುಎಸ್ ನಲ್ಲಿ ಕೊಡುತ್ತಾರೆ ಎಂದು ಹೇಳಿದರು, ಅದು ಕೂಡ ಆಗಲಿಲ್ಲ. ಈ ೫ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕು ಇನ್ನು ಗದಗ್, ಮುಂಡರಗಿ, ಶಿಗ್ಗಾವಿ, ಸವಣೂರು, ಕುಂದಗೋಳ್, ಹಾವೇರಿ ಇವೆಲ್ಲಾ ತಾಲ್ಲೂಕುಗಳನ್ನು ಬರಗಾಲ ಅಂಥ ಘೋಷಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಕೆ. ಕಾಳೆ.—ಮಾನ್ಯ ಅಧ್ಯಕ್ಷರೇ, ಪೂರ್ವಭಾವಿಯಾಗಿ ನಮ್ಮ ಮಾನ್ಯ ಕಂದಾಯ ಸಚಿವರು ಈ ಬರಗಾಲ ಪೀಡಿತ ಪ್ರದೇಶದ ಬಗ್ಗೆ ಒಂದು ವರದಿಯನ್ನು ಈ ಸಭೆಗೆ ತಂದು ಒಪ್ಪಿಸಿದ್ದಕ್ಕೆ ಕೃತಜ್ಞತೆ ಯನ್ನು ಸಲ್ಲಿಸಬೇಕಾಗಿದೆ. ಈಗಾಗಲೇ ನಮ್ಮ ಸರ್ಕಾರದವರು, ಕಾಲಕಾಲಕ್ಕೆ ತೆಗೆದುಕೊಳ್ಳುವ ಯೋಜನೆಗಳ ಬಗ್ಗೆ ಹೆಚ್ಚಿನ ನಿಗಾ ವಹಿಸಿ, ಅದರ ಬಗ್ಗೆ ರಿಪೋರ್ಟ್ ಸಿದ್ಧಪಡಿಸಿ ನಮಗೆ ಒಪ್ಪಿಸಿದ್ದಾರೆ. ಅದೇ ಪ್ರಕಾರ ಒಂದು ಹೆಚ್ಚಿನ ಕಾರ್ಯವನ್ನು ಮಾಡಲಿಕ್ಕೆ ಮುಂದಾಗಿದ್ದಾರೆ. ಈ ಬರಗಾಲ ಪರಿಸ್ಥಿತಿ ವಿಕೋಪದ ಬಗ್ಗೆ ಸರ್ಕಾರದವರು ಮುಂಜಾಗರೂಕತೆ ಕ್ರಮ ತೆಗೆದುಕೊಂಡಿದ್ದಾರೆ. ಆದರೆ ಇವರು ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ನಮ್ಮ ಮುಂದೆ ಏನು ಇಟ್ಟಿದ್ದಾರೆ, ಇದರಲ್ಲಿ ಎಷ್ಟು ಸತ್ಯಾಂಶ ಇದೆ ಅಂಥ ನೋಡಿದರೆ, ಇದು ಸರಿಯಾದ ವರದಿ ಅಲ್ಲ ಅಂಥ ನಾವೆಲ್ಲರೂ ಹೇಳಬೇಕಾಗು ತ್ತದೆ. ಬಿಜಾಪುರ ಜಿಲ್ಲೆ, ಮುಧೋಳ್ ತಾಲ್ಲೂಕು, ಬರಗಾಲದ ಬಗ್ಗೆ ಚರಿತ್ರೆ ಸೃಷ್ಟಿಸಿದಂಥ ವಿಚಾರ. ಅಲ್ಲಿ ರೀಸೆಂಟ್ ಆಗಿ ಮಳೆಯಾಗಿದೆ, ಆದ್ದರಿಂದ, ಎಲ್ಲ ಜನರು ಬೀಜ ಬಿತ್ತುವುದರಲ್ಲಿ ಉತ್ಸಾಹದಿಂದ್ದಾ ರೆಂದು ಹೇಳಿದ್ದಾರೆ. ನನಗೆ ತಿಳಿದವಟ್ಟಿಗೆ, ಫೋನ್ ಮುಖಾಂತರ ನನಗೆ ಬಂದ ಮಾಹಿತಿ ಪ್ರಕಾರ ನಮ್ಮಲ್ಲಿ ಸರಿಯಾದಂಥ ಮಳೆ ಆಗಿಲ್ಲ, ಬಿತ್ತನೆಯಾಗಿಲ್ಲ, ಬಿತ್ತನೆ ಮಾಡಿದ್ದು, ಸರಿಯಾದ ಫಲ ಕೊಟ್ಟಿಲ್ಲ, ಬಿತ್ತಿದಂಥ ಬೀಜ, ಅದಕ್ಕೆ ಹಾಕಿದಂಥ ಗೊಬ್ಬರದಿಂದ ಲುಕ್ಸಾನು ಆಗಿದೆ. ಅಷ್ಟೇ ಅಲ್ಲದೇ ರೈತರು ಬಹಳ ಕಷ್ಟದಲ್ಲಿದ್ದಾರೆ. ಈಗ ಜೂನ್, ಜುಲೈ ತಿಂಗಳಲ್ಲಿ ಬಿತ್ತನೆ ಆಗಬಹುದು ಅಂಥ ಮಾಡಿದ್ದಾರೆ. ಅದು ಆಗದೇ ಹೋದರೆ, ಮುಂದೆ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಬಿತ್ತನೆ ಮಾಡಬೇಕಾಗು ತ್ತದೆಂದು ಹೇಳುತ್ತೇನೆ.

೬-೦೦ ಪಿ. ಎಂ.

ಈಗ ಜುಲೈ ತಿಂಗಳು ಕಳೆದುಹೋಗಿ ಆಗಸ್ಟ್ ಬರುತ್ತದೆ. ಈಗ ಬಿತ್ತನೆ ಮಾಡಿದರೆ ಡಿಸೆಂಬರ್ ಅಥವಾ ಜನವರಿ ತಿಂಗಳಲ್ಲಿ ನಾವು ಉಳುವುದಕ್ಕೆ ಸಾಧ್ಯವಾಗುವುದಿಲ್ಲ. ಅದರ ಹಿಂದೆ ಹಿಂಗಾರಿ ಬೆಳೆ ಬರುವುದ ರಿಂದ ಅಷ್ಟು ಫಲಪ್ರದವಾಗುವುದಿಲ್ಲ. ಈಗ ಮುಂಗಾರು ಬಿತ್ತನೆ ಸಂಪೂರ್ಣವಾಗಿ ವಿಫಲವಾಗಿದೆ. ಈ ಬರಗಾಲ ಪೀಡಿತ ಪ್ರದೇಶದಲ್ಲಿ ಮಾನ್ಯ ಸದಸ್ಯರು ಹೇಳಿದಂತೆ ಮೈನರ್ ಇರಿಗೇಷನ್ ವರ್ಕ್ಸ್, ಲಿಫ್ಟ್

ಇರಿಗೇಷನ್ ವರ್ಕ್ಸ್ "ಸಿ'' ಲಿಸ್ಟ್‌ನಲ್ಲಿರತಕ್ಕ ಕೆರೆಗಳ ಕೆಲಸವನ್ನು ತೆಗೆದುಕೊಂಡು ಶಾಶ್ವತ ಕಾಮಗಾರಿಗಳನ್ನು ಮಾಡಿದರೆ ಜನರಿಗೆ ಒಂದು ಶಾಶ್ವತ ಪರಿಹಾರವನ್ನು ಒದಗಿಸಿಕೊಟ್ಟಂತಾಗುತ್ತದೆ. ಈ ಸಂದರ್ಭದಲ್ಲಿ ತಾವು ದಯವಿಟ್ಟು ಸೀಲಿಂಗ್ ಲಿಮಿಟ್ ವಗೈರೆ ಏನೂ ಹೇಳದೆ "ಸಿ'' ಲಿಸ್ಟ್‌ನಲ್ಲಿರತಕ್ಕ ಕೆರೆಗಳ ಕೆಲಸವನ್ನು ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಂಡು ಕೆಲಸ ಮಾಡಿಸಬೇಕೆಂದು ಸಲಹೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಂ. ನಡಾಫ (ಶಿಗ್ಗಾಂ).—ಮಾನ್ಯ ಅಧ್ಯಕ್ಷರೇ, ಈ ಸ್ಟೇಟ್‌ಮೆಂಟ್‌ನ್ನು ಮಾನ್ಯ ಕಂದಾಯ ಸಚಿವರು ಏನು ಈ ಸಭೆಯ ಮುಂದಿಟ್ಟಿದ್ದಾರೆ. ಇದರಲ್ಲಿ ವಾಸ್ತವಾಂಶ ಬಹಳ ಕಡಿಮೆ ಇದೆ, ಏಕೆಂದರೆ ಕಳೆದಸಾರಿ ಎಲ್ಲ ಶಾಸಕರನ್ನೂ ಮತ್ತು ಜಿಲ್ಲಾಧಿಕಾರಿಗಳನ್ನೂ ಕರೆಸಿ ಸಮಾಲೋಚನೆ ನಡೆಸಿ ಬರಗಾಲ ಪ್ರದೇಶಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಯೋಚಿಸಿ ಈ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಆದರೆ ಈ ಸಾರಿ ಇಷ್ಟೊಂದು ಹರಿಬರಿಯಿಂದ ಏತಕ್ಕೆ ಈ ರೀತಿ ಮಾಡುತ್ತಿದ್ದಾರೋ ನನಗೆ ಅರ್ಥವೇ ಆಗುತ್ತಿಲ್ಲ ಆದರೂ ಮಾನ್ಯ ಸಚಿವರು ಒಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದಾರೆ, ಬಹಳ ಸಂತೋಷ. ಇವರು ಕೊಟ್ಟಿರುವುದರಲ್ಲಿ ಎಷ್ಟು ಮಾಡಿದ್ದಾರೆ, ಎಷ್ಟು ಮಾಡಿಲ್ಲ ಎನ್ನುವ ಬಗ್ಗೆ ಏನನ್ನೂ ಹೇಳಿಲ್ಲ. ಕಳೆದ ಸಾರಿ ಮತ್ತು ಅದರ ಹಿಂದಿನ ವರ್ಷ ಯಾವ ಪರಿಸ್ಥಿತಿ ಈ ಜಿಲ್ಲೆಯಲ್ಲಿತ್ತು ಎಂಬುದನ್ನು ಮಾನ್ಯ ಕಂದಾಯ ಸಚಿವರು ಗಮನಿಸಿದಂತೆ ಕಾಣುವುದಿಲ್ಲ. ಧಾರವಾಡ ಜಿಲ್ಲೆಯಲ್ಲಿ ೧೯೭೯–೮೦ರಲ್ಲಿ ಹೆಚ್ಚು ಮಳೆಯಾಗಿ ಅತಿವೃಷ್ಟಿಯಾಯಿತು. ಆದರೆ ೧೯೮೦–೮೧ರಲ್ಲಿ ಇಡೀ ಜಿಲ್ಲೆಯಲ್ಲೇ ಬರಗಾಲ ಬಂತು. ಅಲ್ಲಿ ಬರಗಾಲ ಕಾಮಗಾರಿಗಳನ್ನು ಸರ್ಕಾರದವರು ಹೇಗೆ ತೆಗೆದುಕೊಂಡರು ಎಂಬುದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ, ಅಷ್ಟೇ ಅಲ್ಲ. ಈ ವರ್ಷ ಕೂಡ ರೈತರು ಪೂರ್ತಿಯಾಗಿ ಬಿತ್ತನೆ ಕೆಲಸವನ್ನು ಮಾಡಿಲ್ಲ. ಅಂದರೆ ಅಲ್ಲಿ ಮಳೆಯೇ ಬಂದಿಲ್ಲ. ಆದ್ದರಿಂದ ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಧಾರವಾಡ ಜಿಲ್ಲೆಯನ್ನು ಬರಗಾಲ ಪ್ರದೇಶವೆಂದು ಪರಿಗಣಿಸಬೇಕೆಂದು ಪ್ರಾರ್ಥಿಸುತ್ತೇನೆ. ಏಕೆಂದರೆ ಇಲ್ಲಿ ಕೆಲವೇ ಕೆಲವು ಹಳ್ಳಿಗಳನ್ನು ತೋರಿಸಿದ್ದಾರೆ. ಇವರು ತೋರಿಸಿರುವುದು ಸತ್ಯಕ್ಕೆ ದೂರವಾದುದು. ನಮ್ಮ ಶಿಗ್ಗಾವಿ ಕ್ಷೇತ್ರದಲ್ಲಿ ಸುಮಾರು ೩೦–೪೦ ಹಳ್ಳಿಗಳು ಬರಗಾಲಕ್ಕೆ ತುತ್ತಾಗಿವೆ. ಕಳೆದ ವರ್ಷ ಮತ್ತು ಅದಕ್ಕೆ ಹಿಂದಿನ ವರ್ಷ ಕೂಡ ಇದೇ ರೀತಿ ಆಗಿತ್ತು. ಇವತ್ತು ನಮ್ಮ ಕ್ಷೇತ್ರದ ದಕ್ಷಿಣದ ಅರ್ಧ ತಾಲ್ಲೂಕು ಬರಗಾಲಕ್ಕೆ ತುತ್ತಾಗಿದೆ. ಅಲ್ಲಿ ಮಳೆಯೇ ಬಂದಿಲ್ಲ. ಮುಂಗಾರು ಬಿತ್ತನೆ ಆಗಿಲ್ಲ. ಇಷ್ಟೇ ಅಲ್ಲ ಕುಡಿಯುವ ನೀರಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಉದಾಹರಣೆಗೆ ಹೇಳುವುದಾದರೆ, ಗದಗ, ಮುಂಡರ್ಗಿ, ಶಿರಹಟ್ಟಿ, ಹಾವೇರಿ ಮುಂತಾದ ಪೂರ್ವ ಭಾಗದ ಊರುಗಳು ಏನಿವೆ ಅವು ಪ್ರತಿವರ್ಷ ಬರಗಾಲಕ್ಕೆ ತುತ್ತಾಗುತ್ತಿವೆ. ಇದಕ್ಕೆ ಶಾಶ್ವತ ಪರಿಹಾರವನ್ನು ಒದಗಿಸುವುದಾದರೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನ್ನು ತೆಗೆದುಕೊಂಡು ತನ್ಮೂಲಕ ಸದಾಕಾಲ ಈ ಭಾಗದಲ್ಲಿ ನೀರಾವರಿ ಸೌಲಭ್ಯ ಆಗುವಂತೆ ಮಾಡಬೇಕೆಂದು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಸ್ವಾಮಿ, ಬರಗಾಲ ಕಾಮಗಾರಿಗಳನ್ನು ಮಾಡಬೇಕಾದರೆ ಮೊದಲು ಆ ಭಾಗವನ್ನು ಬರಗಾಲ ಪ್ರದೇಶವೆಂದು ಸಾರಿ ಅಲ್ಲಿನ ಶಾಸಕರನ್ನು ಕರೆದು ವ್ಯವಸ್ಥಿತವಾದ ಕಾರ್ಯಕ್ರಮವನ್ನು ಹಾಕಿಕೊಂಡರೆ ಹೆಚ್ಚಿನ ರೀತಿಯಲ್ಲಿ ಈ ಸಮಸ್ಯೆಯನ್ನು ಪರಿಹಾರ ಮಾಡಲು ಸಾಧ್ಯವಾಗುತ್ತದೆ.

೩೦ನೆ ಜೂನ್ ೧೯೭೨ರಲ್ಲಿ ಎನ್.ಆರ್.ಇ.ಪಿ.ಯಲ್ಲಿ ೬೨ ಲಕ್ಷ ರೂಪಾಯಿಗಳ ಬ್ಯಾಲೆನ್ಸ್ ಇತ್ತು ಎಂದು ಹೇಳುತ್ತಿದ್ದೀರಿ. ಸ್ವಾಮಿ, ನಾನು ತಮ್ಮನ್ನು ಕೇಳುತ್ತೇನೆ, ನಮ್ಮ ಒಂದೊಂದು ತಾಲ್ಲೂಕಿಗೆ ಒಂದೊಂದು ಲಕ್ಷ ರೂಪಾಯಿಗಳೂ ಕೂಡ ಸಿಕ್ಕುತ್ತಿಲ್ಲ. ಪ್ರತಿಯೊಂದು ತಾಲ್ಲೂಕಿಗೂ ಇಷ್ಟೊಂದು ಹಣವನ್ನು ಕೊಟ್ಟಿದ್ದೇವೆಂದು ಕೇವಲ ಪುಸ್ತಕದಲ್ಲಿ ತೋರಿಸುವುದು ಬೇಡ. ದಯವಿಟ್ಟು ಪ್ರತಿಯೊಂದು ಜಿಲ್ಲೆಗೂ ಈ ಹಣವನ್ನು ಹಂಚಿದರೆ ಆಯಾಯ ಜಿಲ್ಲೆಯಲ್ಲಿ ಬರಗಾಲ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಕಡೂರು ಮಲೆನಾಡಿನಲ್ಲಿದೆ. ಆದ್ದರಿಂದ ಅಲ್ಲಿ ಯಾವಾಗಲೂ ಮಳೆ ಬೆಳೆ ಚೆನ್ನಾಗಿ ಆಗುತ್ತಿರುತ್ತದೆಂಬ ಎಲ್ಲರ ಮನಸ್ಸಿನಲ್ಲೂ ಇದೆ, ಮತ್ತು ಸರ್ಕಾರದ ಮನಸ್ಸಿನಲ್ಲೂ ಕೂಡ ಇದೆ. ಆದರೆ ಇದು ಹೇಗಾಗಿದೆ ಎಂದರೆ ನಮ್ಮ

ಕಡೂರು ತ್ರಿಶಂಕು ಸ್ವರ್ಗದಂತಾಗಿದೆ, ಅಲ್ಲಿ ಖಂಡಿತವಾಗಿಯೂ ೧೦–೧೨ ಅಂಗುಲ ಮಳೆ ಕೂಡ ಸರಿಯಾಗಿ ಬರುವುದಿಲ್ಲ. ಪ್ರತಿವರ್ಷವೂ ಇದೇ ಪರಿಸ್ಥಿತಿ ನಮ್ಮ ಕಡೆ ಇರುತ್ತದೆ. ಮೊದಲು ಡಿ.ಪಿ.ಎ.ಪಿ. ಎಂದು ಯೋಜನೆಯನ್ನು ಸರ್ಕಾರದವರು ಇಟ್ಟುಕೊಂಡಿದ್ದರು. ಆದರೆ ಈಗ ಅದನ್ನು ತೆಗೆದುಹಾಕಿದ್ದಾರೆ. ಮಾನ್ಯ ಸಚಿವರಾದ ರಾಮಯ್ಯನವರು ನಮ್ಮ ಜಿಲ್ಲೆಯವರು. ಅವರು ಇದನ್ನು ಮಾಡಿಸಿಯೇ ಮಾಡಿಸುತ್ತೇನೆಂದು ಹೇಳಿದ್ದಾರೆ. ಪ್ರತಿ ವರ್ಷವೂ ನಮ್ಮ ಕಡೆ ಕ್ಷಾಮ ಬರುತ್ತಿರುವುದರಿಂದ ನಾವೂ ಕೂಡ ಪ್ರತಿವರ್ಷ ದುಡ್ಡನ್ನು ಕೊಡಿ. ಬರಗಾಲ ಕಾಮಗಾರಿಯನ್ನು ತೆಗೆದುಕೊಳ್ಳಿ ಎಂದು ಕೇಳಲೇಬೇಕಾಗಿದೆ. ನಾವು ಕೇಳದೇಹೋದರೆ ಬಹಳ ಕಷ್ಟವಾಗುತ್ತದೆ. ನಮ್ಮ ಭಾಗದಲ್ಲಿ ಈ ಸಾರಿಯಂಥ ಕ್ಷಾಮ ಹಿಂದೆ ಯಾವಾಗಲೂ ಬಂದಿರಲಿಲ್ಲ. ಭೂಮಿಯನ್ನು ಉತ್ತಿಲ್ಲ, ಬೀಜವನ್ನು ಬಿತ್ತಿಲ್ಲ, ಕುಡಿಯುವುದಕ್ಕೆ ದನಕರುಗಳಿಗೆ, ಜನರಿಗೆ ನೀರಿಲ್ಲ, ತೆಂಗು ಮತ್ತು ಅಡಿಕೆ ತೋಟಗಳಲ್ಲಿ ಹೊಂಬಾಳೆಯೆಲ್ಲಾ ಉದುರುತ್ತಿದೆ. ಅಲ್ಲಿಗೆ ನೀರನ್ನೊದಗಿಸಲು ಬಾವಿ ತೆಗೆಸುತ್ತೇವೆ, ಇನ್ನೇನು ರಿಗ್ ಬರುತ್ತದೆ ಎಂದು ಹೇಳಿದ್ದೀರಿ. ಆದರೆ ಅದನ್ನು ಇನ್ನೂ ಒದಗಿಸಿಕೊಟ್ಟಿಲ್ಲ. ಬರಗಾಲ ಕಾಮಗಾರಿಯನ್ನು ತಗೆದುಕೊಳ್ಳಲು ೪೦ ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆಂದು ಹೇಳಿದ್ದೀರಿ. ನಿಮ್ಮ ಲೆಕ್ಕದ ಪ್ರಕಾರ ಕೂಲಿಗೆ ಬಂದವರಿಗೆ ೫ ರೂಪಾಯಿನಂತೆ ಕೊಡಬೇಕು. ಆದರೆ ಲೋಕೋಪಯೋಗಿ ಇಲಾಖೆಯವರು ೩ ರೂಪಾಯಿನಂತೆ ಕೂಲಿ ಕೊಡುತ್ತಿದ್ದಾರೆ. ಇದರಿಂದಾಗಿ ನಮ್ಮ ಕೆಲಸಕ್ಕೆ ಯಾರೂ ಕೂಡ ಬರುವುದಿಲ್ಲ. ನಮಗೆ ಕೊಟ್ಟಿರತಕ್ಕ ಹಣದಲ್ಲಿ ೧೦ ಲಕ್ಷ ರೂಪಾಯಿಗಳು ಕೂಡ ಖರ್ಚಾಗುವುದಿಲ್ಲ. ಉಳಿದುದೆಲ್ಲಾ ವಾಪಸು ಸರ್ಕಾರಕ್ಕೇ ಬರುತ್ತದೆ. ನಮಗೆ ನದಿಗಳ ಆಶ್ರಯ ಕಡಿಮೆ, ಜಿಯಲಾಜಿಕಲ್ ಡಿಪಾರ್ಟ್‌ಮೆಂಟ್‌ನವರು ಒಂದು ಮ್ಯಾಪ್ ಮಾಡಿದ್ದಾರೆ. ಅವರು ನಮ್ಮನ್ನು ಒಂದು ಜಾಗಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ೧ ಗಂಟೆಗೆ ೧೦–೧೫ ಸಾವಿರ ಗ್ಯಾಲನ್ ನೀರು ಬರುತ್ತಿತ್ತು, ಅಲ್ಲಿ ಒಳ್ಳೆಯ ಭೂಮಿ ಇದೆ. ಅಲ್ಲಿ ಕಾಬೂಲ್ ದ್ರಾಕ್ಷಿಯನ್ನು ಹಾಕಿದರೆ ಹೆಚ್ಚು ರುಚಿ ಇರುತ್ತದೆ. ಸರ್ಕಾರದವರು ಅಲ್ಲಿ ಬಾವಿಗಳನ್ನು ತೆಗೆಸಿಕೊಟ್ಟರೆ ಅನುಕೂಲವಾಗುತ್ತದೆ. ಅದನ್ನು ಬಿಟ್ಟು ರೈತರಿಗೇ ಹಣವನ್ನು ಕೊಟ್ಟು ಬಾವಿ ತೆಗೆಸಿಕೊಳ್ಳಿ ಎಂದರೆ ಅವರು ತೆಗೆಸಿಕೊಳ್ಳುವುದಿಲ್ಲ. ಕೇವಲ ಬಾವಿ ತೆಗೆಸಿದರೆ ಸಾಲದು ಅದಕ್ಕೆ ಒಂದು ಪಂಪ್‌ಸೆಟ್ಟನ್ನೂ ಕೂಡ ಹಾಕಿಸಿಕೊಡಬೇಕು. ಮಾನ್ಯ ಸಚಿವರಾದ ಶ್ರೀಮಾನ್ ಬೇಗಾನೆ ರಾಮಯ್ಯನವರು ಆ ದಿವಸ ನಮ್ಮ ಕಡೆ ಬಂದಿದ್ದಾಗ ಮಳೆ ಬಂತು. ನಾನು ಇಲ್ಲಿಗೆ ಬಂದಿದ್ದರಿಂದ ಮಳೆ ಬಂತು ಎಂದು ಇವರು ಹೇಳಿದರು. ಆದರೆ ಇವತ್ತಿನವರೆಗೂ ಮತ್ತೆ ಮಳೆಯೇ ಬಂದಿಲ್ಲ. ಆದ್ದರಿಂದ ನಾನಾವರೂ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ತಾವೇ ಬಾವಿಗಳನ್ನು ತೆಗೆಸಿ ಪಂಪ್ ಹಾಕಿಸಿ ಕೊಡುವ ವ್ಯವಸ್ಥೆ ಮಾಡಬೇಕು. ಕಲ್ವರ್ಟ್ ಹಾಗೂ ಕಟ್ಟಡಗಳನ್ನು ಕಟ್ಟಿಸಿಕೊಡುವ ಕೆಲಸವನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಲ್. ಎಚ್. ದೇಸಾಯಿ —(ಯಲಬುರ್ಗಾ) ಮಾನ್ಯ ಅಧ್ಯಕ್ಷರೇ, ಪೂರ್ವಭಾವಿಯಾಗಿನಮ್ಮ ಮಾನ್ಯ ಕಂದಾಯಸಚಿವರು ಒಂದ ರೀತಿ ಮುಂಜಾಗ್ರತೆಯ ಕ್ರಮದ ರೀತಿಯಲ್ಲಿ ನಮ್ಮ ಜಿಲ್ಲೆಯ ಅಭಾವ ಪೀಡಿತ ಪ್ರದೇಶದ ಚಿತ್ರವನ್ನು ಕೊಟ್ಟಿದ್ದಾರೆ. ನನ್ನ ತಿಳುವಳಿಕೆಯವಟ್ಟಿಗೆ ಹೇಳುವುದಾದರೆ ಅಭಾವ ಯಾವತ್ತು ನಮಗೆ ತಪ್ಪಿದ್ದಲ್ಲ. ಉದಾಹರಣೆಗೆ ರಾಯಚೂರು ಜಿಲ್ಲೆಯ ಎಡಭಾಗಗಳಾದ ದೇವದುರ್ಗ, ಜೇವರ್ಗಿ, ಕೊಪ್ಪ, ಕುಷ್ಟಗಿಇವು ಯಾವಾಗಲೂ ಸಂಪೂರ್ಣವಾಗಿ ಅಭಾವ ಪೀಡಿತ ಪ್ರದೇಶಗಳಿಗೆ ಒಳ ಪಡತಕ್ಕಂಥ ತಾಲ್ಲೂಕುಗಳು. ಸುಮಾರಾಗಿ ವರ್ಷಕ್ಕೆ ೫'-೬' ಮಳೆ ಬರತಕ್ಕಂಥಾದ್ದರಲ್ಲಿ ಈ ವರ್ಷ ಒಂದು ಇಂಚು ಮಳೆಯೂ ಆಗದೆ ಅಭಾವ ಹೆಚ್ಚಿನ ಪ್ರಮಾಣದಲ್ಲಿ ಉಂಟಾಗಿದೆ. ಹೀಗಾಗಿರುವುದರಿಂದ ಅಭಾವ ಪರಿಸ್ಥಿತಿಯನ್ನು ನಿಲ್ಲಿಸಲಿಕ್ಕೆ ಸರ್ಕಾರ ಸಾಕಷ್ಟು ಶಾಶ್ವತವಾದ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು, ನಮ್ಮ ತಾಲ್ಲೂಕು ಯಲಬುರ್ಗಾಕ್ಕೆ ಎನ್‌ಆರ್‌ಇಪಿ ಪ್ರೋಗ್ರಾಮ್ ಆಗಲಿ, ಡಿಪಿಎಪಿ ಪ್ರೋಗ್ರಾಮ್ ಆಗಲಿ ಕೆಲವೊಂದು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ೧೯೭೬ನೇ ಇಸವಿಯಲ್ಲಿ ನಮ್ಮ ತಾಲ್ಲೂಕಿಗೆ ಆರ್.ಡಿ.ಸಿ. ಮಂಜೂರಾತಿ ಕೊಟ್ಟಿದ್ದರೂ ಇಲ್ಲಿಯತನಕ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಮಾನ್ಯ ಆರೋಗ್ಯ ಮಂತ್ರಿಗಳಿಗೆ ಇದರ ಬಗ್ಗೆ ಹೆಚ್ಚಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಗ್ರಾಮಕ್ಕೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ವಿಷಯದ ಬಗ್ಗೆ ಹೇಳುವುದಾದರೆ ಸುಮಾರು ೧೬೫ ಗ್ರಾಮಗಳ ಪೈಕಿ ೮೦ ಗ್ರಾಮಗಳು ಒಣ ಬೇಸಾಯಕ್ಕೆ ಒಳಪಟ್ಟು ಕೆಂಪು ಮಣ್ಣು ಮಿಶ್ರಿತ ಭೂಮಿ ಇದೆ. ಅನೇಕ ಭೂಮಿಗಳಲ್ಲಿ ವ್ಯವಸಾಯಕ್ಕೆ ಪಂಪ್‌ಸೆಟ್ಟುಗಳು ಇದ್ದರೂ, ಪಂಪ್

ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಇಲ್ಲದೆ ಬೇಸಾಯಕ್ಕೆ ತೊಂದರೆಯುಂಟಾಗಿರುತ್ತದೆ. ಆದ್ದರಿಂದ ಆದಷ್ಟು ತೀವ್ರಗತಿಯಲ್ಲಿ ಸರ್ಕಾರದವರು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿದರೆ ಸ್ವಲ್ಪಮಟ್ಟಿಗೆ ಅಭಾವ ಪರಿಹಾರ ಮಾಡಿದಂತಾಗುತ್ತದೆ.

ನಮ್ಮ ಅನೇಕ ಜನ ಶಾಸಕರು ಅಪ್ಪರ್ ಕೃಷ್ಣಾ ಜಲಾಶಯದ ಬಗ್ಗೆ ಹೇಳಿದರು. ಇದು ನಮ್ಮ ತಾಲ್ಲೂಕಿಗೆ ಬರತಕ್ಕಂಥ ಒಂದು ಯೋಜನೆಯಾಗಿದೆ. ಸರ್ಕಾರದವರು ತೀವ್ರ ಕ್ರಮ ತೆಗೆದುಕೊಂಡು ಈ ಯೋಜನೆಯನ್ನು ಮುಗಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಎರಡನೆಯ ವಿಷಯವೇನೆಂದರೆ, ಎನ್.ಆರ್.ಡಬ್ಲ್ಯು ಸ್ಕೀಂ ನಲ್ಲಿ ೨೦ ಹಳ್ಳಿಗಳಿಗೆ ವಿಶೇಷ ಮಂಜೂರಾತಿಯನ್ನು ಕೊಟ್ಟು ವರ್ಷವಾಯಿತು. ವಿದ್ಯುಚ್ಛಕ್ತಿ ಸರಬರಾಜು ಆಗಿದಿದ್ದ ಕಾರಣ ಕುಡಿಯುವ ನೀರಿನ ವ ವಸ್ಥೆಯಾಗಲಿಲ್ಲ. ಕುಡಿಯುವ ನೀರಿನ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ಭಾಗದಲ್ಲಿ ಮುಂಗಾರು ಮಳೆ ಬಹಳ ತಡವಾಗಿ ಬಂದುದರಿಂದ ಮುಂಗಾರು ಬೆಳೆ ನಾಶವಾಗಿಹೋಯಿತು. ಆದ್ದರಿಂದ ಪಂಪ್‌ಸೆಟ್ಟುಗಳನ್ನು ಅಳವಡಿಸಿರುವ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕಂಥ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಕುಷ್ಟಗಿ ತಾಲ್ಲೂಕಿನ ಶಾಸಕರು ಒಂದು ಬೇಡಿಕೆಯನ್ನು ಇಟ್ಟಿದ್ದಾರೆ. ಆ ಬೇಡಿಕೆಯನ್ನು ಬೆಂಬಲಿಸುತ್ತಾ, ಹೈಪವರ್ ಕಮಿಟಿಗೆ ನಾನ್ ಅಫಿಷಿಯಲ್ ಮೆಂಬರನ್ನು ಸೇರಿಸಲಿಕ್ಕೆ ಸರ್ಕಾರದವರು ಯೋಚನೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಪ್ರಾರ್ಥಿಸುತ್ತೇನೆ.

ಇನ್ನು ರಿಕವರಿ ಬಗ್ಗೆ ಹೇಳುವುದಾದರೆ, ಸರ್ಕಾರದ ಅಧಿಕಾರಿಗಳು ರೈತರು ತೆಗೆದುಕೊಂಡಿರುವ ಸಾಲದ ವಸೂಲಾತಿಗಾಗಿ ಆಗಾಗ್ಗೆ ಬರುತ್ತಲೇ ಇರುತ್ತಾರೆ. ಅದನ್ನು ತಡೆಗಟ್ಟಬೇಕು. ನಮ್ಮ ಜಿಲ್ಲೆಯ ಅಭಾವಪೀಡಿತ ತಾಲ್ಲೂಕುಗಳು ಎಂದರೆ ಯಲಬುರ್ಗ, ಕುಷ್ಟಗಿ, ಲಿಂಗಸಗೂರ್. ಈ ಪ್ರದೇಶಗಳಿಗೆ ಜಿಲ್ಲಾಧಿಕಾರಿಗಳು ಪ್ರತಿತಿಂಗಳು ಬಂದು ನಮ್ಮ ಸಮಸ್ಯೆಯನ್ನು ಅರ್ಥಮಾಡಿಕೊಂಡು ವಿಶೇಷವಾದ ಗಮನವನ್ನು ಹರಿಸಬೇಕು. ಮತ್ತು ಅತಿ ಜಾಗ್ರತೆಯಿಂದ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡು ತತ್‌ಕ್ಷಣವೇ ಪರಿಹಾರ ಒದಗಿಸಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಕಂದಾಯ ಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಒಂದು ಸ್ಟೇಟ್‌ಮೆಂಟ್ ಮಾಡಿರುತ್ತೇನೆ. ಅದರಲ್ಲಿ ಹೆಚ್ಚಿನ ಮಾಹಿತಿಯನ್ನು ಕೊಟ್ಟಿರುತ್ತೇನೆ. ಆದರೆ ಕೆಲವು ಸದಸ್ಯರು, ಅದು ಅಷ್ಟು ಸಮಾಧಾನಕರವಾಗಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಜಿಲ್ಲೆಗೆ ಸಂಬಂಧಪಟ್ಟ ಡಿವಿಜನಲ್ ಕಮೀಷನರ್‌ರವರನ್ನು ಕರೆಸಿ, ಬೇರೆ ಬೇರೆ ಖಾತೆಯ ಮುಖ್ಯ ಅಧಿಕಾರಿಗಳನ್ನು ಕರೆಸಿ ಮಾತನಾಡಿ ನಾವು ಈ ಒಂದು ವರದಿಯನ್ನು ಕೊಟ್ಟಿದ್ದೇವೆ. ಅದರಲ್ಲಿ ಮುಖ್ಯವಾಗಿ ಶ್ರೀಮಾನ್ ಎಂ. ಸಿ. ಬಸಪ್ಪನವರು ಮಾತನಾಡುವಾಗ ನನ್ನ ತಾಲ್ಲೂಕಿನ ಬಗ್ಗೆ ಸರ್ಕಾರ ಹೆಚ್ಚಿನ ಆಸಕ್ತಿಯನ್ನು ವಹಿಸಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಚಾಮರಾಜನಗರದಲ್ಲಿ ಅಷ್ಟು ತೃಪ್ತಿಕರವಾದಂಥ ಮಳೆಯಾಗಿಲ್ಲವೆಂದು ನನ್ನ ವರದಿಯಲ್ಲೂ ಕೂಡ ಹೇಳಿದ್ದೇನೆ. ಈಗ ಸದ್ಯಕ್ಕೆ ಸ್ವಲ್ಪ ಮಟ್ಟಿಗೆ ಮಳೆಯಾಗಿರುವುದರಿಂದ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವ ಬಗ್ಗೆಯೂ ಕೂಡ ಹೇಳಿದ್ದೇನೆ. ಅವರು ಮಾತನಾಡುತ್ತಾ ಕುಡಿಯುವ ನೀರಿಗಾಗಿ ೮ ಲಕ್ಷ ರೂಪಾಯಿಗಳನ್ನು ೪ ಜಿಲ್ಲೆಗಳಿಗೆ ಮಾತ್ರ ಒದಗಿಸಿದ್ದೀರಿ. ಪ್ರತಿಯೊಂದು ಜಿಲ್ಲೆಗೆ ೨ ಲಕ್ಷ ರೂಪಾಯಿಗಳು ಆಯಿತು, ಅಂದರೆ ಪ್ರತಿಯೊಂದು ತಾಲ್ಲೂಕಿಗೂ ತೆಗೆದುಕೊಂಡರೆ ೨೦ ರಿಂದ ೫೦ ಸಾವಿರ ರೂಪಾಯಿಗಳನ್ನು ಕೂಡ ಕೊಡುವುದಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ಕೂಡ ಹೇಳಿದ್ದಾರೆ. ೮ ಲಕ್ಷ ರೂಪಾಯಿಗಳನ್ನು ಒದಗಿಸಿರತಕ್ಕಂಥಾದ್ದು ಯಾವ ಸೋರ್ಸ್‌ಸ್‌ನಿಂದಲೂ ನೀರಿನ ಸೌಕರ್ಯವಿಲ್ಲದಿರುತ್ತದೆ. ಅಂತಹ ಕಡೆ ಮತ್ತು ಸ್ಕೇರ್‌ಸಿಟಿ ಎಲ್ಲಿ ಇದೆ ಅಂಥಕಡೆ ಬೋರ್‌ವೆಲ್‌ಗಳನ್ನು ಹಾಕಿ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಟ್ಯಾಪಿಂಗ್ ವ್ಯವಸ್ಥೆ ಮಾಡುವುದಕ್ಕಾಗಿ ಕೊಟ್ಟಿದ್ದೇವೆ. ರೆಗ್ಯುಲರ್ ಬಡ್ಜೆಟ್ ನಲ್ಲಿ ಮೈಸೂರು ಜಿಲ್ಲೆಗೆ ಸುಮಾರು ೫೩ ಲಕ್ಷ ೪ ಸಾವಿರ ರೂಪಾಯಿಗಳ ಬೇಡಿಕೆಯನ್ನು ಮಾಡಿದ್ದರು. ಇದರಲ್ಲಿ ಮೂರನೆ ಒಂದರಷ್ಟು ಅಮೌಂಟ್‌ನ್ನು ರಿಲೀಸ್ ಮಾಡಿರುತ್ತೇವೆ. ಇನ್ನು ಮೂರನೆ ಎರಡುಭಾಗ ಅಮೌಂಟನ್ನು ಇನ್ನು ಎರಡು ದಿವಸದಲ್ಲಿಯೇ ರಿಲೀಸ್ ಮಾಡುತ್ತೇವೆ. ಎಲ್ಲಿ ನೀರಿನ ಕೊರತೆ ಇದೆ ಅಂಥಕಡೆ ಉಪಯೋಗಿಸಬೇಕು ಎನ್ನುವ ದೃಷ್ಟಿಯಿಂದ ಮೈಸೂರು ಮತ್ತು

ಚಿಕ್ಕಮಂಗಳೂರು, ಚಿತ್ರದುರ್ಗ ಮತ್ತು ಧಾರವಾಡ ಈ ನಾಲ್ಕು ಡಿಸ್ಟ್ರಿಕ್ಟ್‌ಗೆ ಹಣವನ್ನು ಕೊಟ್ಟಿದ್ದೇವೆ. ಧಾರವಾಡಕ್ಕೆ ಒಂದುಕೋಟಿ ಮೂರುಲಕ್ಷ ರೂಪಾಯಿಗಳನ್ನು ಈ ಗಾಗಲೇ ಮಂಜೂರು ಮಾಡಿದ್ದೇವೆ. ಇದರಲ್ಲಿ ಮೂರನೆ ಒಂದು ಭಾಗದಷ್ಟು ಅಮೌಂಟನ್ನು ರಿಲೀಸ್ ಮಾಡಿದ್ದೇವೆ, ಚಿಕ್ಕಮಗಳೂರಿಗೆ ೩೮ ಲಕ್ಷ ೮೫ ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಚಿತ್ರದುರ್ಗಾಕ್ಕೆ ೪೭ ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ಬೆಂಗಳೂರಿಗೆ ೫೦ ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ಕೋಲಾರಕ್ಕೆ ೫೦ ಲಕ್ಷ ರೂಪಾಯಿಗಳ ಮಂಜೂರಾತಿ ಮಾಡಿ ಇದರಲ್ಲಿ ಮೂರನೆ ಒಂದುಭಾಗ ರಿಲೀಸ್ ಮಾಡಿದ್ದೇವೆ. ಹಾಸನಕ್ಕೆ ೪೦ ಲಕ್ಷ ೫೦ ಸಾವಿರ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದೇವೆ. ಇದರಲ್ಲಿ ಕುಡಿಯುವ ನೀರಿಗಾಗಿ ಕೊಟ್ಟಿರುವ ೨ ಲಕ್ಷ ರೂಪಾಯಿಗಳು ಸಾಕಾಗುವುದಿಲ್ಲವೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುವುದಿಲ್ಲ' 'ಹೋದಸಲ ಕೂಡ ಹೆಚ್ಚಿನ ಹಣವನ್ನು ಕೊಟ್ಟು' ಬರಗಾಲಪೀಡಿತ ಪ್ರದೇಶದ ಜನರಿಗೆ ಸಹಾಯ ಮಾಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ' ಈ ಸಲವು ಕೂಡ ಎಲ್ಲಿಯಾದರೂ ತೊಂದರೆ ಇದ್ದರೆ ಖಂಡಿತವಾಗಿಯೂ ನಾವು ಆ ವ್ಯವಸ್ಥೆ ಮಾಡುತ್ತೇವೆಂದು ಅನೇಕಸಲ ಹೇಳಿದ್ದೇನೆ, ಡೆವಲಪ್‌ಮೆಂಟಲ್ ಆಕ್ಟಿವಿಟೀಸ್ ಮಾಡಿ ಜನರಿಗೆ ಸಹಾಯ ಮಾಡಬೇಕು. ಜನರು ಬದುಕುವುದಕ್ಕೋಸ್ಕರವಾಗಿ ಎಲ್ಲರೀತಿಯಾದ ಸೌಕರ್ಯವನ್ನು ಮಾಡುತ್ತೇವೆಂದು ಹೇಳಿದ್ದೇನೆ. ನನಗೆ ತಿಳಿದಮಟ್ಟಿಗೆ ನಾನು ಕೊಟ್ಟಂಥ ವಿವರಣೆ ಅಷ್ಟು ಸಮಾಧಾನಕರವಾಗಿಲ್ಲವೆಂದರೆ, ಅವರು ಸುಮ್ಮನೆ ಹೇಳಬೇಕು ಎನ್ನುವ ಮಟ್ಟಿಗೆ ಹೇಳಿರಬಹುದು ಎನ್ನಿಸುತ್ತದೆ. ಇಂಥಕಡೆ ಅನುಕೂಲತೆಗಳನ್ನು ಕೊಟ್ಟಿಲ್ಲ, ಕೊಡಬೇಕೆಂದು ಹೇಳಿದ್ದರೆ ಅಂಥಕಡೆ ಕೊಡತಕ್ಕಂಥ ವ್ಯವಸ್ಥೆ ನಾನು ಮಾಡುತ್ತಿದ್ದೆ. ಮಾನ್ಯ ಅಧ್ಯಕ್ಷರೇ ಹೋದಸಲ ಸುಮಾರು ಒಂದೇ ಒಂದು ತಿಂಗಳಲ್ಲಿ ಎಲ್ಲ ಕಡೆ ಕುಡಿಯುವ ನೀರಿನ ಬಗ್ಗೆ ಎಷ್ಟು ಪ್ರಾಮಿನೆನ್ಸ್ ಕೊಡಬೇಕೋ ಅಷ್ಟನ್ನು ಕೊಟ್ಟಿದ್ದೇವೆ. ಹೋದಸಲ ಸುಮಾರು ೮-೯ ಸಾವಿರ ಬೋರ್‌ವೆಲ್‌ಗಳನ್ನು ಹಾಕಿಸಿದ್ದೇವೆ. ಸುಮಾರು ೨೫-೩೦ ವರ್ಷಗಳಲ್ಲಿ ೨೬ ಸಾವಿರ ಬೋರ್‌ವೆಲ್‌ಗಳನ್ನು ಹಾಕಿದ್ದರೆ. ಕೇವಲ ಒಂದೂವರೆ ವರ್ಷದಲ್ಲಿ ೧೨ ಸಾವಿರ ಬೋರ್‌ವೆಲ್‌ಗಳನ್ನು ಹಾಕಿಸಿದ್ದೇವೆ. ಇದರಲ್ಲಿ ಹತ್ತುಸಾವಿರ ಬೋರ್‌ವೆಲ್‌ಗಳು ಸಕ್ಸಸ್ ಆಗಿವೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಇಲ್ಲಿ ರೂರಲ್ ಡೆವಲಪ್‌ಮೆಂಟ್ ಇಲಾಖಾ ಬೇಡಿಕೆಯನ್ನು ಮಂಡಿಸುವಾಗ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ಇರತಕ್ಕಂಥ ಹಳ್ಳಿಗಳ ಸಂಖ್ಯೆಯನ್ನು ಬೇಡಿಕೆಯಲ್ಲಿ ಕೊಟ್ಟಿದ್ದಾರೆ. ಇಷ್ಟೇ ವರ್ಷದಲ್ಲಿ ಅಲ್ಲಿಗೆಲ್ಲ ಕುಡಿಯುವ ನೀರನ್ನು ಕೊಡುತ್ತೇವೆಂದು ಹೇಳಿದ್ದರೂ ಕೂಡ ವ್ಯವಸ್ಥೆ ಮಾಡಿಲ್ಲ. ನೀರು ಇದ್ದರೂ ಕೂಡ ಕೆಲವೊಂದು ಕಡೆ ಅದನ್ನು ಕೊಂಡೊಯ್ಯಲು ಸಾಧ್ಯವಿಲ್ಲ. ಇಂಥ ಸ್ಕೇರ್‌ಸಿಟಿ ವೇಳೆಯಲ್ಲಾದರೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ವರ್ಷ ಕೂಡ ನಾವು ಸುಮಾರು ೬,೫೦೦ ಬೋರ್‌ವೆಲ್‌ಗಳನ್ನು ತೆಗೆಯತಕ್ಕ ಕಾರ್ಯಕ್ರಮ ಹಾಕಿದ್ದೇವೆ. ಯಾವ್ಯಾವ ಹಳ್ಳಿಗಳಿಗೆ ಕುಡಿಯುವ ನೀರು ಇಲ್ಲ ಅಂತಹ ಹಳ್ಳಿಗಳಿಗೆ ೬.೫೦೦ ಬೋರ್‌ವೆಲ್‌ಗಳನ್ನು ಹಾಕಿಸುವುದರ ಜೊತೆಗೆ ೪೨೦ ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರಿನ ಯೋಜನೆ ಮಾಡಿದ್ದೇವೆ. ಹೀಗೆ ಸುಮಾರು ೭ ಸಾವಿರ ವಾಟರ್ ಸೋರ್ಸ್ಸ್ ಪಾಯಿಂಟ್‌ಗಳನ್ನು ಕಂಡುಹಿಡಿದು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ಅದನ್ನು ತೆಗೆದುಕೊಂಡಿದ್ದೇವೆ. ಇದರಲ್ಲಿ ಸುಮಾರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇಷ್ಟು ಹಣವನ್ನು ಹಿಂದೆ ಎಂದೂ ಖರ್ಚು ಮಾಡಿಲ್ಲ. ಮಾನ್ಯ ಜೆ. ಎಚ್. ಪಟೇಲರು ಬರಗಾಲ ವರ್ಷೇ ವರ್ಷೇ ಬರುತ್ತದೆ, ಅದಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಬೇಕು ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಬಹಳ ಸಾರಿ ಅನೇಕ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಬಿಜಾಪುರಕ್ಕೆ ಹೋದಾಗ ಈ ಮಾತನ್ನು ಹೇಳಿದರು, ಶಾಶ್ವತವಾದ ಪರಿಹಾರ ಕಂಡುಹಿಡಿಯಲು ಒಂದು ಕಮಿಟಿಯನ್ನು ಮಾಡಿ, ಆ ಕಮಿಟಿ ವರದಿಯ ಆಧಾರದ ಮೇಲೆ ಒಂದು ವ್ಯವಸ್ಥೆ ಮಾಡೋಣವೆಂದು, ಅದಕ್ಕೆ ಯಾವ್ಯಾವ ಸೋರ್ಸ್‌ನಲ್ಲಿ ಸಹಾಯ ಬೇಕು ಅದನ್ನು ಮಾಡೋಣ ಎನ್ನುವ ಮಾತನ್ನು ಹೇಳಿದ್ದಾರೆ ಅವರು ಹೇಳಿದ ಮೇಲೆ ನಾವು ಒಂದು ಕಮಿಟಿಯನ್ನು ನೇಮಕ ಮಾಡಿದ್ದೇವೆ. ಆ ಕಮಿಟಿಗೆ ಅಡಿಷನಲ್ ಚೀಫ್ ಸೆಕ್ರೆಟರಿಯವರು ಅಧ್ಯಕ್ಷರು ಡೆವಲಪ್‌ಮೆಂಟ್ ಕಮಿಷನರ್, ಅಗ್ರಿಕಲ್ಚರಲ್ ಯೂನಿವರ್ಸಿಟಿಯವರು, ಎಲ್ಲಾ ಕಾರ್ಯದರ್ಶಿಗಳು

ಸದಸ್ಯರಾಗಿರುತ್ತಾರೆ. ಮಾನ್ಯ ಗಂಗಣ್ಣನವರು, ಆ ಕಮಿಟಿಯೊಳಗೆ ನಾನ್ ಅಫೀಷಿಯಲ್ಸ್ ಯಾರನ್ನು ಹಾಕಿಲ್ಲ, ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಲು ಬೇಕಾದರೆ ನಾನ್ ಅಫಿಷಿಯಲ್ಸ್ ಇಲ್ಲದಿದ್ದರೆ ಆಗುವುದಿಲ್ಲ, ನಾನ್ ಅಫಿಷಿಯಲ್ಸ್‌ಗಳನ್ನು ಆ ಕಮಿಟಿಯೊಳಗೆ ಸೇರಿಸಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದನ್ನು ಬೇಕಾದರೆ ನಾನು ಪರಿಶೀಲನೆ ಮಾಡುತ್ತೇನೆ. ಆದರೆ ಸರ್ಕಾರ ಆಸಕ್ತಿ ವಹಿಸಿ ಇವತ್ತಿನ ದಿವಸ ಒಂದು ಕಮಿಟಿಯನ್ನು ರಚಿಸಿದೆ, ಈಗಾಗಲೇ ನಾಲ್ಕೈದು ಮೀಟಿಂಗ್‌ಗಳು ಆಗಿದೆ. ಅವರು ಸಭೆ ಸೇರಿ ಅನೇಕ ವಿಷಯಗಳನ್ನು ಚರ್ಚೆಮಾಡಿದ್ದಾರೆ, ಡಾಟಾ ಕಲೆಕ್ಟ್ ಮಾಡುತ್ತಿದ್ದಾರೆ, ಅಂಕಿ ಅಂಶಗಳನ್ನು ತರಿಸುತ್ತಿದ್ದಾರೆ, ಅದು ಬಂದ ಮೇಲೆ ಸವಿಸ್ತಾರವಾದಂತಹ ವರದಿಯನ್ನು ಕೊಡುತ್ತಾರೆ. ಮುಂದೆ ಯಾವರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂಬುದನ್ನು ನಾವು ಯೋಚನೆ ಮಾಡೋಣ. ಇವತ್ತಿನ ದಿವಸ ನಾವು ಅನೇಕ ಕಾರ್ಯಕ್ರಮಗಳನ್ನು ಇದರಲ್ಲಿ ಸೇರಿಸಿದ್ದೇವೆ. ಆ ಜನರಿಗೆ ಅನುಕೂಲವಾಗಬೇಕು ಎನ್ನತಕ್ಕ ರೀತಿಯಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ. ನಾವು ತೆಗೆದುಕೊಳತಕ್ಕ ನಿರ್ಣಯ ಹಳ್ಳಿಗಳಲ್ಲಿ ಎಫೆಕ್ಟ್ ಆಗುತ್ತದೆಯೇ ಎಂದೇ ಮಾನ್ಯ ಜೆ. ಎಚ್. ಪಟೇಲರು ಹೇಳಿದ್ದಾರೆ. ಸರ್ಕಾರಕ್ಕೆ ಸರಿಯಾದ ವರದಿ ಬಂದಿದೆಯೇ ಅಥವಾ ಇಲ್ಲವೇ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಈ ಅಧಿವೇಶನ ಮುಗಿದ ಮೇಲೆ ಒಂದು ವ್ಯವಸ್ಥೆ ಮಾಡುತ್ತೇವೆ. ಈಗ ಎಲ್ಲಾ ಶಾಸಕರಿಗೆ ಮತ್ತು ಸಂಬಂಧಪಟ್ಟ ಜಿಲ್ಲಾಧಿಕಾರಿಗಳನ್ನು ಕರೆಸಿ ಮಾತನಾಡುವುದಕ್ಕೆ ಆಗಿಲ್ಲ. ಮುಂದೆ ವಿಭಾಗಾಧಿಕಾರಿಗಳ ಮತ್ತು ಜಿಲ್ಲಾಧಿಕಾರಿಗಳ ಸಮ್ಮೇಳನವನ್ನು ಏರ್ಪಾಡು ಮಾಡಿ, ಸಂಬಂಧಪಟ್ಟ ಶಾಸಕರಿಗೆ ಬೇಕಾದರೆ ಆಹ್ವಾನ ಕೊಡುತ್ತೇನೆ. ಆಗ ತಾವು ಬಂದು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಏನು ತೊಂದರೆಯಾಗಿದೆ ಎಂಬುದನ್ನು ವಿವರವಾಗಿ ಹೇಳಿದರೆ ಅಧಿಕಾರಿಗಳ ಸಮಕ್ಷಮದಲ್ಲಿ ಹೆಚ್ಚಿನ ಕಾರ್ಯಕ್ರಮ ತೆಗೆದುಕೊಂಡು ಒಂದು ವ್ಯವಸ್ಥೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಮಾನ್ಯ ಜಿ. ಬಸವಣ್ಣಪ್ಪನವರು ಮೂರು ತಾಲ್ಲೂಕುಗಳಲ್ಲಿ ಬರಗಾಲಕ್ಕೆ ಜನಗಳು ಒಳಗಾಗಿದ್ದಾರೆ, ಅಲ್ಲಿ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದಾರೆ, ಅದೇ ರೀತಿ, ಮಾನ್ಯ ಮಸಿಯಪ್ಪ, ಶ್ರೀ ಮಂಚೇಗೌಡರು, ಶ್ರೀ ಕೆ. ಪ್ರಭಾಕರ್‌ರವರು ಶ್ರೀ ಅಂದಾನಯ್ಯನವರು ಹೀಗೆ ಸುಮಾರು ೨೫ ಜನ ಮಾತನಾಡಿದ್ದಾರೆ.

ಅಧ್ಯಕ್ಷರು.—೨೬ ಜನ ಮಾತನಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—೨೬ ಜನ ಸದಸ್ಯರು ಇವತ್ತಿನ ದಿವಸ ಮಾತನಾಡಿದ್ದಾರೆ ಪ್ರತಿಯೊಬ್ಬರೂ ಹೇಳಿರುವುದನ್ನು ನಾನು ಪುನ್ಯ ಹೇಳುವುದಕ್ಕೆ ಹೋದರೆ ಒಂದು ಗಂಟೆಯಾಗುತ್ತದೆ

ಶ್ರೀ ಎಚ್. ಎಲ್. ತಿಮ್ಮೇಗೌಡ.—ಫಾಡರ್ ಹೊರಗಡೆ ರಾಜ್ಯಗಳಿಗೆ ಹೋಗುತ್ತಿದೆ, ಅದನ್ನು ತಡೆಹಿಡಿಯುವ ಬಗ್ಗೆ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದನ್ನು ನಾನು ಹೇಳುತ್ತೇನೆ. ಕೆಲವು ಕಡೆ ಎನ್. ಆರ್. ಇ. ಪಿ. ಯಲ್ಲಿ ಹಣ ಇಟ್ಟಿದ್ದೇವೆ, ಎಲ್ಲಾ ಜಿಲ್ಲೆಗಳಲ್ಲಿ ಹಣವಿದೆ. ಅದಕ್ಕೆ ಸರಿಯಾಗಿ ಅಂದರೆ ಜಿಲ್ಲಾಧಿಕಾರಿಗಳು ರೂಲ್ಸ್ ರಿಲ್ಯಾಕ್ಸ್ ಮಾಡಿ ಹೆಚ್ಚಿನ ಕೆಲಸ ತೆಗೆದುಕೊಳ್ಳುವುದಿಲ್ಲ ಎನ್ನತಕ್ಕ ಮಾತನ್ನು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಈಗಾಗಲೇ ನಾನು ಹೇಳಿದ್ದೇನೆ- ಗೈಡ್‌ಲೈನ್ಸ್ ರಿಲ್ಯಾಕ್ಸ್ ಮಾಡಿ ಎಲ್ಲಿ ಪ್ರಾಮುಖ್ಯವಾಗಿ ಮಾಡತಕ್ಕ ಕೆಲಸಗಳಿವೆ ಆ ಪ್ರದೇಶಗಳಲ್ಲಿ ಜಿಲ್ಲಾಧಿಕಾರಿಗಳು ತಮ್ಮ ಡಿಸ್ಕ್ರಿಷನರಿ ಪವರ್ ಉಪಯೋಗ ಮಾಡಿ, ಅಲ್ಲ ರೋಡ್ಸ್ ಆಗಲಿ, ಟ್ಯಾಂಕ್ ವರ್ಕ್ಸ್ ಆಗಲಿ, ಡೀಸಿಲ್ಟಿಂಗ್ ಆಫ್ ಟ್ಯಾಂಕ್ ಆಗಲಿ ಜನರಿಗೆ ಹೆಚ್ಚು ಕೆಲಸ ಕೊಡತಕ್ಕಂತಹ ಯಾವುದೇ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಲು ವ್ಯವಸ್ಥೆ ಮಾಡಬೇಕು ಎಂದು ಹೇಳಿದ್ದೇನೆ ಮತ್ತು ಆ ಕೆಲಸಗಳನ್ನು ಕಂಪ್ಲೀಟ್ ಮಾಡಲು ಆದೇಶ ಕೊಟ್ಟಿದ್ದೇನೆ. ಅದರಲ್ಲಿ ಯಾವ ತೊಂದರೆ ಕೂಡ ಇಲ್ಲ. ಕೂಲಿ ಬಗ್ಗೆ ಕೂಡ ಮಾನ್ಯ ಸದಸ್ಯರು ಹೇಳಿದ್ದಾರೆ. ಇವತ್ತಿನ ದಿವಸ ೫ ರೂಪಾಯಿ ಇದ್ದದನ್ನು ಹೆಚ್ಚಿಸಬೇಕೆಂದು ಹೇಳಿದ್ದಾರೆ. ಅದನ್ನು ನಾವು ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲ. ಈಗ ೫ ರೂ ೭೫ ಪೈಸೆ ಮಾಡಿದ್ದೇವೆ. ಅದಕ್ಕಿಂತಲೂ ಹೆಚ್ಚು ಮಾಡಬೇಕಾದರೆ ಕೇಂದ್ರ ಸರ್ಕಾರದ ಅನುಮತಿ ಪಡೆದು ಹೆಚ್ಚಿಗೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಹೆಚ್ಚು ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಬರಗಾಲ ಪರಿಸ್ಥಿತಿ ಇದ್ದರೆ, ಜನರಿಗೆ ಕೆಲಸವಿಲ್ಲದಿದ್ದರೆ, ಖಂಡಿತವಾಗಿಯೂ ಜನಗಳು ಕೂಲಿಗೆ ಬರುತ್ತಾರೆ, ೫ ರೂಪಾಯಿಗಳನ್ನು ಕೊಟ್ಟರೂ ಬರುತ್ತಾರೆ. ಅನೇಕ ಬರಗಾಲಗಳನ್ನು ನಾವು ನೋಡಿದ್ದೇವೆ. ಅದರ ಅಟೆಂಡೆನ್ಸ್ ನೋಡಿದರೆ

ಗೊತ್ತಾಗುತ್ತದೆ. ನನ್ನ ಹತ್ತಿರ ಮಾಹಿತಿ ಇದೆ, ಸಮಯದ ಅಭಾವದಿಂದ ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅನೇಕ ಕಡೆ ಕೆಲಸಗಳನ್ನು ಪ್ರಾರಂಭ ಮಾಡಿದರೆ ಅಟೆಂಡೆನ್ಸ್ ಇಲ್ಲ, ನಾವು ಜನರಿಗೆ ಕೆಲಸ ಕೊಡಬೇಕು. ಖಂಡಿತವಾಗಿಯೂ ಜನರಿಗೆ ಎಲ್ಲಿ ಕೆಲಸಬೇಕು ಅಲ್ಲಿ ಕೆಲಸ ಕೊಟ್ಟು ಜನರನ್ನು ಬದುಕಿಸಬೇಕು. ಬರಗಾಲವಿರುವ ಕಡೆ ಹೆಚ್ಚಿನ ಕೆಲಸ ತೆಗೆದುಕೊಳ್ಳುತ್ತೇವೆ. ಈ ಬಗ್ಗೆ ನಮಗೆ ದುಡ್ಡಿನ ಕೊರತೆಯಾಗಿಲ್ಲ. ನಮ್ಮ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ಜನರಿಗೆ ಕೆಲಸ ಸಿಗುತ್ತಿಲ್ಲ ಎನ್ನುವ ಅಭಿಪ್ರಾಯ ಬರಬಾರದು. ನಾವು ಹೋದ ಸಲ ಯಾವರೀತಿ ಬರಗಾಲವನ್ನು ತಡೆಗಟ್ಟಿದ್ದೇವೆ, ಜನರಿಗೆ ಯಾವ ರೀತಿಯಲ್ಲಿ ಕೆಲಸ ಕೊಟ್ಟಿದ್ದೇವೆ ಅದೇ ರೀತಿಯಲ್ಲಿ ಅಷ್ಟೇ ಪ್ರಗತಿಯಿಂದ ಅಷ್ಟೇ ದಕ್ಷತೆಯಿಂದ ಇವತ್ತಿನ ದಿವಸ ಕೂಡ ನಾವು ಕೆಲಸ ಮಾಡುತ್ತಿದ್ದೇವೆ. ಅದರ ದುರುಪಯೋಗ ನಡೆಯಬಾರದು ಎನ್ನುವ ದೃಷ್ಟಿಯಿಂದ ನಾವು ಕೆಲವು ಕಂಡೀಷನ್‌ಗಳನ್ನು ಹಾಕಿದ್ದೇವೆ. ಇದೇ ಸದನದಲ್ಲಿ ನಾವು ನೋಡಿದ್ದೇವೆ, ಅನೇಕ ಸಲ ಬರಗಾಲದ ಬಗ್ಗೆ ಅಲ್ಲಿ ದುರುಪಯೋಗವಾಗಿದೆ, ಇಲ್ಲಿ ದುರುಪಯೋಗವಾಗಿದೆ ಅವರಿಗೆ ಶಿಕ್ಷೆ ಕೊಡಿ, ಅಲ್ಲಿ ಹಣ ತಿಂದರು, ಇಲ್ಲಿ ತಿಂದರು ಎಂದು ಹೇಳತಕ್ಕಂಥಾದನ್ನು ನಾವು ಕೇಳಿದ್ದೇವೆ. ಅದಕ್ಕೆ ಅವಕಾಶವಾಗಬಾರದೆನ್ನುವ ದೃಷ್ಟಿಯಿಂದ ಬಹಳ ದಕ್ಷತೆಯಿಂದ ಇವತ್ತಿನ ದಿವಸ ಸರ್ಕಾರ ಕೆಲಸ ಮಾಡುತ್ತಿದೆ. ಹೋದಸಲ ಈ ಸದನದಲ್ಲಿ ಇದರ ಬಗ್ಗೆ ಟೀಕೆ ಟಿಪ್ಪಣಿ ಬಂದಿದೆ. ಈ ಸಾರಿ ಯಾರು ಕೂಡ ಹೆಚ್ಚಿಗೆ ಟೀಕೆ ಟಿಪ್ಪಣಿಯನ್ನು ಮಾಡಿಲ್ಲ. ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡುವುದಕ್ಕಿಂತಲೂ, ಇಡೀ ರಾಜ್ಯದಲ್ಲಿ ಎಸ್. ಆರ್. ಇ. ಪಿ. ಗೆ ಈಗಾಗಲೇ .ಹಣವನ್ನು ಬಿಡುಗಡೆ ಮಾಡಿದ್ದು ಸುಮಾರು ೨ ಕೋಟಿ ೨೬ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನು ಹಣವಿದೆ. ಜನರಿಗೆ ಎಷ್ಟು ಕೆಲಸ ಬೇಕೋ ಅಷ್ಟು ಕೆಲಸವನ್ನು ನಾವು ಒದಗಿಸುತ್ತೇವೆ. ಇದ ಅಲ್ಲದೆ ರಿಲೀಫ್ ಕಾರ್ಯಕ್ರಮದಲ್ಲಿ ಬೋರ್‌ವೆಲ್‌ಗಾಗಲೀ, ಫಾಡರ್‌ಗಾಗಲೀ, ಕುಡಿಯುವ ನೀರು ಟ್ರಾನ್ಸ್‌ಪೋರ್ಟೇಷನ್ ಚಾರ್ಜ್‌ಗಾಗಲೀ ಬೇರೆ ಇನ್ನಿತರೆ ಕೆಲಸಗಳಿಗೆ ಏನು ಹಣ ಕೊಡಬೇಕೋ ಅದನ್ನು ನಾವು ಕೊಡುತ್ತಿದ್ದೇವೆ. ಫಾಡರ್ಸ್‌ಗೆ ಅನೇಕ ಕಡೆಗಳಿಂದ ಬೇಡಿಕೆ ಬಂದಿಲ್ಲ. ಚಿಕ್ಕಮಗಳೂರಿನಿಂದ ಬಂದಿತ್ತು. ಅಲ್ಲಿಗೆ ೨ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಉಳಿದ ಕಡೆ ಕುಡಿಯುವ ನೀರಿನ ಸಲುವಾಗಿ ಬೇಡಿಕೆ ಬಂದಿದೆ, ಅಲ್ಲಿ ೮ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಯಾವ್ಯಾವ ಜಿಲ್ಲೆಯಿಂದ ಏನೇನು ಬೇಕೆಂದು ಅಲ್ಲಿಯ ಜಿಲ್ಲಾಧಿಕಾರಿಗಳು ಬರೆದು ಕೊಂಡಿದ್ದಾರೆ, ಅಂತಹ ಕಡೆ ನಾವು ಕೊಟ್ಟಿದ್ದೇವೆ ಫಾಡರ್‌ಗೆ ಹಣ ಬೇಕೆಂದು ಕೇಳಿದರೆ ಅದನ್ನು ಕೊಡುತ್ತೇವೆ. ನಮ್ಮಲ್ಲಿರತಕ್ಕ ಫಾಡರ್ ಬೇರೆ ಕಡೆ ಹೋಗುತ್ತಿದೆ ಎಂದು ಡಾ॥ ತಿಮ್ಮೇಗೌಡರು ಹೇಳಿದ್ದಾರೆ. ಹೋದ ಸಲ ಬ್ಯಾನ್ ಆರ್ಡರ್ ಇಷ್ಯೂ ಮಾಡಿದ್ದೇವೆ. ಈ ಸಾರಿಯೂ ಕೂಡ ಬ್ಯಾನ್ ಆರ್ಡರ್ ಇಷ್ಯೂಮಾಡಿ ಅಕ್ಕ ಪಕ್ಕದ ರಾಜ್ಯಗಳಾದ ಮಹಾರಾಷ್ಟ್ರ, ಕೇರಳ. ಆಂಧ್ರ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಗೆ ಹೋಗದ ರೀತಿಯಲ್ಲಿ ನಮ್ಮ ರಾಜ್ಯಕ್ಕೆ ಸಹಾಯವಾಗುವ ರೀತಿಯಲ್ಲಿ ಕೆಲಸ ಮಾಡುತ್ತೇವೆ.

ಬೋರ್‌ವೆಲ್‌ಗಳನ್ನು ರಿಪೇರಿ ಮಾಡತಕ್ಕ ಮೆಕಾನಿಕ್‌ಗಳು ಜಾಸ್ತಿ ಇಲ್ಲವೆಂದು ಕೆಲವರು ಹೇಳಿ ಹೇಳಿದ್ದಾರೆ. ಮೊನ್ನೆ ೧೭೫ ತಾಲ್ಲೂಕುಗಳಿಗೂ ಮೆಕಾನಿಕ್‌ಗಳನ್ನು ಅಪಾಯಿಂಟ್ ಮಾಡಿ ಎಂದು ಈಗಾಗಲೇ ಆದೇಶ ಕೊಟ್ಟಿದ್ದೇವೆ. ಈಗಾಗಲೇ ತಾಲ್ಲೂಕಿಗೆ ಒಬ್ಬರಂತೆ ಇದ್ದಾರೆ. ಈಗ ಅಪಾಯಿಂಟ್ ಮಾಡುವುದರಿಂದ ಎಲ್ಲೆಲ್ಲಿ ಬೋರ್‌ವೆಲ್ ಕೆಟ್ಟಿದೆ, ಪಂಪ್ಸ್ ಕೆಟ್ಟಿದೆ ಅಂತಹ ಕಡೆ ರಿಪೇರಿ ಮಾಡತಕ್ಕಂತಹ ವ್ಯವಸ್ಥೆಯನ್ನು ಮಾಡಿದ್ದೇವೆ.

೬–೩೦ ಪಿ. ಎಂ.

ಇನ್ನು ಮಾನ್ಯ ಸದಸ್ಯರು ಸೀಡ್ಸ್ ಬಗ್ಗೆ ಸಹ ಹೇಳಿದ್ದಾರೆ. ಯಾವ ಜಿಲ್ಲೆಗಳಲ್ಲಿ ಸೀಡ್ಸ್ ಕೊರತೆ ಇದೆ, ಅಲ್ಲಿಗೆಲ್ಲಾ ಹೆಚ್ಚಿನ ಪ್ರಮಾಣದಲ್ಲಿ ಹಂಚಬೇಕೆಂದು ಮತ್ತು ಇದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ನಾವು ಈಗಾಗಲೇ ಕರ್ನಾಟಕ ಸೀಡ್ಸ್ ಕಾರ್ಪೋರೇಷನ್‌ಗೆ ಮತ್ತು ನ್ಯಾಷನಲ್ ಸೀಡ್ಸ್ ಕಾರ್ಪೋರೇಷನ್‌ಗೆ ಆದೇಶ ಕೊಟಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ—ಮೊಳಕೆಯಾಗುವ ಬೀಜಗಳನ್ನು ರೈತರಿಗೆ ಒದಗಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ;—ಅಂಥಾದ್ದೇ ಕೊಡುತ್ತೇವೆ. ಫುಡ್ ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ ಅಂತಹ ಕೊರತೆ ಏನೂ ಇಲ್ಲ. ಈಗ ರಾಗಿ, ಜೋಳದ ಕೊರತೆ ಏನೂ ಇಲ್ಲ. ಒಂದು ವೇಳೆ ಎಲ್ಲಿಯಾದರೂ ರಾಗಿಯ ಕೊರತೆ ಇದ್ದರೆ ಅದು ಸಿಗುವ ಕಡೆಯಿಂದ

ತರಿಸಿಕೊಡುತ್ತೇವೆ. ಸದ್ಯದಲ್ಲಿ ಅಂತಹ ಭೀಕರ ಪರಿಸ್ಥಿತಿ ಏನೂ ಬಂದಿಲ್ಲ, ಒಂದು ವೇಳೆ ಫಂಡ್ ಸ್ಕೇರ್ಸಿಟಿಯಾಗಲೀ, ಫಾಡರ್ ಸ್ಕೇರ್ಸಿಟಿಯಾಗಲೀ ನೀರಿನ ಸಮಸ್ಯೆಯಾಗಲೀ ಹಾಗೂ ಜನರಿಗೆ ಕೆಲಸ ಒದಗಿಸಿಕೊಡುವಂತಹ ಸಮಸ್ಯೆಯಾಗಲೀ ಬಂದರೆ ಎಲ್ಲವನ್ನೂ ವ್ಯವಸ್ಥಿತ ರೀತಿಯಿಂದ ಹಾಗೂ ಸಮಗ್ರ ರೀತಿಯಿಂದ ಪರಿಹರಿಸಿ ಜನರಿಗೆ ಸಹಾಯ ಮಾಡಬೇಕೆಂದು ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಅಂತಹ ಸಂದರ್ಭ ಬಂದರೆ ನಾವು ವಾರ್ ಫುಟಿಂಗ್‌ನಲ್ಲಿ ಕೆಲಸ ಮಾಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ. ತಾವುಗಳು ಕೊಟ್ಟಿರುವ ಅನೇಕ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟ ಡಿ.ಸಿ. ಗಳಿಗೆ ಕಾಗದ ಬರೆದು ತೊಂದರೆ ಇರುವ ಕಡೆಗಳಲ್ಲಿ ಸಹಾಯ ಮಾಡುವಂತಹ ಒಂದು ವ್ಯವಸ್ಥೆಯನ್ನು ಮಾಡುತ್ತೇವೆ ಅನ್ನತಕ್ಕಂಥ ಮಾತನ್ನು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Reg : Hunger strike undertaken by students of Agricultural College

ಶ್ರೀ ಎ. ಲಕ್ಷ್ಮೀಸಾಗರ್ ;—ಮಾನ್ಯ ಅಧ್ಯಕ್ಷರೇ, ಇಂದು ಬೆಳಿಗ್ಗೆ ಕೃಷಿ ಪದವೀಧರರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದಾಗ ಶ್ರೀ ಶ್ರೀಕಂಠಯ್ಯನವರು ಈ ವಿಚಾರವನ್ನು ಮಾನ್ಯಮುಖ್ಯಮಂತ್ರಿಗಳೇ ಇಲ್ಲಿ ಪ್ರಸ್ತಾಪ ಮಾಡುತ್ತಾರೆಂದು ಬೆಳಿಗ್ಗೆ ಹೇಳಿದರು. ಈಗ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಜರಿದ್ದಾರೆ. ಹೊರಗಡೆ ಉಪವಾಸ ಮಾಡುತ್ತಿರುವವರ ಪೈಕಿ ಕೆಲವರಿಗೆ ಸುಸ್ತಾದ ಕಾರಣ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಅದಕಾರಣ ಅವರ ಬೇಡಿಕೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮೂಲಕ ಆಶ್ವಾಸನೆ ಕೊಟ್ಟರೆ ಅವರಿಗೆ ಒಳ್ಳೆಯದಾಗಬಹುದೆಂದು ನಾನು ತಿಳಿದು ಕೊಂಡಿದ್ದೇನೆ. ಅವರ ಬೇಡಿಕೆಗಳನ್ನು ಯಾವಾಗ ಇತ್ಯರ್ಥ ಮಾಡುತ್ತೀರಾ ಎಂಬುದನ್ನು ತಾವು ತಿಳಿಸಬೇಕು ಮತ್ತು ಅವರು ಉಪವಾಸ ನಿಲ್ಲಿಸುವ ದೆಸೆಯಲ್ಲಿ ಸರ್ಕಾರದವರು ಒಂದು ಸರಿಯಾದ ನಿಲುವು ತೆಗೆದುಕೊಂಡು ಅವರಿಗೆ ಸೂಕ್ತ ಪರಿಹಾರ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ ;—ಮಾನ್ಯ ಅಧ್ಯಕ್ಷರೇ, ಈಗಾಗಲೇ ಪಶುವೈದ್ಯರ ವೇತನವನ್ನು ಸರ್ಕಾರದವರು ಹೆಚ್ಚು ಮಾಡಿದ್ದಾರೆ. ಇವರ ಒಂದು ವೇತನವನ್ನು ಹೆಚ್ಚು ಮಾಡಿದ ಮೇಲೆ ವ್ಯವಸಾಯ ಪದವೀಧರರನ್ನು, ತೋಟಗಾರಿಕೆ ಪದವೀಧರರನ್ನು ಹಾಗೂ ಮೀನುಗಾರಿಕಾ ಪದವೀಧರರನ್ನು ಬಿಡುವುದಕ್ಕೆ ಬರುವುದಿಲ್ಲವೆಂದು ನನ್ನ ಭಾವನೆ. ಈ ಮೂರು ಗುಂಪಿಗೆ ಸೇರಿದವರು ಉಪವಾಸ ಮಾಡುತ್ತಿದ್ದಾರೆ. ಪಶುವೈದ್ಯರಷ್ಟೇ ನಾವೂ ಸಹ ಓದುವುದರಿಂದ ಅವರಿಗೆ ಕೊಟ್ಟಿರುವ ವೇತನವನ್ನು ನಮಗೂ ಕೊಡಿ ಎಂದ ಕೇಳುತ್ತಿದ್ದಾರೆ. ವೇತನ ಪರಿಷ್ಕರಣಕ್ಕೆ ಸಂಬಂಧಪಟ್ಟಂತೆ ಒಂದು ಸಮಿತಿಯನ್ನು ನೇಮಕ ಮಾಡಿ, ಅದಕ್ಕೆ ಈ ಒಂದು ಜವಾಬ್ದಾರಿಯನ್ನು ವಹಿಸಿದ್ದೇವೆ, ಅವರ ವರದಿ ಬಂದ ನಂತರ ತೀರ್ಮಾನ ಮಾಡುತ್ತೇವೆಂದು ಸರ್ಕಾರದವರು ಹೇಳಿದ ಮೇಲೆ ಇತರೇ ವಿದ್ಯಾರ್ಥಿಗಳು ಸುಮ್ಮನಿದ್ದಾರೆಂದ ನನಗೆ ತಿಳಿದು ಬಂದಿದೆ. ಆದರೆ ಈಗ ಉಪವಾಸ ಮಾಡುತ್ತಿರುವ ವಿದ್ಯಾರ್ಥಿಗಳು ನಾನು ವ್ಯವಸಾಯ ಮಂತ್ರಿಯಾಗಿದ್ದಾಗಲೂ ಸಹ ನನ್ನ ಬಳಿ ಬಂದು ಇದೇ ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಈ ಬಗ್ಗೆ ಒಂದು ತೀರ್ಮಾನ ಕೈಕೊಳ್ಳಬೇಕಾಗುತ್ತದೆಂದು ನಾನು ಅವರಿಗೆ ಹೇಳಿದ್ದುಂಟು. ಈಗ ಪೇ-ಕಮಿಷನ್ ರಿಪೋರ್ಟ್ ವಿಚಾರಬೇಡ. ಈಗ ಸಧ್ಯಕ್ಕೆ ಇವರುಗಳಿಗೆ ಪಶುವೈದ್ಯರಿಗೆ ಕೊಟ್ಟಿರುವ ವೇತನವನ್ನೇ ಕೊಡಲು ವಿಚಾರ ಮಾಡುತ್ತೇವೆಂದು ಹೇಳಿಬಿಟ್ಟರೆ ಅವರು ಉಪವಾಸ ಸತ್ಯಾಗ್ರಹವನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂಬ ವಿಚಾರವನ್ನು ನಾನು ಸರ್ಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ.

ಶ್ರೀ ಆರ್. ಗಂಡೂರಾವ್.—ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆ ತಾನೆ ಅವರುಗಳು ನನ್ನನ್ನು ನೋಡಲು ಬಂದಿದ್ದಾಗ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಿ, ಉಪವಾಸ ಸತ್ಯಾಗ್ರಹವನ್ನು ಏನಿದ್ದರೂ ಕೊನೆಯಲ್ಲಿ ಇಟ್ಟುಕೊಳ್ಳಿ ಎಂದು ನಾನು ಅವರಿಗೆ ಹೇಳಿದೆ, ಪಶುವೈದ್ಯರಿಗೆ ನಾವು ಇದ್ದಕ್ಕಿದ್ದಂತೆ ವೇತನ ಹೆಚ್ಚು ಮಾಡಲಿಲ್ಲ. ಅವರ ಈ ಬೇಡಿಕೆ ೧೯೭೭ರಿಂದಲೂ ಬರುತ್ತಿತ್ತು. ಮನುಷ್ಯರ ಖಾಯಿಲೆಯನ್ನು ಗುಣ ಮಾಡುವ ಡಾಕ್ಟರ್‌ಗಳಿಗೆ ಏನು ಸಂಬಳ ಕೊಡುತ್ತೀರಿ ಅದೇ ಸಂಬಳವನ್ನು ನಮಗೂ ಕೊಡಬೇಕೆಂದು ಪಶುವೈದ್ಯರು ನಾನು ಇನ್‌ಫರ್‌ಮೇಷನ್ ಮಿನಿಸ್ಟರ್ ಆಗುವುದಕ್ಕಿಂತ ಮೊದಲಿನಿಂದಲೂ ಸರ್ಕಾರದ ಮುಂದೆ ಆಗಾಗ್ಗೆ ಬೇಡಿಕೆಯನ್ನು ಇಡುತ್ತಿದ್ದರು. ಇದಕ್ಕೆ ಸಂಬಂಧಪಟ್ಟವರು ಇದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿಕೊಂಡು ಬಂದರು. ನಮ್ಮ ಇಪ್ಪತ್ತು ಅಂಶಗಳ ಕಾರ್ಯ